6. "ಪರಮಾನಂದ" ಪದದಲ್ಲಿರುವ ಸಂಧಿ – (ಸ್ಮರಣೆ – ಸರಳ)

   (ಎ) ಸವರ್ಣದೀರ್ಘ (ಬಿ) ಲೋಪ (ಸಿ) ಆದೇಶ (ಡಿ) ಗುಣ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

7. ಆಳು ಮತ್ತು ಅರಸು ಜೊತೆಯಾಗಿ ನಿಂತು ಮಾತನಾಡುವ ಸ್ಥಳ ಯಾವುದು?(ಸ್ಮರಣೆ – ಸರಳ)
8. ಮಕ್ಕಳ ಆಡುಂಬೊಲ ಯಾವುದು? (ಸ್ಮರಣೆ – ಸರಳ)
9. ಅಜ್ಜಿ ಬೈದಾಗ ಹುಡುಗರು ಏಕೆ ಖುಷಿಯಾಗುತ್ತಿದ್ದರು? (ಗ್ರಹಿಕೆ – ಸರಳ)
10. ಮಳೆ ಬರುವಾಗ ಹಳ್ಳಿಯವರು ಏನು ಮಾಡುತ್ತರೆ? (ಸ್ಮರಣೆ – ಸರಳ)
11. ಮಳೆಗಾಲದಲ್ಲಿ ಅಂಗಳದಲ್ಲಿ ಯಾವ ಯಾವ ಗಿಡಗಳು ಮೊಳೆಯುತ್ತವೆ? (ಸ್ಮರಣೆ – ಸರಳ)
12. ಕರಾವಳಿಯಲ್ಲಿ ಮಳೆಗಾಲದಲ್ಲಿ ಅಂಗಳಕ್ಕೆ ಬರುವ ಜನಪದ ನೃತ್ಯ ಯಾವುದು? (ಸ್ಮರಣೆ – ಸರಳ)
13. ತುಳಸಿಕಟ್ಟೆಯನ್ನು ಅಲಂಕರಿಸುವ ಸಂದರ್ಭಗಳು ಯಾವುವು? (ಸ್ಮರಣೆ – ಸರಳ)
14. ಹಣತೆಗೆ ತುಳಸಿಕಟ್ಟೆಯ ಸಖ್ಯ ಮರಳಿ ದೊರಕುವುದು ಯಾವಾಗ? (ಸ್ಮರಣೆ–ಸರಳ)
15. ಜಗದ ನಿಯಮ ಯಾವುದು? (ಸ್ಮರಣೆ – ಸರಳ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

16. ಮನೆ ಮತ್ತು ಅಂಗಳಗಳಿಗೆ ಇರುವ ವ್ಯತ್ಯಾಸಗಳೇನು? (ಗ್ರಹಿಕೆ – ಸಾಧಾರಣ)
17. ಅಂಗಳದಲ್ಲಿ ಮಕ್ಕಳು ಹೇಗೆ ನಲಿದಾಡುತ್ತಾರೆ? (ಗ್ರಹಿಕೆ – ಸಾಧಾರಣ)
18. ಮಲೆನಾಡಿನಲ್ಲಿ ನಡೆಯುವ ಮದುವೆಗಳಿಗೆ ಅಂಗಳಕ್ಕೂ ಏನು ಸಂಬಂಧ?(ಗ್ರಹಿಕೆ – ಸಾಧಾರಣ)
19. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳ ಹೇಗಿರುತ್ತದೆ? (ಗ್ರಹಿಕೆ – ಸಾಧಾರಣ)

**ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:**

20. ಶ್ರೀನಿಧಿ ಡಿ ಎಸ್ (ಸ್ಮರಣೆ – ಸಾಧಾರಣ)

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

21. "ಬಯಲಂಥ ಅಂಗಳಕ್ಕೆ ಎಲ್ಲರೂ ಸಮಾನರೇ" (ಅಭಿವ್ಯಕ್ತಿ – ಕಠಿಣ)
22. "ಮಳೆಗಾಲದಲ್ಲಿ ಅಂಗಳ ಅನಾಥ" (ಅಭಿವ್ಯಕ್ತಿ – ಕಠಿಣ)
23. "ಕಟ್ಟೆಯ ಮೇಲಿನ ದೀಪವು ಅಂಗಳದ ನಕ್ಷತ್ರ" (ಅಭಿವ್ಯಕ್ತಿ – ಕಠಿಣ)
24. "ಅಂಗಳ ಮಾತ್ರವೇ ಹಳೆಯದು ಎನ್ನಿಸುವುದೋ ಏನೋ!" (ಅಭಿವ್ಯಕ್ತಿ – ಕಠಿಣ)
25. "ಅಂಗಳದ ಹುಲಿದನದ ಆಟವು ಮೊಬೈಲ್ ಫೋನಿಗೆ ವರ್ಗಾವಣೆಯಾಗಿದೆ"(ಅಭಿವ್ಯಕ್ತಿ – ಕಠಿಣ)

**ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;**

26. ಅಂಗಳವೆಂಬುದು ಲೇಖಕರ ಬಾಲ್ಯದ ನೆನಪುಗಳೊಂದಿಗೆ ಹೇಗೆ ಬೆಸೆದುಕೊಂಡಿದೆ? (ಅಭಿವ್ಯಕ್ತಿ – ಕಠಿಣ)
27. ಬೇಸಿಗೆ ಕಾಲದಲ್ಲಿ ಅಂಗಳದ ಚಿತ್ರಣ ಹೇಗಿರುತ್ತದೆ? (ಅಭಿವ್ಯಕ್ತಿ – ಕಠಿಣ)
28. ಮಳೆಗಾಲದ ಅಂಗಳದ ಚಿತ್ರಣ ಹೇಗಿರುತ್ತದೆ? (ಅಭಿವ್ಯಕ್ತಿ – ಕಠಿಣ)
29. ಅಂಗಳವು ಈಗಿನ ದಿನಗಳಲ್ಲಿ ಹೇಗೆ ಬದಲಾಗಿದೆ? (ಅಭಿವ್ಯಕ್ತಿ – ಕಠಿಣ)

## <u>ಪದ್ಯ ಭಾಗ</u>

## 5. ತೂಗಿ ತೂಗಿ ಮರಗಳೇ

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ;**

| ಪ್ರಶ್ನೆಗಳು/ಅಂಕಗಳು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 06 | 09 | 04 | 01 |
| ಅಂಕಗಳು | 11 | 11 | 13 | 03 |

ಪ್ರಶ್ನಾನುಸಾರ ಪ್ರಾಮುಖ್ಯತೆ;

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 04 | 04 |
| 2 | ಕಿರು ಉತ್ತರ-1 (01 ಅಂಕ) | 07 | 07 |
| 3 | ಕಿರು ಉತ್ತರ-2 (02 ಅಂಕಗಳ) | 02 | 04 |
| 4 | ದೀರ್ಘ ಉತ್ತರ-1 (03 ಅಂಕಗಳ) | 05 | 15 |
| 5 | ದೀರ್ಘ ಉತ್ತರ-2 (04 ಅಂಕಗಳ) | 02 | 08 |
| 6 | ದೀರ್ಘ ಉತ್ತರ-3 (05 ಅಂಕಗಳ) | - | - |

************

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ;**

1. "ಓಲೆ" ಪದದ ಸಮನಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಒಲೆ (ಬಿ) ಕಿವಿಯೋಲೆ (ಸಿ) ಪೇಪರ್ (ಡಿ) ಪತ್ರ

2. ಕೆಳಗಿನಪದಗಳಲ್ಲಿ ಬಹುವಚನ ಪದ – (ಸ್ಮರಣೆ – ಸರಳ)

   (ಎ) ಹಣ್ಣು (ಬಿ) ಹೂವು (ಸಿ) ಮರಗಳು (ಡಿ) ತ್ಯಾಗ

3. "ಅಹಿಂಸೆ" ಪದದ ವಿರುದ್ಧಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಅಹಿಂದ (ಬಿ) ಪ್ರತಿಹಿಂಸೆ (ಸಿ) ಹಿಂಸೆ (ಡಿ) ಹಿಂಸಾ

4. " ಆಕಾಶ" ಪದದ ತದ್ಭವ ರೂಪ – (ಸ್ಮರಣೆ – ಸರಳ)

   (ಎ) ಅಗಸ (ಬಿ) ಆಗಸ (ಸಿ) ಮುಗಿಲು (ಡಿ) ನಭ

5. "ತಮ" ಪದದ ಸಮನಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಕತ್ತಲು (ಬಿ) ರಾತ್ರಿ (ಸಿ) ತಮ್ಮ (ಡಿ) ಅಮ್ಮ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

6. ಕವಿ ಯಾವುದನ್ನು ಇಳೆಗೆ ಇಳಿದ ವರಗಳೆಂದು ಕರೆದಿದ್ದಾರೆ? (ಸ್ಮರಣೆ – ಸರಳ)
7. ಕವಿಯ ಪ್ರಕಾರ ಸ್ವರಗಳು ಎಲ್ಲಿ ಮೂಡಿಬಂದಿದೆ? (ಗ್ರಹಿಕೆ – ಸರಳ)
8. ಕವಿ ಮರಗಳಿಗೆ ಎಂತಹ ಮನಸ್ಸಿದೆ ಎಂದಿದ್ದಾರೆ? (ಗ್ರಹಿಕೆ – ಸರಳ)
9. ಕವಿಯ ಪ್ರಕಾರ ಮರಗಳು ಯಾರಿಗೆ ನೆಲೆ ನೀಡಿವೆ? (ಗ್ರಹಿಕೆ – ಸರಳ)
10. ಮರಗಳು ಔದಾರ್ಯದ ರೂಪದಲ್ಲಿ ನಮಗೇನು ನೀಡುತ್ತವೆ? (ಸ್ಮರಣೆ – ಸರಳ)
11. ಕವಿಯ ಪ್ರಕಾರ ಮರಗಳು ಯಾವ ಮೌಲ್ಯಗಳನ್ನು ಸಂಕೇತಿಸುತ್ತವೆ? (ಗ್ರಹಿಕೆ –ಸಾಧಾರಣ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

12. ಮರಗಳು "ಪ್ರಕೃತಿ ಬರೆದ ಓಲೆ" ಎಂಬುದನ್ನು ಕವಿ ಹೇಗೆ ವರ್ಣಿಸಿದ್ದಾರೆ? (ಗ್ರಹಿಕೆ – ಸಾಧಾರಣ)
13. ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ?(ಗ್ರಹಿಕೆ – ಸಾಧಾರಣ)
14. ಮರಗಳು ಯಾವುದರ ಪ್ರತೀಕವಾಗಿವೆ. ಹೇಗೆ? (ಗ್ರಹಿಕೆ – ಕಠಿಣ)

**ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:**

15. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ (ಸ್ಮರಣೆ – ಸಾಧಾರಣ)

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

16. "ಪ್ರಕೃತಿ ಬರೆದ ಓಲೆಯೇ" (ಅಭಿವ್ಯಕ್ತಿ – ಕಠಿಣ)
17. "ಹೂ ಹಣ್ಣು ಸುರಿವಿರಿ" (ಅಭಿವ್ಯಕ್ತಿ – ಕಠಿಣ)
18. "ಸತ್ಯ, ತ್ಯಾಗ, ಅಹಿಂಸೆಯೆ ನಿತ್ಯವಾದ ನಿಲುವೇ!" (ಅಭಿವ್ಯಕ್ತಿ – ಕಠಿಣ)

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:**

19. ಆಕಾಶಕೆ ತುಡಿಯುವಾ ನೆಲದಾಳದ ಕನಸೇ (ಪ್ರಶಂಸೆ – ಸಾಧಾರಣ)

ನೀಡಲೆಂದು ಫಲಿಸುವಾ ಋಷಿಸಮಾನ ಮನಸೇ,
ಕಡಿದರೂ ಕರುಣೆ ತೋರಿ ಚಿಗುರುವಾ ಗೆಲವೇ
ಸತ್ಯ ತ್ಯಾಗ ಅಹಿಂಸೆಯೇ ನಿತ್ಯವಾದ ನಿಲುವೇ!

**ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;**

20. “ತೂಗಿ ತೂಗಿ ಮರಗಳೇ” ಕವಿತೆಯ ಸಾರಾಂಶವನ್ನು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿರಿ.

(ಅಭಿವ್ಯಕ್ತಿ – ಕಠಿಣ)

**6. ಮಳೆ ಬರಲಿ**

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ;**

| ಪ್ರಶ್ನೆಗಳು/ಅಂಕಗಳು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 10 | 04 | 04 | - |
| ಅಂಕಗಳು | 15 | 07 | 13 | - |

ಪ್ರಶ್ನಾನುಸಾರ ಪ್ರಾಮುಖ್ಯತೆ;

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 03 | 03 |
| 2 | ಕಿರು ಉತ್ತರ-1 (01 ಅಂಕ) | 06 | 06 |
| 3 | ಕಿರು ಉತ್ತರ-2 (02 ಅಂಕಗಳ) | 03 | 06 |
| 4 | ದೀರ್ಘ ಉತ್ತರ-1 (03 ಅಂಕಗಳ) | 04 | 12 |
| 5 | ದೀರ್ಘ ಉತ್ತರ-2 (04 ಅಂಕಗಳ) | 02 | 08 |
| 6 | ದೀರ್ಘ ಉತ್ತರ-3 (05 ಅಂಕಗಳ) | - | - |

************

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ;**

1. “ಹಳ್ಳಕೊಳ್ಳ” ಪದವು ಇದಕ್ಕೆ ಉದಾಹರಣೆಯಾಗಿದೆ – (ಸ್ಮರಣೆ – ಸರಳ)

   (ಎ) ದ್ವಿರುಕ್ತಿ (ಬಿ) ನುಡಿಗಟ್ಟು (ಸಿ) ಜೋಡುನುಡಿ (ಡಿ) ಅನುಕರಣಾವ್ಯಯ

2. “ಬಾಯಾರು” ಪದದಲ್ಲಿರುವ ಸಂಧಿ – (ಸ್ಮರಣೆ – ಸರಳ)

   (ಎ) ಆಗಮ (ಬಿ) ಲೋಪ (ಸಿ) ಗುಣ (ಡಿ) ಆದೇಶ

3. “ಏಳು” ಪದದ ವಿರುದ್ಧಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಬೀಳು (ಬಿ) ಕಟ್ಟು (ಸಿ) ಬಿಡೆವು (ಡಿ) ಕೇಡು

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

4. ರೈತರ ಬದುಕು ಹಸನಾಗುವುದು ಯಾವಾಗ? (ಸ್ಮರಣೆ – ಸರಳ)
5. ರೈತರಿಗೆ ಸುಖ ನಿದ್ದೆಗಳು ಯಾವಾಗ ಸಿಗುತ್ತವೆ? (ಸ್ಮರಣೆ – ಸರಳ)
6. ಕೆರೆ ಹಳ್ಳ ಬಾವಿಗಳಿಗೆ ಬಾಯಾರಿಕೆ ಯಾವಾಗ ಆಗುವುದು? (ಸ್ಮರಣೆ – ಸರಳ)
7. ನೊಂದ ಬಯಲುಗಳು, ಬೆಂದ ಬೆಟ್ಟಗಳು ಯಾವಾಗ ತಂಪಾಗುವುದು? (ಸ್ಮರಣೆ – ಸರಳ)
8. ಕವಯಿತ್ರಿ ಮಳೆ ಬಂದು ನಿಂತಾಗ ನೆಲ ಮುಗಿಲು ಹೇಗೆ ಕಾಣುತ್ತವೆ ಎಂದಿದ್ದಾರೆ? (ಗ್ರಹಿಕೆ – ಸರಳ)
9. ನೊಂದು ಬೆಂದು ಬಾಯಾರಿದ ಪ್ರಕೃತಿಯ ಅಂಶಗಳಾವುವು? (ಸ್ಮರಣೆ –ಸಾಧಾರಣ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

10. ಮಳೆ ಯಾವ ಯಾವ ನಷ್ಟಗಳನ್ನು ಉಂಟುಮಾಡದಿರಲಿ ಎಂದು ಕವಯಿತ್ರಿ ಆಶಿಸಿದ್ದಾರೆ? (ಗ್ರಹಿಕೆ – ಸಾಧಾರಣ)
11. ವಿಪರಿತ ಮಳೆಯಿಂದ ಯಾರ ಮನೆಗಳಿಗೆ ಹೆಚ್ಚು ಹಾನಿಯಾಗಿದೆ? ಏಕೆ? (ಗ್ರಹಿಕೆ – ಸಾಧಾರಣ)
12. ಮಳೆಯಿಂದ ಯಾವ ಯಾವ ಸುಖಗಳು ಸಿಗಲಿ ಎಂದು ಕವಯಿತ್ರಿ ಆಶಿಸುತ್ತಾರೆ? (ಗ್ರಹಿಕೆ – ಸಾಧಾರಣ)

**ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:**

13. ಸವಿತಾ ನಾಗಭೂಷಣ (ಸ್ಮರಣೆ – ಸಾಧಾರಣ)

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

14. "ರೈತರ ಸುಖ ನಿದ್ದೆಗಳನ್ನು ಕಸಿದುಕೊಳ್ಳದಿರಲಿ" (ಅಭಿವ್ಯಕ್ತಿ – ಕಠಿಣ)
15. "ಹೊದೆಯಲು ಬೆಚ್ಚನೆಯ ಕಂಬಳಿ ಎಲ್ಲರಿಗೂ ಸಿಗಲಿ" (ಅಭಿವ್ಯಕ್ತಿ – ಕಠಿಣ)
16. "ಕೆರೆಬಾವಿ ಹಳ್ಳಕೊಳ್ಳಗಳಿಗೆ ಬರಲಿ ಮಳೆ" (ಅಭಿವ್ಯಕ್ತಿ – ಕಠಿಣ)

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:**

17. ನೊಂದ ------------------- (ಸ್ಮರಣೆ – ಸಾಧಾರಣ)

---------------------------

---------------------------

---------------------------

--------------- ಮಳೆ ಬರಲಿ.

**ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;**

18. ಕವಿತೆಯಲ್ಲಿ ವ್ಯಕ್ತವಾಗಿರುವ ಮಳೆಯ ಅನುಕೂಲ ಮತ್ತು ಅನಾನುಕೂಲಗಳನ್ನು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿರಿ. (ಅಭಿವ್ಯಕ್ತಿ – ಕಠಿಣ)

## 7. ಹಕ್ಕಿಗಳು

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ;**

| ಪ್ರಶ್ನೆಗಳು/ಅಂಕಗಳು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 05 | 09 | 06 | 01 |
| ಅಂಕಗಳು | 07 | 12 | 20 | 03 |

ಪ್ರಶ್ನಾನುಸಾರ ಪ್ರಾಮುಖ್ಯತೆ;

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 04 | 04 |
| 2 | ಕಿರು ಉತ್ತರ-1 (01 ಅಂಕ) | 06 | 06 |
| 3 | ಕಿರು ಉತ್ತರ-2 (02 ಅಂಕಗಳ) | 03 | 06 |
| 4 | ದೀರ್ಘ ಉತ್ತರ-1 (03 ಅಂಕಗಳ) | 06 | 18 |
| 5 | ದೀರ್ಘ ಉತ್ತರ-2 (04 ಅಂಕಗಳ) | 02 | 08 |
| 6 | ದೀರ್ಘ ಉತ್ತರ-3 (05 ಅಂಕಗಳ) | - | - |

************

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ;**

1. "ವರ್ಣ" ಪದದ ಸಮನಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಪಂಗಡ (ಬಿ) ಬಣ್ಣ (ಸಿ) ಪರ್ಣ (ಡಿ) ವರ್ಗ

2. "ನೋವು" ಪದದ ವಿರುದ್ಧಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ದುಃಖ (ಬಿ) ಸಂಕಟ (ಸಿ) ನಲಿವು (ಡಿ) ಮೋಹ

3. ಕೆಳಗಿನ ಪದಗಳಲ್ಲಿ ಕ್ರಿಯಾಪದವನ್ನು ಗುರುತಿಸಿ – (ಸ್ಮರಣೆ – ಸರಳ)

(ಎ) ಬಾಲಕರು (ಬಿ) ಕುರಿಯನ್ನು (ಸಿ) ಕಾಯುವರು (ಡಿ) ಒಮ್ಮೆಲೆ

4. "ಮರವು" ಪದದಲ್ಲಿರುವ ವಿಭಕ್ತಿ ಪ್ರತ್ಯಯ – (ಸ್ಮರಣೆ – ಸರಳ)

(ಎ) ಪ್ರಥಮಾ (ಬಿ) ಷಷ್ಠೀ (ಸಿ) ಸಪ್ತಮೀ (ಡಿ) ಪಂಚಮೀ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

5. ಕವಿ ಪ್ರಕಾರ ನಾವುಗಳು ಯಾವ ನೋವನ್ನು ಕಂಡವರು ಎಂದು ಹೇಳಿದ್ದಾರೆ? (ಗ್ರಹಿಕೆ – ಸರಳ)
6. ಕವಿಯು ಕುರಿದನಗಳನ್ನು ಕಾಯ್ದ ಬಾಲಕರಿಗೆ ಯಾವುದು ಸಿಗಲಿಲ್ಲ ಎಂದಿದ್ದಾರೆ?(ಗ್ರಹಿಕೆ – ಸರಳ)
7. ಗಿಡಗಳ ಜೊತೆ ಬೆಳೆದವರಿಗೆ ಸಿಗದ ಭಾಗ ಯಾವುದೆಂದು ಕವಿಯ ಅಭಿಪ್ರಾಯ? (ಗ್ರಹಿಕೆ – ಸರಳ)
8. ಎಂಜಲು ತೊಳೆದವರಿಗೆ ಏನು ಸಿಗಬೇಕಾಗಿತ್ತು ಎಂದು ಕವಿಯವರ ಅನಿಸಿಕೆ? (ಗ್ರಹಿಕೆ – ಸರಳ)
9. ಕವಿಯ ಪ್ರಕಾರ ಬಾಲಕರು ಚಳಿಯನು ತಡೆಯದೆ ಕುಸಿದುದು ಏಕೆ? (ಗ್ರಹಿಕೆ – ಸರಳ)
10. ಬಾಲಕರ ಕನಸುಗಳು ಹೇಗೆ ಕಮರಿ ಹೋಗಿವೆ? (ಗ್ರಹಿಕೆ – ಸರಳ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

11. ಹಕ್ಕಿಗಳ ಕವಿತೆಯಲ್ಲಿ ಬಾಲಕರು ಯಾವ ಯಾವ ಅವಕಾಶಗಳಿಂದ ವಂಚಿತರಾಗಿದ್ದಾರೆ? (ಗ್ರಹಿಕೆ – ಸಾಧಾರಣ)
12. ನೋವುಂಡ ಬಾಲಕರಿಗೆ ಯಾವ ಯಾವ ಅನುಭವಗಳಾಗಿವೆ? (ಗ್ರಹಿಕೆ – ಸಾಧಾರಣ)
13. ಬಾಲಕರ ಹಾಡು ಮತ್ತು ನಾಡು ಯಾವ ಸ್ವರೂಪದ್ದಾಗಿದೆ? ಏಕೆ? (ಗ್ರಹಿಕೆ – ಸಾಧಾರಣ)

**ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:**

14. ಡಾ. ಸಿದ್ದಲಿಂಗಯ್ಯ (ಸ್ಮರಣೆ – ಸಾಧಾರಣ)

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

15. "ಹಾಲನು ಕುಡಿಯದೆ ಹೋದವರು" (ಅಭಿವ್ಯಕ್ತಿ – ಕಠಿಣ)
16. "ಗಂಜಿಯ ಕಾಣದೆ ದುಡಿದವರು" (ಅಭಿವ್ಯಕ್ತಿ – ಕಠಿಣ)
17. "ಕಮರುವ ಬಣ್ಣದ ಕನಸುಗಳು" (ಅಭಿವ್ಯಕ್ತಿ – ಕಠಿಣ)
18. "ಬೆಳಕನು ಅರಸುವ ಹಕ್ಕಿಗಳು" (ಅಭಿವ್ಯಕ್ತಿ – ಕಠಿಣ)

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:**

19. ಎಂಜಲು ತೊಳೆದು ಗಂಜಲ ಬಳಿದು (ಪ್ರಶಂಸೆ – ಸಾಧಾರಣ)
    ಗಂಜಿಯ ಕಾಣದೆ ದುಡಿದವರು

ಗುಡಿಗೋಪುರದ ಬಣ್ಣಗಳಾಗಿ

ಚಳಿಯನು ತಡೆಯದೆ ಕುಸಿದವರು

**ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;**

20. ಬಾಲಕರು ನೋವಿನ ಹಾಡು, ಕತ್ತಲ ನಾಡು ಎಂದು ಕವಿ ಏಕೆ ಕರೆದಿದ್ದಾರೆ? ವಿವರಿಸಿ.

    (ಅಭಿವ್ಯಕ್ತಿ – ಕಠಿಣ)

21. ಹಕ್ಕಿಗಳು ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು? ಸ್ಪಷ್ಟಪಡಿಸಿ.

    (ಅಭಿವ್ಯಕ್ತಿ – ಕಠಿಣ)

## 8. ಗೌರವಿಸು ಜೀವನವ

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ;**

| ಪ್ರಶ್ನೆಗಳು/ಅಂಕಗಳು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 09 | 07 | 05 | 01 |
| ಅಂಕಗಳು | 14 | 11 | 16 | 03 |

ಪ್ರಶ್ನಾನುಸಾರ ಪ್ರಾಮುಖ್ಯತೆ;

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 05 | 05 |
| 2 | ಕಿರು ಉತ್ತರ-1 (01 ಅಂಕ) | 05 | 05 |
| 3 | ಕಿರು ಉತ್ತರ-2 (02 ಅಂಕಗಳ) | 04 | 08 |
| 4 | ದೀರ್ಘ ಉತ್ತರ-1 (03 ಅಂಕಗಳ) | 06 | 18 |
| 5 | ದೀರ್ಘ ಉತ್ತರ-2 (04 ಅಂಕಗಳ) | 02 | 08 |
| 6 | ದೀರ್ಘ ಉತ್ತರ-3 (05 ಅಂಕಗಳ) | - | - |

************

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ;**

1. "ತೃಣ" ಪದದ ಸಮನಾರ್ಥಕ ರೂಪ – (ಸ್ಮರಣೆ – ಸರಳ)

   (ಎ) ಹುಲ್ಲು (ಬಿ) ಸ್ವಲ್ಪ (ಸಿ) ಪ್ರಮಾಣ (ಡಿ) ಹಲ್ಲು

2. ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದಿರುವ ಪದ – (ಸ್ಮರಣೆ – ಸರಳ)

(ಎ) ಕಣ್ಣು (ಬಿ) ನೇತ್ರ (ಸಿ) ನಯನ (ಡಿ) ತೃಣ

3. "ವಿವೇಕ" ಪದದ ವಿರುದ್ಧಾರ್ಥಕ ರೂಪ – (ಸ್ಮರಣೆ – ಸರಳ)

(ಎ) ವಿವೇಗ (ಬಿ) ಸುವಿವೇಕ (ಸಿ) ಅವಿವೇಕ (ಡಿ) ಸಂಯಮ

4. "ಆತ್ಮೋನ್ನತಿ" ಪದದಲ್ಲಿರುವ ಸಂಧಿ – (ಸ್ಮರಣೆ – ಸರಳ)

(ಎ) ಗುಣ (ಬಿ) ವೃದ್ಧಿ (ಸಿ) ಸವರ್ಣದೀರ್ಘ (ಡಿ) ಯಣ್

5. "ದಿನಪ" ಪದದ ಸಮನಾರ್ಥಕ ರೂಪ – (ಸ್ಮರಣೆ – ಸರಳ)

(ಎ) ಗುರು (ಬಿ) ಸೂರ್ಯ (ಸಿ) ಚಂದ್ರ (ಡಿ) ಶುಕ್ರ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

6. ಡಿವಿಜಿಯವರು ಯಾವುದನ್ನು ಗೌರವಿಸಬೇಕು ಎಂದಿದ್ದಾರೆ? (ಸ್ಮರಣೆ – ಸರಳ)
7. ಆತ್ಮೋನ್ನತಿಗೆ ದಾರಿ ಯಾವುದೆಂದು ಡಿವಿಜಿ ಹೇಳಿದ್ದಾರೆ? (ಸ್ಮರಣೆ – ಸರಳ)
8. ಜೀವನ ಮತ್ತು ಚೇತನವನ್ನು ಏಕೆ ಗೌರವಿಸಬೇಕು? (ಗ್ರಹಿಕೆ – ಸರಳ)
9. ಕಣ್ಣಿನ ಪುಣ್ಯ ಯಾವುದೆಂದು ಕವಿ ಹೇಳಿದ್ದಾರೆ? (ಸ್ಮರಣೆ – ಸರಳ)
10. ಡಿವಿಜಿಯವರು ಮಾನವ ಹೇಗೆ ಬಾಳಬೇಕು ಎಂದಿದ್ದಾರೆ? (ಗ್ರಹಿಕೆ – ಸರಳ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

11. ಡಿವಿಜಿಯವರು ಜೀವನ ಯಾವಾಗ ಸಮೃದ್ಧವಾಗುತ್ತದೆ ಎಂದಿದ್ದಾರೆ? (ಗ್ರಹಿಕೆ – ಸಾಧಾರಣ)
12. ತೃಣದ ಹಸಿರಿಗೆ ಕಾರಣವಾದ ಅಂಶಗಳು ಯಾವುವು ಎಂದು ಡಿವಿಜಿ ಹೇಳಿದ್ದಾರೆ? (ಗ್ರಹಿಕೆ – ಸಾಧಾರಣ)
13. ಬ್ರಹ್ಮಾನುಭವವನ್ನು ಪಡೆಯುವುದು ಹೇಗೆ ಎಂದು ಡಿವಿಜಿಯವರು ಹೇಳಿದ್ದಾರೆ? (ಗ್ರಹಿಕೆ – ಸಾಧಾರಣ)
14. ಡಿವಿಜಿಯವರ ಪ್ರಕಾರ ಮೃತ್ಯು ಯಾವಾಗ ಅಲ್ಪವಾಗಿ ತೋರುತ್ತದೆ? (ಗ್ರಹಿಕೆ – ಸಾಧಾರಣ)

**ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:**

15. ಡಿ ವಿ ಗುಂಡಪ್ಪ (ಸ್ಮರಣೆ – ಸಾಧಾರಣ)

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

16. "ಆರದೋ ಜಗವೆಂದು ಭೇದವೆಣಿಸದಿರು" (ಅಭಿವ್ಯಕ್ತಿ – ಕಠಿಣ)
17. "ಗುಣಕೆ ಕಾರಣವೊಂದೆ?" (ಅಭಿವ್ಯಕ್ತಿ – ಕಠಿಣ)

18. "ಬ್ರಹ್ಮಾನುಭವಿಯಾಗೊ" (ಅಭಿವ್ಯಕ್ತಿ – ಕಠಿಣ)

19. "ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು" (ಅಭಿವ್ಯಕ್ತಿ – ಕಠಿಣ)

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:**

20. ತೃಣಕೆ ಹಸಿರೆಲ್ಲಿಯದು? ಬೇರಿನದೇ? ಮಣ್ಣಿನದೇ? | (ಪ್ರಶಂಸೆ – ಸಾಧಾರಣ)
ದ್ಯುಪನದೆ? ಚಂದ್ರನದೆ? ನೀರಿನದೆ? ನನದೆ? ||
ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು |
ಗುಣಕೆ ಕಾರಣವೊಂದೆ? ಮಂಕುತಿಮ್ಮ

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:**

21. ಗೌರವಿಸು ------------------------------- (ಸ್ಮರಣೆ – ಸಾಧಾರಣ)
-----------------------------------------
-----------------------------------------
--------------------------- ಮಂಕುತಿಮ್ಮ

**ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;**

22. ಗೌರವಿಸು ಜೀವನದ ಕವಿತೆಯಲ್ಲಿ ಅಂತರ್ಗತವಾಗಿರುವ ಕವಿಯ ಭಾವನೆಗಳನ್ನು ವಿವರಿಸಿ.
(ಅಭಿವ್ಯಕ್ತಿ – ಕಠಿಣ)

↔

**<u>ಪಠ್ಯ ಪೂರಕ ಅಧ್ಯಯನ</u>**

**3. ಸರ್ ಎಂ ವಿಶ್ವೇಶ್ವರಯ್ಯ**

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ;**

| **ಪ್ರಶ್ನೆಗಳು/ಅಂಕಗಳು** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** |
|---|---|---|---|---|
| ಪ್ರಶ್ನೆಗಳು | 04 | 05 | - | - |
| ಅಂಕಗಳು | 05 | 09 | - | - |

ಪ್ರಶ್ನಾನುಸಾರ ಪ್ರಾಮುಖ್ಯತೆ;

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|

| | | | |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | - | - |
| 2 | ಕಿರು ಉತ್ತರ-1 (01 ಅಂಕ) | 04 | 04 |
| 3 | ಕಿರು ಉತ್ತರ-2 (02 ಅಂಕಗಳ) | 05 | 10 |

************

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಸರ್ ಎಂ ವಿಶ್ವೇಶ್ವರಯ್ಯನವರು ಎಲ್ಲಿ, ಯಾವಾಗ ಜನಿಸಿದರು? (ಸ್ಮರಣೆ – ಸರಳ)
2. ಸರ್ ಎಂ ವಿಶ್ವೇಶ್ವರಯ್ಯನವರ ತಂದೆ-ತಾಯಿಯ ಹೆಸರೇನು? (ಸ್ಮರಣೆ – ಸರಳ)
3. ಸರ್ ಎಂ ವಿಶ್ವೇಶ್ವರಯ್ಯನವರ ಗುರುಭಕ್ತಿಯನ್ನು ಮೆಚ್ಚುತ್ತಿದ್ದ ಗುರುಗಳು ಯಾರು? (ಗ್ರಹಿಕೆ – ಸರಳ)
4. ಸರ್ ಎಂ ವಿಶ್ವೇಶ್ವರಯ್ಯನವರಿಗೆ ಭಾರತ ಸರ್ಕಾರ ನೀಡಿದ ಅತ್ಯುತ್ತಮ ಪ್ರಶಸ್ತಿ ಯಾವುದು? (ಸ್ಮರಣೆ – ಸಾಧಾರಣ)

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

5. ಸರ್ ಎಂ ವಿಶ್ವೇಶ್ವರಯ್ಯನವರ ಸಮಕಾಲೀನರು ಯಾರು? (ಸ್ಮರಣೆ – ಸಾಧಾರಣ)
6. ಸರ್ ಎಂ ವಿಶ್ವೇಶ್ವರಯ್ಯನವರ ಗುರುಭಕ್ತಿಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ತಿಳಿಸಿ (ಗ್ರಹಿಕೆ – ಸಾಧಾರಣ)
7. "ಸರ್ ಎಂ ವಿಶ್ವೇಶ್ವರಯ್ಯನವರ ಕೀರ್ತಿಯು ತುಂಬಾ ಅಪಾರವಾದದ್ದು" ತಿಳಿಸಿ. (ಗ್ರಹಿಕೆ – ಕಠಿಣ)
8. "ಸರ್ ಎಂ ವಿಶ್ವೇಶ್ವರಯ್ಯನವರ ವ್ಯಕ್ತಿತ್ವದ ವಿಶೇಷತೆಗಳೇನು? (ಗ್ರಹಿಕೆ – ಕಠಿಣ)

**ಮಾದರಿ ಉತ್ತರಗಳು**

**<u>ಗದ್ಯ ಭಾಗ</u>**

**1. ಬುದ್ಧನ ಸಲಹೆ**

**ಬಹು ಆಯ್ಕೆ ಪ್ರಶ್ನೆಗಳು;**

1. (ಎ) ಸ್ವರ
2. (ಡಿ) 13
3. (ಬಿ) ಅನುಸಾಸಿಕ
4. ((ಸಿ) ಪ್ರಬಲ
5. (ಸಿ) ನಿಸ್ವಾರ್ಥ

**ಒಂದು ಅಂಕದ ಪ್ರಶ್ನೆಗಳು;**

6. ಕಪಿಲವಸ್ತುವಿನ ಅರಸು ಮನೆತನದ ಹೆಸರು ಶಾಕ್ಯ.
7. ಸಿದ್ಧಾರ್ಥನ ತಂದೆಯ ಹೆಸರು ಶುದ್ಧೋಧನ.
8. ಗಂಗಾನದಿ ಬಂಗಾಳ ಸಮುದ್ರವನ್ನು ಸೇರುತ್ತದೆ.
9. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಹರಿಯುವ ನದಿಯ ಹೆಸರು ಗಂಗಾನದಿ.
10. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಿದವನು ಭಗವಾನ್ ಬುದ್ಧ.
11. ವತ್ಸ ಮತ್ತು ಮಗಧ ರಾಜ್ಯದವರು ಬುದ್ಧನ ಸಲಹೆ ಸತ್ಯವೆನಿಸಿ ಯುದ್ಧವನ್ನು ನಿಲ್ಲಿಸಿದರು.
12. ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಮನುಷ್ಯನ ರಕ್ತ.
13. ಬುದ್ಧದೇವನು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಪ್ರಕೃತಿ ಎಂಬ ವರವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

14. ಗಂಗಾನದಿಯ ನೀರಿನಿಂದ ವತ್ಸ ಮತ್ತು ಮಗಧ ರಾಜ್ಯಗಳ ನೆಲ ಸಸ್ಯ ಶ್ಯಾಮಲವಾಗಿತ್ತು. ಎತ್ತ ನೋಡಿದರೂ ಹಸಿರು ತುಂಬಿ, ಬೆಳೆ ಬೆಳೆದು ಸುಭಿಕ್ಷತೆ ನೆಲೆಸಿತ್ತು. ಗಂಗಾನದಿಯು ರಾಜ್ಯಗಳ ಜನರಿಗೆ ಅನ್ನ ನೀಡಿ ಸುಖ ಸಮೃದ್ಧಿಯನ್ನು ನೀಡಿದ ಕಾರಣ ಎರಡೂ ರಾಜ್ಯಗಳ ಜನ ಗಂಗಾನದಿಯನ್ನು ತಾಯಿಯಂತೆ ಪೂಜಿಸುತ್ತಿದ್ದರು.
15. ಗಂಗಾನದಿಯಿಂದ ಸಮೃದ್ಧವಾಗಿದ್ದ ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ಕಾಲ ಕ್ರಮೇಣ ಸ್ವಾರ್ಥ ಆವರಿಸಿತು. ಈ ನದಿಯ ಮೇಲೆ ತಮ್ಮ ಸಂಪೂರ್ಣ ಅಧಿಕಾರವನ್ನು ಸ್ಥಾಪಿಸಬೇಕೆಂಬ ದುರಾಸೆ ಎರಡೂ ರಾಜ್ಯಗಳ ರಾಜರುಗಳಿಗೆ ಹೆಚ್ಚಾಯಿತು. ಅದು ಹೆಮ್ಮರವಾಗಿ ಬೆಳೆಯತೊಡಗಿತು. ಇದು ಎರಡೂ ರಾಜ್ಯಗಳ ದ್ವೇಷ ಹೆಚ್ಚಾಗಲು ಕಾರಣವಾಯಿತು.
16. ಬುದ್ಧನ ಪ್ರಕಾರ ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ನಮಗೆ ಉಳಿಯುವುದು ಈರ್ಷೆಯೇ. ಈರ್ಷೆ ಹೆಚ್ಚಾಗಿ ದುಃಖ ಹೆಚ್ಚಾಗುತ್ತದೆ. ದ್ವೇಷಗಳಿಂದ ಜೀವಿಗಳಿಗೆ ದುಃಖವೇ ಹೊರತು ಸುಖವಲ್ಲ. ಈಗ ಸುಖವಾಗಿರುವ ನಾವು ದುಃಖ ತಂದುಕೊಳ್ಳುವ ಮಾರ್ಗ ಇದಾಗಿದೆ.
17. ನದಿ ನೀರಿಗಿಂತ ಮನುಷ್ಯನ ರಕ್ತಕ್ಕೆ ಬೆಲೆ ಹೆಚ್ಚು. ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ನಮಗೆ ಉಳಿಯುವುದು ಈರ್ಷೆಯೇ. ಈರ್ಷೆ ಹೆಚ್ಚಾಗಿ ದುಃಖ ಹೆಚ್ಚಾಗುತ್ತದೆ. ದ್ವೇಷಗಳಿಂದ ಜೀವಿಗಳಿಗೆ ದುಃಖವೇ ಹೊರತು ಸುಖವಲ್ಲ. ನೀರು, ಗಾಳಿ, ಆಹಾರದ ಜೊತೆಗೆ ಶಾಂತಿಯು ಮನುಷ್ಯ ಸುಖವಾಗಿರಲು ಅವಶ್ಯಕ. ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ, ಹಾಗಾಗಿ ನಾವೆಲ್ಲ ಪ್ರಕೃತಿಯೆಂಬ ವರವನ್ನು ಸಮಾನವಾಗಿ ಹಂಚಿಕೊಳ್ಳಬೇಕು. ಆಗ ಮಾತ್ರ ಸುಖ, ಶಾಂತಿ ನೆಲೆಸಲು ಸಾಧ್ಯ ಎಂಬ ಕಾರಣಕ್ಕೆ ಬುದ್ಧ ದೇವನು ವತ್ಸ ಮತ್ತು ಮಗಧ ರಾಜ್ಯಗಳ ನಡುವಿನ ಯುದ್ಧವನ್ನು ತಪ್ಪಿಸಿದನು.

**ಸಾಹಿತಿಗಳ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

18. ಡಾ. ನಿರುಪಮಾರವರು 1933ರಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆಯ ಹೊಳವನಹಳ್ಳಿಯಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳೆಂದರೆ ಅಮೃತಕಲಶ, ಭುವನ ವಿಜಯ, ಭಾವಮುಖಿ, ರಣಹದ್ದು, ಶತಮಾನದ ಮಕ್ಕಳ ಸಾಹಿತ್ಯ ಮುಂತಾದವು. ಇವರು ಕನ್ನಡದ ಜೊತೆಗೆ ಸಂಸ್ಕೃತ, ತೆಲುಗು, ಇಂಗ್ಲೀಷ್, ಹಿಂದಿ, ಬಂಗಾಲಿ ಭಾಷೆಗಳನ್ನು ಬಲ್ಲವರಾಗಿದ್ದು, ವಿವಿಧ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

19. ಈ ವಾಕ್ಯವನ್ನು ಡಾ. ನಿರುಪಮಾರವರು ಬರೆದಿರುವ 'ಶತಮಾನದ ಮಕ್ಕಳ ಸಾಹಿತ್ಯ' ಪುಸ್ತಕದಿಂದ ಆಯ್ದ 'ಬುದ್ಧನ ಸಲಹೆ' ಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಭಗವಾನ್ ಬುದ್ಧನು ವತ್ಸ ಮತ್ತು ಮಗಧ ರಾಜ್ಯಗಳ ಜನರಿಗೆ ಕೇಳಿದನು. ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ಕಾಲ ಕ್ರಮೇಣ ಸ್ವಾರ್ಥ ಆವರಿಸಿ, ನದಿಯ ಮೇಲೆ ತಮ್ಮ ಸಂಪೂರ್ಣ ಅಧಿಕಾರವನ್ನು ಸ್ಥಾಪಿಸಬೇಕೆಂಬ ದುರಾಸೆ ಹೆಚ್ಚಾಯಿತು. ಅದು ಹೆಮ್ಮರವಾಗಿ ಬೆಳೆದು ದ್ವೇಷ ಹೆಚ್ಚಾಗಿ ಯುದ್ಧಕ್ಕೆ ನಿಂತಾಗ ಭಗವಾನ್ ಬುದ್ಧನು ಅಲ್ಲಿಗೆ ಬಂದು ಈ ಮೇಲಿನಂತೆ ಕೇಳಿದನು.

    ಯುದ್ಧಕ್ಕೆ ದ್ವೇಷವೇ ಕಾರಣ ಎಂಬುದು ಇಲ್ಲಿ ವ್ಯಕ್ತವಾಗಿದೆ.

20. ಈ ವಾಕ್ಯವನ್ನು ಡಾ. ನಿರುಪಮಾರವರು ಬರೆದಿರುವ 'ಶತಮಾನದ ಮಕ್ಕಳ ಸಾಹಿತ್ಯ' ಪುಸ್ತಕದಿಂದ ಆಯ್ದ 'ಬುದ್ಧನ ಸಲಹೆ' ಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ವತ್ಸ ಮತ್ತು ಮಗಧ ರಾಜ್ಯಗಳ ಜನರು ಭಗವಾನ್ ಬುದ್ಧನಿಗೆ ಹೇಳಿದರು. ಗಂಗಾನದಿಯ ಮೇಲೆ ಪ್ರಭುತ್ವ ಸಾಧಿಸಲು ವತ್ಸ ಮತ್ತು ಮಗಧ ರಾಜ್ಯಗಳೆರಡು ಯುದ್ಧಕ್ಕೆ ಮುಂದಾದವು. ಎರಡೂ ಕಡೆಯ ಸೈನ್ಯಗಳನ್ನು ನೋಡಿ ಅವುಗಳ ಮಧ್ಯೆ ಭಗವಾನ್ ಬುದ್ಧದೇವ ನಿಂತು ಎಲ್ಲರನ್ನೂ ತನ್ನ ಬಳಿಗೆ ಕರೆದು ಯುದ್ಧಕ್ಕೆ ಕಾರಣವನ್ನು ಕೇಳಿದನು. ಕಾರಣ ತಿಳಿದು

ನದಿಯ ನೀರು, ಮಾನವ ರಕ್ತ ಇವೆರಡರಲ್ಲಿ ಯಾವುದು ಹೆಚ್ಚು ಬೆಲೆಯುಳ್ಳದ್ದು ಎಂದು ಬುದ್ಧದೇವ ಪ್ರಶ್ನಿಸಿದಾಗ ಎರಡೂ ಕಡೆಯವರು ಉತ್ತರಿಸುವಾಗ ಈ ಮಾತು ಬಂದಿದೆ.

ರಕ್ತಪಾತ ನಿಷಿದ್ಧ ಎಂಬುದು ಇಲ್ಲಿನ ಸ್ವಾರಸ್ಯ.

21. ಈ ವಾಕ್ಯವನ್ನು ಡಾ. ನಿರುಪಮಾರವರು ಬರೆದಿರುವ 'ಶತಮಾನದ ಮಕ್ಕಳ ಸಾಹಿತ್ಯ' ಪುಸ್ತಕದಿಂದ ಆಯ್ದ 'ಬುದ್ಧನ ಸಲಹೆ' ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಭಗವಾನ್ ಬುದ್ಧನು ವತ್ಸ ಮತ್ತು ಮಗಧ ರಾಜ್ಯಗಳ ಜನರಿಗೆ ಕೇಳಿದನು. ವತ್ಸ ಮತ್ತು ಮಗಧ ರಾಜ್ಯಗಳು ಯುದ್ಧವನ್ನು ಮಾಡಲು ಸಿದ್ಧರಾದಾಗ, ಅವರ ಯುದ್ಧವನ್ನು ನಿಲ್ಲಿಸಿ ಬುದ್ಧದೇವ ನದಿಯ ನೀರು, ಮಾನವ ರಕ್ತ ಇವೆರಡರಲ್ಲಿ ಯಾವುದು ಹೆಚ್ಚು ಬೆಲೆಯುಳ್ಳದ್ದು? ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಎರಡೂ ರಾಜ್ಯಗಳ ಜನರು ಮನುಷ್ಯನ ರಕ್ತ ಎಂದು ಉತ್ತರಿಸುತ್ತಾರೆ. ಹಾಗಾದರೆ ಕಡಿಮೆ ಬೆಲೆಯುಳ್ಳ ನೀರಿಗಾಗಿ ಅಮೂಲ್ಯವಾದ ರಕ್ತವನ್ನು ಹರಿಸಲು ಏಕೆ ಸಿದ್ಧರಾಗಿದ್ದೀರಿ? ಎಂದು ಪ್ರಶ್ನಿಸಲಾಗಿ, ಅವರು ನಮ್ಮ ಜೀವಗಳಿಗೆ ಈ ಗಂಗಾನದಿಯ ನೀರು ತುಂಬಾ ಅವಶ್ಯಕವಲ್ಲವೇ? ಎಂದು ಬುದ್ಧನನ್ನು ಮರು ಪ್ರಶ್ನಿಸಿದಾಗ ಈ ಮೇಲಿನ ಮಾತು ಬಂದಿದೆ.

ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು ಎಂಬುದು ಇಲ್ಲಿನ ಸ್ವಾರಸ್ಯ.

22. ಈ ವಾಕ್ಯವನ್ನು ಡಾ. ನಿರುಪಮಾರವರು ಬರೆದಿರುವ 'ಶತಮಾನದ ಮಕ್ಕಳ ಸಾಹಿತ್ಯ' ಪುಸ್ತಕದಿಂದ ಆಯ್ದ 'ಬುದ್ಧನ ಸಲಹೆ' ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಭಗವಾನ್ ಬುದ್ಧನು ವತ್ಸ ಮತ್ತು ಮಗಧ ರಾಜ್ಯಗಳ ಜನರಿಗೆ ಹೇಳಿದನು. ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ದ್ವೇಷ, ಅಸೂಯೆ ಹೆಚ್ಚಾಗಿದ್ದರಿಂದ ಯುದ್ಧದ ಹೊರತು ಬೇರೆ ದಾರಿಯಿಲ್ಲ ಎಂದು ಹೇಳಿದಾಗ, ಬುದ್ಧದೇವ ದ್ವೇಷದಿಂದ ದ್ವೇಷವನ್ನು ಜಯಿಸಲು ಸಾಧ್ಯವಿಲ್ಲ. ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರದಷ್ಟೇ ಶಾಂತಿಯೂ ಮುಖ್ಯವಾದುದು. ಯುದ್ಧದಿಂದ ಶಾಂತಿ ನಾಶವಾಗುತ್ತದೆ. ನೀವೇ ಕೈಯಾರ ನಿಮ್ಮ ಸುಖ ನಾಶ ಮಾಡಿಕೊಳ್ಳುವುದನ್ನು ಬಿಟ್ಟು, ವಿವೇಕ ತಂದುಕೊಂಡು ಸುಖವಾಗಿರಿ ಎಂದು ಹೇಳುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

ಮನುಷ್ಯನಿಗೆ ಸಿಕ್ಕ ಪರಮ ವರವೇ ಪ್ರಕೃತಿ ಎಂಬುದು ಇಲ್ಲಿನ ಸ್ವಾರಸ್ಯ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

23. ವತ್ಸ ಮತ್ತು ಮಗಧ ರಾಜ್ಯಗಳು ಗಂಗಾನದಿಯ ಎರಡೂ ಬದಿಗಳಲ್ಲಿದ್ದ ರಾಜ್ಯಗಳಾಗಿದ್ದವು. ಈ ನದಿಯಿಂದಾಗಿ ಎರಡೂ ರಾಜ್ಯಗಳು ಸಮೃದ್ಧಿಯಿಂದ ಸುಭಿಕ್ಷವಾ ದ್ದವು. ಸಮೃದ್ಧವಾಗಿದ್ದ ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ಸ್ವಾರ್ಥ ಆವರಿಸಿ, ಈ ನದಿಯ ಮೇಲೆ ತಮ್ಮ ಸಂಪೂರ್ಣ

ಅಧಿಕಾರವನ್ನು ಸ್ಥಾಪಿಸಬೇಕೆಂಬ ದುರಾಸೆಯುಂಟಾಗಿ ಯುದ್ದಕ್ಕೆ ಮುಂದಾದವು. ಅಲ್ಲಿಗೆ ಬಂದ ಭಗವಾನ್ ಬುದ್ಧ ಯುದ್ಧದ ಕಾರಣಗಳನ್ನು ತಿಳಿದು 'ನೀರಿಗಿಂತ ಮನುಷ್ಯನ ರಕ್ತಕ್ಕೆ ಹೆಚ್ಚು ಬೆಲೆ ಇರುವುದು. ಕಡಿಮೆ ಬೆಲೆ ಇರುವ ನೀರಿಗಾಗಿ ರಕ್ತ ಹರಿಸುತ್ತಿರುವುದು ಸರಿಯಲ್ಲ. ಬದುಕಿಗಾಗಿ ಹೋರಾಟಕ್ಕೆ ಮುಂದಾಗುತ್ತಿರುವವರು ಜೀವನವನ್ನೇ ಕಳೆದುಕೊಳ್ಳುವುದರಿಂದ ಆಗುವ ಲಾಭವಾದರೂ ಏನು? ದ್ವೇಷದಿಂದ ದ್ವೇಷವನ್ನು ಗೆಲ್ಲಲು ಸಾಧ್ಯವಿಲ್ಲ. ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರದಷ್ಟೇ ಶಾಂತಿಯೂ ಮುಖ್ಯವಾದುದು. ಯುದ್ಧದಿಂದ ಶಾಂತಿ ನಾಶವಾಗುತ್ತದೆ. ನೀವೇ ಕೈಯಾರ ನಿಮ್ಮ ಸುಖ ನಾಶ ಮಾಡಿಕೊಳ್ಳುವುದನ್ನು ಬಿಟ್ಟು, ವಿವೇಕ ತಂದುಕೊಂಡು ಸುಖವಾಗಿರಿ. ಯುದ್ಧ ಬಿಟ್ಟು ಪ್ರಕೃತಿ ಕೊಟ್ಟಿರುವ ವರವನ್ನು ಸಮಾನರಾಗಿ ಹಂಚಿಕೊಳ್ಳಬೇಕೆಂದು ಅರಿವು ಮೂಡಿಸಿದರು. ಬುದ್ಧ ದೇವನ ಬೋಧನೆಯ ಸತ್ಯವನ್ನು ಮನಗಂಡ ಎರಡೂ ರಾಜ್ಯಗಳ ಜನರು ಯುದ್ಧವನ್ನು ಮರೆತು ಸ್ನೇಹದಿಂದ ಬಾಳ್ವೆ ನಡೆಸಿದರ ಫಲವಾಗಿ ಶಾಂತಿ ನೆಲೆಸಿತು.

24. ಪ್ರಕೃತಿ ಹಾಗೂ ಪ್ರಾಕೃತಿಕ ಸಂಪನ್ಮೂಲಗಳಿರುವುದು ಮನುಷ್ಯನ ಒಳಿತಿಗಾಗಿ, ಪ್ರಕೃತಿ ನಮ್ಮೆಲ್ಲರಿಗೂ ವರವೇ ಹೊರತು ಶಾಪವಲ್ಲ. ಆದರೆ ಮನುಷ್ಯ ತನ್ನ ಸ್ವಾರ್ಥ ಹಾಗೂ ಅಹಂಕಾರದಿಂದಾಗಿ ಅದನ್ನು ಶಾಪವನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದಾನೆ. ಇಂದು ಇಡೀ ವಿಶ್ವಕ್ಕೆ ತಾನೇ ದೊಡ್ಡವನಾಗಬೇಕು ಹಾಗೂ ನೆಲ, ಜಲ ಎಲ್ಲದರ ಮೇಲು ತನ್ನದೇ ಪ್ರಭುತ್ವವನ್ನು ಸಾಧಿಸಬೇಕೆಂಬ ಲಾಲಸೆಯಿಂದಾಗಿ ತನ್ನವರ ಮೇಲೆಯೇ ಹಗೆ ಸಾಧಿಸುತ್ತಿದ್ದಾನೆ. ಹಗೆಯಿಂದ ಹಗೆಯನ್ನು ಗೆಲ್ಲಲು ಸಾಧ್ಯವಿಲ್ಲ. ಅದು ಎಂದಾದರೂ ದುಃಖಕ್ಕೆ ಅಣಿ ಮಾಡಿಕೊಡುತ್ತದೆ. ಈ ಹಗೆತನದಿಂದಾಗಿ ಮನುಷ್ಯ ತನ್ನ ವಿವೇಕವನ್ನು ಕಳೆದುಕೊಳ್ಳುತ್ತಿದ್ದಾನೆ. ಆತ ಬದುಕಲು ಗಾಳಿ, ನೀರು, ಆಹಾರ ಎಷ್ಟು ಮುಖ್ಯವೋ ಸುಖ, ಶಾಂತಿ, ನೆಮ್ಮದಿಯು ಅಷ್ಟೇ ಮುಖ್ಯ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಎಂತಹುದೇ ಸಮಸ್ಯೆಗಳನ್ನು ವಿವೇಕದಿಂದ ಸೌಹಾರ್ದಯುತವಾಗಿ ಬಗೆಹರಿಸಿ ಕೊಳ್ಳಬಹುದಾಗಿದೆ. ನೆಲ, ಜಲವನ್ನು ಸರ್ವಮಾನವರೂ ಸಮಾನವಾಗಿ ಹಂಚಿಕೊಂಡು ಸಹಬಾಳ್ವೆಯಿಂದ ಬದುಕಿದಾಗ ಸುಖ, ಶಾಂತಿ, ನೆಮ್ಮದಿ ದೊರೆಯುತ್ತದೆ. ಕೂಡಿ ಬಾಳಿ, ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕಂಡುಕೊಳ್ಳೋಣ.

25. ದ್ವೇಷವು ಅಸೂಯೆಯಿಂದ ಹುಟ್ಟಿಕೊಂಡಿದ್ದು. ದ್ವೇಷವು ಹೊಟ್ಟೆಕಿಚ್ಚಿನಿಂದ ಕೂಡಿದ್ದು, ತಾನಚ್ಚಿದ ಬೆಂಕಿಯು ತನ್ನನ್ನೇ ದಹಿಸುವಂತೆ ದ್ವೇಷವು ಉಲ್ಬಣಾವಸ್ಥೆ ತಲುಪಿ ತನ್ನನ್ನೇ ಕೊಲ್ಲುತ್ತದೆ. ಬುದ್ಧ ದೇವನು ಹೇಳುವಂತೆ ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ಉಳಿಯುವುದು ಈರ್ಷೆಯೇ ಹೊರತು ಬೇರೇನಲ್ಲಾ. ಇವುಗಳಿಂದ ದುಃಖವೇ ಹೊರತು ಸುಖವಲ್ಲ. ದ್ವೇಷವೆಂದರೆ ಸುಖವಾಗಿರುವ ಜನರು ದುಃಖ ತಂದುಕೊಳ್ಳುವ ಮಾರ್ಗವಾಗಿದೆ. ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಮುಖ್ಯವಾದಂತೆ ಶಾಂತಿಯೂ ಮುಖ್ಯ. ದುರಾಸೆಯಿಂದ ಸ್ವಾರ್ಥ, ಸ್ವಾರ್ಥದಿಂದ ಜಗಳ, ಜಗಳದಿಂದ ದ್ವೇಷ, ದ್ವೇಷದಿಂದ ಈರ್ಷೆ ಹೀಗೆ ಶಾಂತಿ ನಾಶವಾಗುತ್ತದೆ. ವತ್ಸ ಮತ್ತು ಮಗಧ ರಾಜ್ಯಗಳ ಜನರಿಗೆ ಆದದ್ದು ಇದೆಯೇ. ಅವರಲ್ಲಿ

ದುರಾಸೆ ಉಂಟಾಗಿ ಅವರಿಬ್ಬರಲ್ಲೂ ಸ್ವಾರ್ಥ ಆವರಿಸಿತು. ಸ್ವಾರ್ಥ ಹೆಮ್ಮರವಾಗಿ ಬೆಳೆದು ದ್ವೇಷ ಹೆಚ್ಚಾಯಿತು. ಅವರಿಬ್ಬರಲ್ಲೂ ಅಶಾಂತಿ ಮನೆಮಾಡಿತು. ಆಗ ಬುದ್ಧದೇವನು ಮಧ್ಯ ಪ್ರವೇಶಿಸಿ ಅವರಿಬ್ಬರಲ್ಲಿರುವ ಸ್ವಾರ್ಥವನ್ನು ಹೋಗಲಾಡಿಸಿದನು. ಆಗ ಎಲ್ಲರೂ ನೆಮ್ಮದಿ, ಸುಖ ಶಾಂತಿಯಿಂದ ನೆಲೆಸಿದರು. ಇದರಿಂದ ನಾವು ಸ್ಪಷ್ಟಪಡಿಸುವುದೇನೆಂದರೆ ದ್ವೇಷವು ಈರ್ಷೆಯನ್ನು ಉಂಟುಮಾಡುತ್ತದೆಯೇ ಹೊರತು ಶಾಂತಿಯನ್ನಲ್ಲ.

## 2. ಕನಸು ಮತ್ತು ಸಂದೇಶ

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಅಸಹ್ಯ
2. (ಡಿ) ಜುದ್ದ
3. (ಸಿ) ನಿರೀಕ್ಷಿತ
4. (ಬಿ) ಯಣ್
5. (ಎ) ಭೂಮಿ
6. (ಎ) ಚೌ
7. (ಸಿ) ಅಣ್ಣ

**ಒಂದು ಅಂಕದ ಪ್ರಶ್ನೆಗಳು;**

8. ಕನಸು ಕಾರ್ಯರೂಪಕ್ಕೆ ಇಳಿಯಲು ಇರುವ ಸೋಪಾನ ಯೋಚನೆಗಳು.
9. ಕಲಾಂರವರು ನಿತ್ಯ ರಾತ್ರಿ ಒಂದು ಗಂಟೆಯ ನಂತರ ಮಲಗಿ, ಬೆಳಿಗ್ಗೆ ಆರು ಗಂಟೆಗೆ ಏಳುತ್ತಿದ್ದರು.
10. ಅಶೋಕನು ಪ್ರತಿಪಾದಿಸಿದ ಧರ್ಮ 'ಅಹಿಂಸಾ ಧರ್ಮ.'
11. ಅಶೋಕನು ಸಾಧಿಸಿದ ಎರಡು ಬಗೆಯ ಬದುಕೆಂದರೆ ಒಂದು ನಿರ್ದಯಿ ಆಕ್ರಮಣಕಾರನಾಗಿ, ಇನ್ನೊಂದು ದಯಾಮಯಿ ಆಡಳಿತಗಾರನಾಗಿ.
12. ಅಶೋಕನ ಪ್ರಕಾರ ಶಾಂತಿ, ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

13. ಕಲಾಂರವರಿಗೆ ನಿದ್ದೆಯಲ್ಲಿ ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ? ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದೆ? ಹೀಗೆ ಯೋಚನೆಗಳು ಸುಳಿದಾಡಿದವು.
14. ಕಲಾಂರವರ ಕನಸಿನಲ್ಲಿ ಮರುಭೂಮಿಯನ್ನು ಕಂಡರು. ಮರುಭೂಮಿಯಲ್ಲಿ ನಿಂತಿದ್ದ ಅವರ ಸುತ್ತ ಎತ್ತ ನೋಡಿದರೂ ಬರೀ ಮರಳು. ಮೈಲಿ-ಮೈಲಿಗಟ್ಟಲೆ ಮರಳು. ದೂರ ದಿಗಂತದವರೆಗೂ ಮರಳು. ಆಕಾಶದಲ್ಲಿ ಚಂದ್ರ ಮರಳುಗಾಡಿನುದ್ದಕ್ಕೂ ಹಾಲು ಬೆಳದಿಂಗಳು ಚೆಲ್ಲುವಂತಿತ್ತು.

15. ಕಲಾಂರವರು ಕನಸಿನಲ್ಲಿ ಕಂಡ ಐವರು ಮಹಾಪುರುಷರೆಂದರೆ – ಮಹಾತ್ಮ ಗಾಂಧೀ, ಆಲ್ಬರ್ಟ್ ಐನ್ ಸ್ಟೀನ್, ಚಕ್ರವರ್ತಿ ಅಶೋಕ, ಅಬ್ರಹಾಂ ಲಿಂಕನ್ ಮತ್ತು ಖಲೀಫ ಉಮರ್ ರವರು.
16. ಕಲಾಂರವರ ಕನಸಿನಲ್ಲಿ ಘನಗಾಂಭೀರ್ಯದ ಸಾಕಾರಮೂರ್ತಿ ಚಕ್ರವರ್ತಿ ಅಶೋಕನ ಪಕ್ಕದಲ್ಲೇ ಕಲಾಂರವರು ನಿಂತಿದ್ದರು. ಇವರಿಗೆ ಅಶೋಕನೆದುರು ತೀರಾ ಕುಬ್ಜನಾದಂತೆ ಅನ್ನಿಸಿತು. ಅವರ ಬಳಿ ನಿಂತಿದ್ದ ಅಶೋಕ ಆಗ ತಾನೇ ದಿಗ್ವಿಜಯ ಸಾಧಿಸಿ ಮರಳಿ ಬಂದಂತಿದ್ದ. ವಿಜಯಕ್ಕೆ ಭಾರೀ ಬೆಲೆ ತೆತ್ತಿದ್ದ. ಸಹಸ್ರಾರು ಜನರ ಆಹುತಿ ಪಡೆದಿದ್ದ. ಹಲವು ಸಾವು ನೋವುಗಳಿಗೆ ಕಾರಣನಾಗಿದ್ದ. ಆ ಸಾವು ನೋವುಗಳಿಂದ ನೊಂದಿದ್ದ ಅಶೋಕನು ಮಂಡಿಯೂರಿ ಕುಳಿತು ಯುದ್ದ ಕವಚ ಮತ್ತು ಕಿರೀಟವನ್ನು ಕಳಚಿಟ್ಟ. ಆತನ ಮುಖ ಯಾಕೋ ಕಳೆಗುಂದಿತ್ತು. ಅಸಂಖ್ಯ ಜನರ ಸಾವು ನೋವಿನಿಂದ ಆತ ಚಿಂತಿತನಾದಂತೆ ಕಂಡುಬರುತ್ತಿತ್ತು.
17. ಕಳಿಂಗ ಯುದ್ದದಲ್ಲಿ ಅಶೋಕ ದಿಗ್ವಿಯವನ್ನು ಸಾಧಿಸಿದ್ದ. ಆ ದಿಗ್ವಿಜಯಕ್ಕೆ ಭಾರೀ ಬೆಲೆ ತೆತ್ತಿದ್ದ. ಜಯಕ್ಕಾಗಿ ಸಹಸ್ರಾರು ಜನರ ಆಹುತಿ ಪಡೆದಿದ್ದ. ಈ ಯುದ್ದವು ಮೂರು ಲಕ್ಷ ಜನರ ಬಲಿ ತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳೆದುಕೊಂಡಿದ್ದರು. ಅಸಂಖ್ಯ ಜನರು ಸಾವು ನೋವುಗಳಿಂದ ನರಳುತ್ತಿದ್ದರು.
18. ಕಲಾಂರವರ ಕನಸಿನಲ್ಲಿ ಅಶೋಕನು "ಗೆಳೆಯರೇ, ಒಂದು ವಿಷಯವನ್ನಂತೂ ನಾನೀಗ ಚೆನ್ನಾಗಿ ಅರ್ಥ ಮಾಡಿಕೊಂಡಿರುವೆ. ಜಯ ಎಂಬುದು ಸಾವು ನೋವು ಉಂಟುಮಾಡುವುದರಲಿಲ್ಲ. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು." ಎಂಬ ಸಂದೇಶ ನೀಡಿದನು.
19. ನೀವು ಕನಸುಗಳನ್ನು ಕಾಣಿರಿ. ಕನಸುಗಳು ಭೂತ, ಭವಿಷ್ಯ ಹಾಗೂ ವರ್ತಮಾನದ ಅನುಭವಗಳನ್ನು ಕಟ್ಟಿಕೊಡುತ್ತವೆ. ಕನಸು ಕಾರ್ಯರೂಪಕ್ಕೆ ಇಳಿಯಲು ಇರುವ ಸೋಪಾನ ಯೋಚನೆಗಳು ಎಂಬುದು ಕನಸಿನ ಬಗ್ಗೆ ಕಲಾಂರವರ ಸಂದೇಶವಾಗಿದೆ.

**ಕವಿ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

20. ಎ ಪಿ ಜೆ ಅಬ್ದುಲ್ ಕಲಾಂರವರು 1931ರಲ್ಲಿ ತಮಿಳುನಾಡಿನ ರಾಮೇಶ್ವರಂನಲ್ಲಿ ಜನಿಸಿದರು. ಇವರು ವಿಂಗ್ಸ್ ಆಫ್ ಫೈರ್, ಇಂಡಿಯಾ ಮೈ ಡ್ರೀಮ್, ಇಂಡಿಯಾ ೨೦೨೦, ಪ್ರಜ್ವಲಿತ ದೀಪಗಳು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಗೌರವ ಡಾಕ್ಟರೇಟ್, ಪದ್ಮಭೂಷಣ, ಪದ್ಮವಿಭೂಷಣ, ಭಾರತ ರತ್ನ ಮುಂತಾದ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

21. ಈ ವಾಕ್ಯವನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಬರೆದಿರುವ 'ಪ್ರಜ್ವಲಿತ ದೀಪಗಳು' ಎಂಬ ಪುಸ್ತಕದಿಂದ ಆಯ್ದ 'ಕನಸು ಮತ್ತು ಸಂದೇಶ' ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ ಎನ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

    ಈ ಮಾತನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಓದುಗರಿಗೆ ಹೇಳಿದ್ದಾರೆ. 2001ರ ಸೆಪ್ಟೆಂಬರ್ 30ರಂದು ಕಲಾಂರವರು ಜಾರ್ಖಂಡ್ ರಾಜ್ಯದ ರಾಂಚಿಯಿಂದ ಬೊಕಾರೋಗೆ ಹೆಲಿಕಾಪ್ಟರ್ ನಲ್ಲಿ ಪಯಣಿಸುತ್ತಿದ್ದರು. ಆ ಹೆಲಿಕಾಪ್ಟರ್ ಎಂಜಿನ್ ನಲ್ಲಿ ದೋಷ ಕಾಣಿಸಿಕೊಂಡಿದ್ದ ಕಾರಣ ಭೂ ಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರಿ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗದೆ ಎಲ್ಲರೂ ಬದುಕಿ ಉಳಿದರು ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

22. ಈ ವಾಕ್ಯವನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಬರೆದಿರುವ 'ಪ್ರಜ್ವಲಿತ ದೀಪಗಳು' ಎಂಬ ಪುಸ್ತಕದಿಂದ ಆಯ್ದ 'ಕನಸು ಮತ್ತು ಸಂದೇಶ' ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ ಎನ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

    ಈ ಮಾತನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಓದುಗರಿಗೆ ಹೇಳಿದ್ದಾರೆ. ಹೆಲಿಕಾಪ್ಟರ್ ಅಪಘಾತದಿಂದ ಪಾರಾದ ಎ ಪಿ ಜೆ ಅಬ್ದುಲ್ ಕಲಾಂರವರು ಆಘಾತದ ಉದ್ವೇಗವನ್ನು ನಿವಾರಿಸಲು ವೈದ್ಯರು ಕೆಲವು ಔಷದಿಯನ್ನು ನೀಡಿ ಕಳುಹಿಸಿದರು. ಅದರ ಪರಿಣಾಮ ಗಾಢವಾದ ನಿದ್ದೆಗೆ ಜಾರಿದರು. ನಿದ್ದೆಯಲ್ಲಿ ಅವರಿಗೆ ಅನೇಕ ಯೋಚನೆಗಳು ಸುಳಿದಾಡಿ ಒಂದು ಕನಸನ್ನು ಕಂಡರು. ಆ ಕನಸಿನಲ್ಲಿ ಐವರು ಮಹಾಪುರುಷರನ್ನು ಕಂಡರು. ಅವರ ಬಗ್ಗೆ ಮಾತನಾಡುವಾಗ ಈ ಮೇಲಿನ ಮಾತು ಬಂದಿದೆ.

23. ಈ ವಾಕ್ಯವನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಬರೆದಿರುವ 'ಪ್ರಜ್ವಲಿತ ದೀಪಗಳು' ಎಂಬ ಪುಸ್ತಕದಿಂದ ಆಯ್ದ 'ಕನಸು ಮತ್ತು ಸಂದೇಶ' ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ ಎನ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

    ಈ ಮಾತು ಎ ಪಿ ಜೆ ಅಬ್ದುಲ್ ಕಲಾಂರವರಿಗೆ ಅವರ ಮನಸ್ಸಿನಲ್ಲಿ ಮೂಡಿಬಂದ ಪ್ರಶ್ನಾರೂಪದ ಯೋಚನೆಯಾಗಿದೆ. ಹೆಲಿಕಾಪ್ಟರ್ ಅಪಘಾತದ ಉದ್ವೇಗವನ್ನು ನಿವಾರಿಸಲು ವೈದ್ಯರು ನೀಡಿದ ಔಷದಿಯ ಪರಿಣಾಮ ಗಾಢ ನಿದ್ದೆಗೆ ಜಾರಿದರು. ನಿದ್ದೆಯಲ್ಲಿ ಅವರಿಗೆ ಅನೇಕ ಯೋಚನೆಗಳು ಸುಳಿದಾಡಿದವು. ಆ ಯೋಚನೆಗಳಲ್ಲಿ ಅಶೋಕ ಹಾಗೂ ಕಳಿಂಗ ಯುದ್ದದ ಸನ್ನಿವೇಶವು ಒಂದು. ಒಂದು ಕ್ಷಣ ಗಂಭೀರವಾಗಿ ಯೋಚಿಸಿದ ಕಲಾಂರವರು ಈ ಮೇಲಿನಂತೆ ಹೇಳಿದರು.

24. ಈ ವಾಕ್ಯವನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಬರೆದಿರುವ 'ಪ್ರಜ್ವಲಿತ ದೀಪಗಳು' ಎಂಬ ಪುಸ್ತಕದಿಂದ ಆಯ್ದ 'ಕನಸು ಮತ್ತು ಸಂದೇಶ' ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ ಎನ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಮಾತನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಓದುಗರಿಗೆ ಹೇಳಿದ್ದಾರೆ. ಕಳಿಂಗದ ಮೇಲೆ ದಿಗ್ವಿಯವನ್ನು ಸಾಧಿಸಿದ ಅಶೋಕ ಚಿಂತಾಕ್ರಾಂತನಾಗಿ ಆಗಸದತ್ತ ನೋಟ ಬೀರುತ್ತಾನೆ. ಒಂದೆಡೆ ರಮ್ಯ ಮನೋಹರ ದೃಶ್ಯ ಮತ್ತೊಂದೆಡೆ ತಾನೇ ಸೃಷ್ಟಿಸಿದ ಬೀಭತ್ಸ ದೃಶ್ಯಗಳ ಸಮಾಗಮದಂತಾಯಿತು. ಅವನ ಕೃತ್ಯವನ್ನು ಕಂಡು, ಸ್ವತಃ ನಿಸರ್ಗವೇ ಅಸಹನೆ ವ್ಯಕ್ತಪಡಿಸುತ್ತಿರುವಂತೆ ಕಂಡು ಬಂದಿತು. ಆ ಕ್ಷಣ ಅವನಲ್ಲಿ ಅಹಿಂಸಾ ಧರ್ಮವನ್ನು ಅನುಸರಿಸಬೇಕೆಂಬ ಮನೋವಾಂಛೆ ಉಂಟಾಯಿತು ಎಂಬ ಸಂದರ್ಭದಲ್ಲಿ ಈ ಮಾತು ಬಂದಿದೆ.

25. ಈ ವಾಕ್ಯವನ್ನು ಎ ಪಿ ಜೆ ಅಬ್ದುಲ್ ಕಲಾಂರವರು ಬರೆದಿರುವ 'ಪ್ರಜ್ವಲಿತ ದೀಪಗಳು' ಎಂಬ ಪುಸ್ತಕದಿಂದ ಆಯ್ದ 'ಕನಸು ಮತ್ತು ಸಂದೇಶ' ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ ಎನ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಮಾತನ್ನು ಕಲಾಂರವರ ಕನಸಿನಲ್ಲಿ ಸಾಮ್ರಾಟ ಅಶೋಕ ಹೇಳುತ್ತಾನೆ. ಕಲಾಂರವರ ಕನಸಿನಲ್ಲಿ ಬಂದಿದ್ದ ಗಾಂಧೀಜಿಯವರು ದೇವರು ನಮಗೆ ದಯಪಾಲಿಸಿದ್ದ ವಿಶಿಷ್ಟತೆಯನ್ನು ಮಾನವ ಕುಲಕ್ಕೆ ತಲುಪಿಸಿದ್ದೇವೆ. ದೈವಿಕ ಸೌಂದರ್ಯವು ಮಾನವನ ಹೃದಯವನ್ನು ಪ್ರವೇಶಿಸುವಂತಾಗಬೇಕು ಎಂದು ಹೇಳಿದಾಗ, ಸಾಮ್ರಾಟ ಅಶೋಕ ಗೆಳೆಯರೇ, ಒಂದು ವಿಷಯವನ್ನಂತೂ ನಾನೀಗ ಚೆನ್ನಾಗಿ ಅರ್ಥ ಮಾಡಿಕೊಂಡಿರುವೆ. ಜಯ ಎಂಬುದು ಸಾವುನೋವು ಉಂಟು ಮಾಡುವುದರಲಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪತ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

26. ಕಲಾಂರವರ ಕನಸಿನಲ್ಲಿ ಮಹಾತ್ಮ ಗಾಂಧೀಜಿ 'ಸ್ನೇಹಿತರೇ, ನಮಗೆ ಕೇಳಿ ಬರುತ್ತಿರುವ ದಿವ್ಯ ಸಂದೇಶವು ಅ ಸೃಷ್ಟಿಕರ್ತನದು. ಇಲ್ಲಿ ನೆರೆದ ನಾವೆಲ್ಲರೂ ಭೂಗ್ರಹಕ್ಕೆ ಸೇರಿದವರಾಗಿರುವುದರಿಂದ ಇಡೀ ಮಾನವ ಕುಲಕ್ಕೆ ನಾವು ಆ ಸಂದೇಶವನ್ನು ತಲುಪಿಸಬೇಕಾಗಿ . ನಾನಾ ಜಾತಿ, ಜನಾಂಗ, ಮತ-ಧರ್ಮ ಹಾಗೂ ಭಾಷೆಗಳ ಜನರು ಶಾಂತಿ ನೆಮ್ಮದಿಯಿಂದ, ಏಳಿಗೆ ಸಾಧಿಸುತ್ತಾ ಹೇಗೆ ಬಾಳಬಹುದು ಎಂಬುದನ್ನು ನಾವು ತಿಳಿಸಿಕೊಡಬೇಕಾಗಿದೆ. ಆ ದೇವರು ನಮ್ಮೆಲ್ಲರಿಗೂ ವಿಶಿಷ್ಟವಾದುದೇನನ್ನೋ ದಯಪಾಲಿಸಿದ್ದಾನೆ. ಅದನ್ನು ನಾವು ನಮ್ಮ ಸತ್ಕಾರ್ಯಗಳು ಹಾಗೂ ಶ್ರಮದ ಮೂಲಕ ಮಾನವಕುಲಕ್ಕೆ ತಲುಪಿಸಿದ್ದೂ ಆಗಿದೆ. ಆದರೆ, ಅದು ಪರಿಣಾಮ ಬೀರಿದೆಯೇ?

ಅದಕ್ಕಾಗಿ ಯಾವುದಾದರೂ ದಿವ್ಯ ಸಂದೇಶ ಅಥವಾ ತತ್ವ ಇದೆಯೇ? ದೈವಿಕ ಸೌಂದರ್ಯವು ಮಾನವನ ಹೃದಯವನ್ನು ಪ್ರವೇಶಿಸುವಂತಾಗಬೇಕು. ಇದು ಸಾಧ್ಯವೇ?'

27. ಮನುಷ್ಯ ಸಮಾಜ ಜೀವಿ, ಭಗವಂತನ ಸೃಷ್ಟಿಯಲ್ಲಿಯೇ ಮನುಷ್ಯ ಕುಲ ಶ್ರೇಷ್ಠವಾದದ್ದು. ಬುದ್ಧಿಜೀವಿಯಾಗಿರುವ ಮಾನವ ಜಾತಿ, ಧರ್ಮ, ಮತ, ಭಾಷೆಗಳಿಂದ ಇಡೀ ಮಾನವ ಕುಲವನ್ನೇ ವಿಭಜಿಸುತ್ತಿದ್ದಾನೆ. ತನ್ನದೇ ಶ್ರೇಷ್ಠವೆಂಬ ಭಾವದಿಂದ ಹಿಂಸಾಚಾರಕ್ಕೆ ತೊಡಗುತ್ತಿದ್ದಾನೆ. ಇದರಿಂದ ಅವನ ಸುಖ, ಶಾಂತಿ, ನೆಮ್ಮದಿ, ಸಂತೋಷವೆಲ್ಲ ಹಾಳಾಗುತ್ತಿದೆ. ಉತ್ತಮ ಬಾಳ್ವೆ ನಡೆಸುವ ಕನಸು ಹಾಗೂ ಅದನ್ನು ಸಾಕಾರಗೊಳಿಸುವ ಅಂತಃಶಕ್ತಿ ಸಾಮರ್ಥ್ಯ ಎಲ್ಲರಲ್ಲೂ ಇರುತ್ತದೆ. ನಮ್ಮ ಮನಸ್ಸು ಒಳ್ಳೆಯ ಕೆಲಸಗಳಿಗಾಗಿ ತುಡಿಯುತ್ತಿರುತ್ತದೆ. ನಮ್ಮಲ್ಲಿರುವ ಪ್ರತಿಭೆ, ಬುದ್ಧಿವಂತಿಕೆ ಹಾಗೂ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಗಾಂಧೀಜಿ ಹೇಳಿರುವಂತೆ ನಾನಾ ಜಾತಿ-ಜನಾಂಗ, ಮತ-ಧರ್ಮ ಹಾಗೂ ಭಾಷೆಗಳ ಜನ ಒಗ್ಗಟ್ಟಿನಿಂದ ಶಾಂತಿ, ನೆಮ್ಮದಿಯಿಂದ ಇದ್ದು, ಏಳಿಗೆಯನ್ನು ಸಾಧಿಸಬೇಕು. ದೇವರು ನಮ್ಮೆಲ್ಲರಿಗೂ ವಿಶಿಷ್ಟವಾದುದನ್ನು ದಯಪಾಲಿಸಿದ್ದಾನೆ. ಇಡೀ ಮನುಕುಲ ಅದರ ಸದ್ಬಳಕೆ ಮಾಡಿಕೊಂಡಾಗ ಮಾತ್ರ ಎಲ್ಲರ ತನು ಮನಗಳಲ್ಲಿ ಸುಖ ಸಂತೋಷ ಅರಳುತ್ತದೆ.

### 3. ಗಾಂಧೀಜಿಯ ಬಾಲ್ಯ

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ನಿರಾಸಕ್ತಿ
2. (ಡಿ) ಸವರ್ಣದೀರ್ಘ
3. (ಸಿ) ಹೊತ್ತಿಗೆ
4. (ಎ) ಆಜ್ಞೆ

**ಒಂದು ಅಂಕದ ಪ್ರಶ್ನೆಗಳು;**

5. ಬಾಲ್ಯದಲ್ಲಿ ಪುಸ್ತಕಗಳು ಗಾಂಧೀಜಿಯವರ ಮಿತ್ರರು.
6. ಗಾಂಧೀಜಿಯವರ ಶಾಲೆಗೆ ಬೇಟಿ ನೀಡಿದ ಇನ್ಸ್ ಪೆಕ್ಟರ್ ಮಿ. ಗೈಲ್ಸ್.
7. ಗಾಂಧೀಜಿಯವರು 'ಕೆಟಲ್' ಎಂಬ ಪದವನ್ನು ತಪ್ಪಾಗಿ ಬರೆದಿದ್ದರಿಂದ ಕಾಪಿ ಮಾಡುವಂತೆ ಉಪಾಧ್ಯಾಯರು ಸೂಚಿಸಿದರು.
8. ಬಾಲ್ಯದಲ್ಲಿ ಶ್ರವಣನ ಪಿತೃಭಕ್ತಿ ಪುಸ್ತಕ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿತು.
9. ಹಿರಿಯರ ದೋಷಗಳನ್ನು ಎಣಿಸದಿರುವುದು ಗಾಂಧೀಜಿಯವರ ಸ್ವಾಭಾವಿಕ ಗುಣವಾದ ಕಾರಣ ಕಾಪಿ ಮಾಡಲು ಹೇಳಿದ ಉಪಾಧ್ಯಾಯರ ಮೇಲೆ ಗೌರವ ಕಡಿಮೆ ಆಗಲಿಲ್ಲ.
10. ಸತ್ಯ ಹರಿಶ್ಚಂದ್ರ ನಾಟಕ ಗಾಂಧೀಜಿಯವರಿಗೆ ಪದೇ ಪದೇ ಅಳುವಂತೆ ಮಾಡಿತು.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

11. ಗಾಂಧೀಜಿಯವರು ಬಹಳ ನಾಚಿಕೆಯ ಸ್ವಭಾವದವರಾಗಿದ್ದರು. ಬಾಲ್ಯದಲ್ಲಿ ಯಾರೊಂದಿಗೂ ಸೇರುತ್ತಿರಲಿಲ್ಲ. ಪುಸ್ತಕ ಮತ್ತು ಪಾಠಗಳು ಇವರ ಮಿತ್ರರಾಗಿದ್ದವು. ಶಾಲೆಯ ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುತ್ತಿದ್ದರು. ಶಾಲೆ ಮುಗಿಯುತ್ತಲೇ ಮನೆಗೆ ಓಡಿ ಬರುವುದು ದಿನನಿತ್ಯದ ಅಭ್ಯಾಸವಾಗಿತ್ತು. ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಾದರೂ ಕುಚೋದ್ಯ ಮಾಡುವರೋ ಎಂಬ ಭಯವೂ ಇತ್ತು.
12. ಗಾಂಧೀಜಿಯವರು ಪರೀಕ್ಷೆಯಲ್ಲಿ 'ಕೆಟಲ್' ಎಂಬ ಪದವನ್ನು ತಪ್ಪಾಗಿ ಬರೆದಿದ್ದರಿಂದ, ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಕಾಪಿ ಮಾಡುವಂತೆ ಎಚ್ಚರಿಸಲು ಪ್ರಯತ್ನಿಸಿದರು. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ಉಪಾಧ್ಯಾಯರ ಉದ್ದೇಶವಾಗಿತ್ತು. ಅವರು ಗುರುಗಳ ಸೂಚನೆಯಂತೆ ನಡೆಯಲಿಲ್ಲ. ಅದು ಅವರಿಗೆ ಒಪ್ಪಿಗೆಯಾಗಲಿಲ್ಲ.
13. ಶ್ರವಣನ ಪಿತೃಭಕ್ತಿ ನಾಟಕದಲ್ಲಿ ಶ್ರವಣ ತನ್ನ ಕುರುಡು ತಂದೆ-ತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಆ ಅಡ್ಡೆಯನ್ನು ಹೆಗಲಿನ ಮೇಲೆ ಹೊತ್ತೊಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ದೃಶ್ಯ ಗಾಂಧೀಜಿಯವರ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು ಎಂದು ಪದೇ ಪದೇ ಅವರಿಗೆ ಅವರೇ ಹೇಳಿಕೊಳ್ಳುತ್ತಿದ್ದರು. ಶ್ರವಣ ಕುಮಾರ ಮರಣ ಹೊಂದಿದಾಗ ಅವನ ಮಾತಾಪಿತೃಗಳ ಆರ್ತವಿಲಾಪ ಇವರ ಹೃದಯವನ್ನು ಕರಗಿಸಿತು. ಮೇಲಿನ ಎರಡು ಪ್ರಸಂಗಗಳು ಗಾಂಧೀಜಿಯವರ ಮೇಲೆ ಪ್ರಭಾವ ಬೀರಿ ಹೃದಯ ಕರಗಿತು.
14. ಸತ್ಯ ಹರಿಶ್ಚಂದ್ರ ನಾಟಕ ಗಾಂಧೀಜಿಯವರ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟೂ ನೋಡಿದರೂ ಅವರಿಗೆ ತೃಪ್ತಿಯೇ ಆಗಲಿಲ್ಲ. ಅದರ ಹುಚ್ಚು ತುಂಬಾ ಕಾಡಿತು. ಲೆಕ್ಕವಿಲ್ಲದಷ್ಟು ಸಲ ಅವರೇ ಆ ನಾಟಕವನ್ನು ಅಭಿನಯಿಸಿಕೊಂಡರು. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಎಂಬ ಪ್ರಶ್ನೆ ಅವರಿಗೆ ಅವರೇ ಕೇಳಿಕೊಳ್ಳುತ್ತಿದ್ದರು. ನಾನು ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನು ಪಡಬೇಕು ಎಂದುಕೊಳ್ಳುತ್ತಿದ್ದರು. ಇದೊಂದೆ ಅವರ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶವಾಗಿತ್ತು. ಆ ಕಥೆಯನ್ನು ಅಕ್ಷರಶಃ ನಂಬಿದ್ದರು.

**ಕವಿ ಪರಿಚಯ;**

| | |
|---|---|
| ಜನ್ಮಸ್ಥಳ, ಕಾಲ | 01 ಅಂಕ |
| ಕೃತಿ, ಬಿರುದು/ಪ್ರಶಸ್ತಿ | 01 ಅಂಕ |
| ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 01 ಅಂಕ |

ಒಟ್ಟು 03 ಅಂಕಗಳು

15. ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು 1904ರಲ್ಲಿ ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಇವರು ಹಳ್ಳಿಯ ಹಾಡು, ಮೆರವಣಿಗೆ, ನಮ್ಮ ಊರಿನ ರಸಿಕರು ಮುಂತಾದ ಕೃತಿಗಳನ್ನು ಬರೆದಿರುವರು. ಗಾಂಧೀಜಿಯವರ 'ನನ್ನ ಸತ್ಯಾನ್ವೇಷಣೆ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿರುವರು. ಇವರ ಕೃತಿಗಳಲ್ಲಿ ಗ್ರಾಮೀಣ ಸಂಸ್ಕೃತಿ ಹಾಗೂ ಗಾಂಧೀ ಚಿಂತನೆಗಳನ್ನು ಕಾಣಬಹುದು.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

16. ಈ ವಾಕ್ಯವನ್ನು ಮಹಾತ್ಮಾ ಗಾಂಧೀಜಿಯವರು ಬರೆದಿರುವ 'ನನ್ನ ಸತ್ಯಾನ್ವೇಷಣೆ' ಎಂಬ ಕೃತಿಯಿಂದ ಆಯ್ದ 'ಗಾಂಧೀಜಿಯ ಬಾಲ್ಯ' ಎಂಬ ಪಾಠದಿಂದ ಆರಿಸಲಾಗಿದೆ. ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

    ಈ ಮಾತನ್ನು ಗಾಂಧೀಜಿಯವರು ಹಿರಿಯರಲ್ಲಿ ದೋಷಗಳನ್ನು ಹುಡುಕಬಾರದೆಂಬುದನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಗಾಂಧೀಜಿಯವರು ಉಪಾಧ್ಯಾಯರಿರುವುದು ವಿದ್ಯಾರ್ಥಿಗಳು ಕಾಪಿ ಮಾಡದಂತೆ ನೋಡಿಕೊಳ್ಳಲು ಎಂದು ತಿಳಿದಿದ್ದರು. ಆದರೆ ಉಪಾಧ್ಯಾಯರೇ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಸೂಚಿಸಿದರು. ಅದು ಗಾಂಧೀಜಿಗೆ ಒಪ್ಪಿಗೆಯಾಗಲಿಲ್ಲ. ಆದರೂ ಇವರಿಗೆ ತಮ್ಮ ಉಪಾಧ್ಯಾಯರ ಮೇಲೆ ಸ್ವಲ್ಪವೂ ಗೌರವ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ಇವರ ಗುಣವಾಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

17. ಈ ವಾಕ್ಯವನ್ನು ಮಹಾತ್ಮಾ ಗಾಂಧೀಜಿಯವರು ಬರೆದಿರುವ 'ನನ್ನ ಸತ್ಯಾನ್ವೇಷಣೆ' ಎಂಬ ಕೃತಿಯಿಂದ ಆಯ್ದ 'ಗಾಂಧೀಜಿಯ ಬಾಲ್ಯ' ಎಂಬ ಪಾಠದಿಂದ ಆರಿಸಲಾಗಿದೆ. ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

    ಈ ಮಾತನ್ನು ಗಾಂಧೀಯವರು ತಮಗೆ ತಾವೇ ಹೇಳಿಕೊಂಡರು. ಬಾಲ್ಯದಲ್ಲಿ ಗಾಂಧೀಜಿಯವರು ಓದಿದ ಶ್ರವಣನ ಪಿತೃಭಕ್ತಿ ಎಂಬ ನಾಟಕ ಹಾಗೂ ಬೊಂಬೆ ಪ್ರದರ್ಶಕರು ತೋರಿಸಿದ ಅದೇ ನಾಟಕದ ಚಿತ್ರಗಳು ಇವರ ಅಂತರಂಗದಲ್ಲಿ ಶಾಶ್ವತವಾಗಿ ನೆಲೆ ನಿಂತಿದ್ದವು. ಗಾಂಧೀಜಿಯವರ ಮನಸ್ಸು ಶ್ರವಣನ ಆದರ್ಶವನ್ನು ಅನುಸರಿಸುವಂತೆ ಪ್ರೇರಣೆ ನೀಡುತ್ತಿತ್ತು ಎಂದು ಹೇಳುವ ಸಂದರ್ಭ ಇದಾಗಿದೆ.

18. ಈ ವಾಕ್ಯವನ್ನು ಮಹಾತ್ಮಾ ಗಾಂಧೀಜಿಯವರು ಬರೆದಿರುವ 'ನನ್ನ ಸತ್ಯಾನ್ವೇಷಣೆ' ಎಂಬ ಕೃತಿಯಿಂದ ಆಯ್ದ 'ಗಾಂಧೀಜಿಯ ಬಾಲ್ಯ' ಎಂಬ ಪಾಠದಿಂದ ಆರಿಸಲಾಗಿದೆ. ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಮಾತನ್ನು ಗಾಂಧೀಜಿಯವರು ತಮ್ಮನ್ನೇ ತಾವು ಕೇಳಿಕೊಳ್ಳುತ್ತಿದ್ದರು. ನಾಟಕ ಮಂಡಳಿ ಪ್ರದರ್ಶಿಸಿದ ಸತ್ಯಹರಿಶ್ಚಂದ್ರ ನಾಟಕ ಇವರ ಮೇಲೆ ಹೆಚ್ಚು ಪ್ರಭಾವ ಬೀರಿತು. ಅವರು ಹಗಲು ರಾತ್ರಿ ಇದೇ ನಾಟಕದ ಬಗ್ಗೆ ಚಿಂತಿಸುತ್ತಿದ್ದರು. ಲೆಕ್ಕವಿಲ್ಲದಷ್ಟು ಬಾರಿ ತಾವೇ ಹರಿಶ್ಚಂದ್ರನಾಗಿ ನಾಟಕವನ್ನೂ ಅಭಿನಯಿಸಿಕೊಂಡರು. ಆಗ ಅವರ ಮನಸ್ಸಿನಲ್ಲಿ ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಎಂಬ ಪ್ರಶ್ನೆ ಅವರಿಗೆ ಅವರೇ ಕೇಳಿಕೊಳ್ಳುತ್ತಿದ್ದ ಸಂದರ್ಭ ಇದಾಗಿದೆ.

19. ಈ ವಾಕ್ಯವನ್ನು ಮಹಾತ್ಮಾ ಗಾಂಧೀಜಿಯವರು ಬರೆದಿರುವ 'ನನ್ನ ಸತ್ಯಾನ್ವೇಷಣೆ' ಎಂಬ ಕೃತಿಯಿಂದ ಆಯ್ದ 'ಗಾಂಧೀಜಿಯ ಬಾಲ್ಯ' ಎಂಬ ಪಾಠದಿಂದ ಆರಿಸಲಾಗಿದೆ. ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಮಾತನ್ನು ಗಾಂಧೀಜಿಯವರು ಹೇಳಿಕೊಂಡಿದ್ದಾರೆ. ಅವರು ಪರೀಕ್ಷೆಯಲ್ಲಿ ಕೆಟಲ್ ಎಂಬ ಪದವನ್ನು ತಪ್ಪಾಗಿ ಬರೆದಿದ್ದರಿಂದ, ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಕಾಪಿ ಮಾಡುವಂತೆ ಎಚ್ಚರಿಸಲು ಪ್ರಯತ್ನಿಸಿದರು. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ಉಪಾಧ್ಯಾಯರ ಉದ್ದೇಶವಾಗಿತ್ತು. ಆದರೆ ಇದು ಅವರಿಗೆ ಒಪ್ಪಿಗೆಯಾಗಲಿಲ್ಲ ಎಂಬುದನ್ನು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

20. ಗಾಂಧೀಜಿಯವರು ಪ್ರೌಢಶಾಲೆಯಲ್ಲಿ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ಇನ್ ಸ್ಪೆಕ್ಟರ್ ಮಿ. ಗೈಲ್ಸ್ ರವರು ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳಲ್ಲಿ 'ಕೆಟಲ್' ಎಂಬ ಪದವೂ ಒಂದು. ಗಾಂಧೀಜಿಯವರು ಅದನ್ನು ತಪ್ಪಾಗಿ ಬರೆದಿದ್ದರು. ಅದನ್ನು ನೋಡಿದ ಅವರ ಉಪಾದ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಎಚ್ಚರಿಸಲು ಪ್ರಯತ್ನಿಸಿದರು. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ಉಪಾಧ್ಯಾಯರ ಉದ್ದೇಶವಾಗಿತ್ತು. ಅದರೆ ಅದು ಗಾಂಧೀಜಿಯವರಿಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ವಿದ್ಯಾರ್ಥಿಗಳು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ತಿಳಿದಿದ್ದರು. ಹಾಗಾಗಿ ಇವರನ್ನು ಹೊರತುಪಡಿಸಿ ಉಳಿದೆಲ್ಲ

ವಿದ್ಯಾರ್ಥಿಗಳು ಐದು ಪದಗಳನ್ನು ಸರಿಯಾಗಿ ಬರೆದಿದ್ದರು. ನಂತರ ಗಾಂಧೀಜಿಯವರ ಮೂರ್ಖತನವನ್ನು ಉಪಾಧ್ಯಾಯರು ತೋರಿಸಲು ಪ್ರಯತ್ನಪಟ್ಟರು. ಅದೂ ವ್ಯರ್ಥವಾಯಿತು. ಕೊನೆ ಗಾಂಧೀಜಿಯವರಿಗೆ ಕಾಪಿ ಮಾಡುವ ಕಲೆ ಬರಲೇ ಇಲ್ಲ.

21. ಶ್ರವಣನ ಪಿತೃಭಕ್ತಿ ನಾಟಕದಲ್ಲಿ ಶ್ರವಣ ತನ್ನ ಕುರುಡು ತಂದೆ-ತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಆ ಅಡ್ಡೆಯನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ದೃಶ್ಯ ಗಾಂಧೀಜಿಯವರ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು ಎಂದು ಪದೇ ಪದೇ ಅವರಿಗೆ ಅವರೇ ಹೇಳಿಕೊಳ್ಳುತ್ತಿದ್ದರು. ಶ್ರವಣ ಕುಮಾರ ಮರಣ ಹೊಂದಿದಾಗ ಅವನ ಮಾತಾಪಿತೃಗಳ ಆರ್ತವಿಲಾಪ ಇವರ ಹೃದಯವನ್ನು ಕರಗಿಸಿತು. ಮೇಲಿನ ಎರಡು ಪ್ರಸಂಗಗಳು ಗಾಂಧೀಜಿಯವರ ಮೇಲೆ ಪ್ರಭಾವ ಬೀರಿ ಹೃದಯ ಕರಗಿತು. ಅದೇ ರೀತಿ ಸತ್ಯ ಹರಿಶ್ಚಂದ್ರ ನಾಟಕ ಗಾಂಧೀಜಿಯವರ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟೂ ನೋಡಿದರೂ ಅವರಿಗೆ ತೃಪ್ತಿಯೇ ಆಗಲಿಲ್ಲ. ಅದರ ಹುಚ್ಚು ತುಂಬಾ ಕಾಡಿತು. ಲೆಕ್ಕವಿಲ್ಲದಷ್ಟು ಸಲ ಅವರೇ ಆ ನಾಟಕವನ್ನು ಅಭಿನಯಿಸಿಕೊಂಡರು. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಎಂಬ ಪ್ರಶ್ನೆ ಅವರಿಗೆ ಅವರೇ ಕೇಳಿಕೊಳ್ಳುತ್ತಿದ್ದರು. ನಾನು ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನು ಪಡಬೇಕು ಎಂದುಕೊಳ್ಳುತ್ತಿದ್ದರು. ಇದೊಂದೆ ಅವರ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶವಾಗಿತ್ತು. ಆ ಕಥೆಯನ್ನು ಅಕ್ಷರಶಃ ನಂಬಿದ್ದರು.

**ಪ್ರಬಂಧ ಬರೆವಣಿಗೆ;**

22. ಗ್ರಂಥಾಲಯದ ಮಹತ್ವ

ಪ್ರಸ್ತಾವನೆ/ಪೀಠಿಕೆ, ಉಪಸಂಹಾರ/ಮುಕ್ತಾಯ/ವಿಷಯ ಸಮಾಪ್ತಿಗೆ 01 ಅಂಕ

ಒಡಲು/ಸಮರ್ಥ ವಿಷಯ ವಿವರಣೆಗೆ 02 ಅಂಕಗಳು

ವಾಕ್ಯರಚನೆ, ಪದಬಂಧ, ಭಾಷಾಶೈಲಿಗೆ 01 ಅಂಕ

ಒಟ್ಟು 04 ಅಂಕಗಳು

- ✓ ಮೌಲ್ಯಮಾಪನಕ್ಕೆ ಸೂಚಿತ ಇತರ ಪ್ರಬಂಧಗಳು;
  - ಜನಸಂಖ್ಯೆ
  - ಹವ್ಯಾಸಗಳು
  - ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ
  - ರಾಷ್ಟ್ರೀಯ ಭಾವೈಕ್ಯತೆ
  - ಪರಿಸರ ಸಂರಕ್ಷಣೆ
  - ಸ್ವಚ್ಛ ಭಾರತ ಅಭಿಯಾನ
  - ರಾಷ್ಟ್ರೀಯ ಹಬ್ಬಗಳು

- ಸಾಮಾಜಿಕ ಪಿಡುಗುಗಳು
- ಬಾಲ ಕಾರ್ಮಿಕ ಪದ್ಧತಿ
- ರೈತರ ಆತ್ಮಹತ್ಯೆಗೆ ಕಾರಣಗಳು – ಪರಿಹಾರಗಳು
- ಕ್ರೀಡೆಗಳು
- ಮಳೆನೀರು ಕೊಯ್ಲು
- ಪೌರತ್ವ ಕಾಯಿದೆ
- ನೆರೆಹಾವಳಿ (ಜಲಪ್ರವಾಹ)
- ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು
- ಆನ್ ಲೈನ್ ಶಿಕ್ಷಣ
- ಸಾವಯವ ಕೃಷಿ
- ಬೆಲೆ ಏರಿಕೆಯ ಪರಿಣಾಮ

## 4. ಸುಕ್ರಿ ಬೊಮ್ಮಗೌಡ

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಅಚಲ
2. (ಸಿ) ಯಣ್
3. (ಬಿ) ಅವಮಾನ
4. (ಬಿ) ಮೊಗ
5. (ಸಿ) ತೃತೀಯ
6. (ಬಿ ಸಂಖ್ಯಾ ಚಕ

**ಒಂದು ಅಂಕದ ಪ್ರಶ್ನೆಗಳು;**

7. ಸುಕ್ರಿ ಮನೆಯವರು ಕುಂಬರಿ ರೀತಿಯ ಬೇಸಾಯವನ್ನು ಅವಲಂಭಿಸಿದ್ದರು.
8. ಸುಕ್ರಿಯವರ ತಂದೆ ಸುಬ್ಬ, ತಾಯಿ ದೇವಿ.
9. ಸುಕ್ರಿಯವರು ಬಾಲ್ಯದಲ್ಲಿ ಅಟ್ಟೆ, ಕಣ್ಕಟ್ಟು, ಹುಳ್ಕಿ ಮಂಡದ ಆಟಗಳನ್ನು ಆಡುತ್ತಿದ್ದರು.
10. ಹಾಲಕ್ಕಿ ಕುಟುಂಬದವರ ಸಂಬಂಧ ಹೆಚ್ಚಾಗಿ ಕಾಡಿನ ಜೀವಿಗಳೊಂದಿಗೆ ಇತ್ತು.
11. ಸುಕ್ರಿಯವರ ತಂದೆಯಲ್ಲಿ ಗುಮಟೆ ವಾದ್ಯಗಾರಿಕೆ ಮತ್ತು ಸುಗ್ಗಿ ನೃತ್ಯಗಾರಿಕೆ ಎಂಬ ಜಾನಪದ ಕಲೆಗಳಿದ್ದವು.
12. ಲೇಖಕಿಯವರಿಗೆ ಸುಕ್ರಿಯವರು ಪರಿಚಯಿಸಿದ ಉದ್ದದ ಹುಲ್ಲಿನ ಹೆಸರು ಕಟ್ವಾಡೆ, ಕುಟ್ವಾಡೆ, ಕಟ್ಟಿದ್ರೆ ಚೂಡಾಡೆ.

13. ಸುಕ್ರಿಯವರಲ್ಲಿ ಕಂಡುಬರುವ ವಿಶೇಷ ಗುಣ ನಾಡಿನಲ್ಲಿ ವಾಸವಾಗಿದ್ದರೂ ಪೂರ್ವಜರು ಕಾಡಿನಲ್ಲಿ ನೆಲೆಸಿ ಪಡೆದ ಅನುಭವವನ್ನು ಬಿಸಾಡದೇ ಹಿಡಿದಿಟ್ಟುಕೊಂಡಿರುವುದು.
14. ಸುಕ್ರಿಯವರು ಹಾಲಕ್ಕಿ ಒಕ್ಕಲು ಜನಾಂಗಕ್ಕೆ ಸೇರಿದ ಮಹಿಳೆ.
15. ಸುಕ್ರಿಯವರು ಮಳೆರಾಯನನ್ನು ಒಲಿಸಿಕೊಳ್ಳಲು ಚಣ್ಣ ಮೊಳೆ ಹೊಯ್ಯಲೆ ಚಣ್ಣ ಕೆರೆ ತುಂಬಲೆ ಎಂಬ ಹಾಡನ್ನು ಹಾಡುತ್ತಿದ್ದರು.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

16. ಸುಕ್ರಿಯವರು ಶಾಲೆಯಲ್ಲಿ ಕಲಿತವರಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು, ಗದ್ದೆಯನ್ನೆ ಕ್ರೀಡಾಂಗಣವನ್ನಾಗಿಸಿಕೊಂಡು ಅಟ್ಟೆ ಆಟ, ಕಣ್ಕಟ್ಟಾಟ, ಹುಳ್ಕಿ ಮಂಡಲದ ಆಟಗಳನ್ನು ಆಡುತ್ತಿದ್ದರು. ಈ ಆಟಗಳಿಗೆ ಗದ್ದೆ ಬಯಲುಗಳೇ ತರಬೇತಿ ಶಾಲೆಗಳಾಗಿದ್ದವು.
17. ಸುಕ್ರಿಯವರಿಗೆ ಕಾಡಿನ ಗಿಡಮರಗಳು ಆಪ್ತವಾಗಿದ್ದವು. ಔಷಧೀಯ ಸಸ್ಯಗಳ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಅದರಲ್ಲಿ ಚಿರಕಲ, ಹಳ್ಚೆರಿ ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಇವರಿಗಿತ್ತು.
18. ಸುಕ್ರಿಯವರು ಕೊರಳ ತುಂಬ ಅಂಕೋಲೆಯ ಪರಂಪರಾಗತ ಶೈಲಿಯಲ್ಲಿ ಮಣಿಸರಗಳನ್ನು ಧರಿಸುತ್ತಿದ್ದರು. ಜೊತೆಗೆ ಹಾಲಕ್ಕಿ ಒಕ್ಕಲ ಗೇಟ್ಗಿ ಶೈಲಿಯಲ್ಲಿ ಸೀರೆಯನ್ನುಡುತ್ತಿದ್ದರು.
19. ಸುಕ್ರಿಯವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ ಪ್ರಶಸ್ತಿ, ನಾಡಿನ ಅತ್ಯುನ್ನತ ನಾಡೋಜ ಪ್ರಶಸ್ತಿಗಳು ಮತ್ತು ರಾಜ್ಯ ಮಟ್ಟದ ಸಂಘ ಸಂಸ್ಥೆಗಳಲ್ಲದೆ ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ.

**ಕವಿ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ
ಕೃತಿ, ಬಿರುದು/ಪ್ರಶಸ್ತಿ 01 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ
ಒಟ್ಟು 03 ಅಂಕಗಳು

20. ಶಾಂತಿನಾಯಕ ಅವರು 1943 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಬೇಲೇಕೇರಿಯಲ್ಲಿ ಜನಿಸಿದರು. ಇವರು ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಕಥೆಗಳು, ರಂಗೋಲಿ, ಜೀವ ಉಳಿಸುವ ಮರಗಳು, ಸುಕ್ರಿ ಬೊಮ್ಮಗೌಡ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ,

ಪದ್ಮಭೂಷಣ ಡಾ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

21. ಈ ವಾಕ್ಯವನ್ನು ಶಾಂತಿ ನಾಯಕರವರು ಬರೆದಿರುವ 'ಸುಕ್ರಿ ಬೊಮ್ಮಗೌಡ' ಕೃತಿಯಿಂದ ಆಯ್ದ 'ಸುಕ್ರಿ ಬೊಮ್ಮಗೌಡ' ಎಂಬ ಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿ ಸುಕ್ರಿಯವರ ಸಸ್ಯಜ್ಞಾನವನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಸುಕ್ರಿಯವರು ಪ್ರಾಣಿ, ಪಕ್ಷಿ ಮುಂತಾದ ಚರಜೀವಿ, ಸಸ್ಯಾದಿ ಅಚರ ಜೀವ ವೈವಿಧ್ಯದ ಜ್ಞಾನದ ನಿಧಿಯಾಗಿದ್ದರು. ಅವರು ತಮ್ಮ ತಾಯಿಯೊಂದಿಗೆ ಬೆಟ್ಟದ ಬಳಿ ಕೃಷಿ ಕೆಲಸಕ್ಕೆ ಹೋಗುವಾಗ ಅನೇಕ ಸಸ್ಯಗಳ ಬಗ್ಗೆ ಜ್ಞಾನವನ್ನು ಪಡೆದರು. ನಂತರ ಬೆಳೆದು ದೊಡ್ಡವರಾದಾಗ, ಸೌದೆ ತರಲು ಹೋದಾಗ ಇನ್ನಷ್ಟು ಮರಮುಟ್ಟುಗಳ ಜ್ಞಾನವನ್ನು ಪಡೆದುಕೊಂಡರು. ಕಾಡಿನ ಜೊತೆಯಿದ್ದು, ಜನಪದ ಶಾಸ್ತ್ರಗಳ ಅಪೂರ್ವ ಅನುಭವವನ್ನು ಪಡೆದುಕೊಂಡರು ಎಂದು ಹೇಳುವಾಗ ಈ ಮಾತು ಬಂದಿದೆ.

22. ಈ ವಾಕ್ಯವನ್ನು ಶಾಂತಿ ನಾಯಕರವರು ಬರೆದಿರುವ 'ಸುಕ್ರಿ ಬೊಮ್ಮಗೌಡ' ಕೃತಿಯಿಂದ ಆಯ್ದ 'ಸುಕ್ರಿ ಬೊಮ್ಮಗೌಡ' ಎಂಬ ಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರು ಸುಕ್ರಿಯವರ ಸಸ್ಯಜ್ಞಾನವನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಸುಕ್ರಿಯವರು ಕಾಡಿನ ಸಾಮಾನ್ಯ ಹುಲ್ಲುಕಡ್ಡಿಗಳ ಬಗ್ಗೆಯೂ ಚೆನ್ನಾಗಿ ಬಲ್ಲವರಾಗಿದ್ದರು. ಒಮ್ಮೆ ಸುಕ್ರಿಯವರೊಂದಿಗೆ ಲೇಖಕಿಯವರು ಬಯಲಿನಲ್ಲಿ ಹೋಗುತ್ತಿರುವಾಗ ಸುಕ್ರಿಯವರು ಒಂದು ಜಾತಿಯ ಹುಲ್ಲಿನ ಹತ್ತಾರು ಹೂ-ತೆನೆಗಳನ್ನು ಕೊಯ್ದುಕೊಂಡು ಆ ಹುಲ್ಲನ್ನು ಪರಿಚಯಿಸುವಾಗ ಈ ಮೇಲಿನ ಮಾತು ಬಂದಿದೆ.

23. ಈ ವಾಕ್ಯವನ್ನು ಶಾಂತಿ ನಾಯಕರವರು ಬರೆದಿರುವ 'ಸುಕ್ರಿ ಬೊಮ್ಮಗೌಡ' ಕೃತಿಯಿಂದ ಆಯ್ದ 'ಸುಕ್ರಿ ಬೊಮ್ಮಗೌಡ' ಎಂಬ ಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರು ಸುಕ್ರಿಯವರ ಸಾಮಾಜಿಕ ಕಳಕಳಿಯನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಸುಕ್ರಿಯವರು ಸಮಾಜದ ಒಳಿತಿಗಾಗಿ ಅನೇಕ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಓದು ಬರಹ ಅರಿಯದಿದ್ದರೂ ಸಾಮಾಜಿಕ ಕೆಡಕು, ಒಳಿತುಗಳ ಬಗ್ಗೆ ಅರಿವುಳ್ಳವರಾಗಿದ್ದರು. ಹಾಗಾಗಿ ಅಂತಹ ಚಳುವಳಿಗಳಲ್ಲಿ ಭಾಗವಹಿಸಿ, ಜೊತೆಯ

ಹೋರಾಟಗಾರರನ್ನು ಪ್ರೋತ್ಸಾಹಿಸುತ್ತಿದ್ದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

24. ಸುಕ್ರಿಯ ಅಕ್ಕ ಮತ್ತು ತಾಯಿ ಉತ್ತಮ ಹಾಡುಗಾರರಾಗಿದ್ದರು. ಅಪ್ಪ ಗುಮಟೆ ವಾದ್ಯಗಾರಿಕೆಯನ್ನು ಸುಗ್ಗಿ ನೃತ್ಯಗಾರಿಕೆಯನ್ನು ಬಲ್ಲವರಾಗಿದ್ದರು. ಸುಕ್ರಿಯೂ ಶಾಲೆಯಲ್ಲಿ ಕಲಿತವರಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು, ಗದ್ದೆಯನ್ನೆ ಕ್ರೀಡಾಂಗಣವನ್ನಾಗಿಸಿಕೊಂಡು ಅಟ್ಟೆ ಆಟ, ಕಣ್ಮಟ್ಟಾಟ, ಹುಳ್ಕಿ ಮಂಡಲದ ಆಟಗಳನ್ನು ಆಡುತ್ತಿದ್ದರು. ಈ ಆಟಗಳಿಗೆ ಗದ್ದೆ ಬಯಲುಗಳೇ ತರಬೇತಿ ಶಾಲೆಗಳಾಗಿದ್ದವು. ಇಲ್ಲಿಯೇ ಸುಕ್ರಿ ಹೆಣ್ಣುಮಕ್ಕಳ ಜೊತೆ ತಾರ್ಲೆ ಕುಣಿತವನ್ನು ಕುಣಿಯುತ್ತಿದ್ದರು. ಸುಕ್ರಿಯವರು ಮಳೆರಾಯನನ್ನು ಒಲಿಸಿಕೊಳ್ಳಲು ಚಣ್ಣ ಮೊಳೆ ಹೊಯ್ಯಲೆ, ಚಣ್ಣ ಕೆರೆ ತುಂಬಲೆ ಎಂಬ ಹಾಡನ್ನು ಊರಿನ ಹೆಂಗಸರ ಜೊತೆ ಹಾಡುತ್ತಾ ಕುಣಿಯುತ್ತಿದ್ದರು. ಈ ರೀತಿಯಲ್ಲಿ ಸುಕ್ರಿಯವರು ಜಾನಪದದ ಗಣಿಯಾಗಿದ್ದರು.
25. ಸುಕ್ರಿಯವರು ಪ್ರಾಣಿ, ಪಕ್ಷಿ ಮುಂತಾದ ಚರಜೀವಿ, ಸಸ್ಯಾದಿ ಅಚರ ಜೀವ ವೈವಿಧ್ಯದ ಜ್ಞಾನದ ನಿಧಿಯಾಗಿದ್ದರು. ಅವರು ತಮ್ಮ ತಾಯಿಯೊಂದಿಗೆ ಬೆಟ್ಟದ ಬಳಿ ಕೃಷಿ ಕೆಲಸಕ್ಕೆ ಹೋಗುವಾಗ ಅನೇಕ ಸಸ್ಯಗಳ ಬಗ್ಗೆ ಜ್ಞಾನವನ್ನು ಪಡೆದರು. ನಂತರ ಬೆಳೆದು ದೊಡ್ಡವರಾದಾಗ, ಸೌದೆ ತರಲು ಹೋದಾಗ ಇನ್ನಷ್ಟು ಮರಮುಟ್ಟುಗಳ ಜ್ಞಾನವನ್ನು ಪಡೆದುಕೊಂಡರು. ಕಾಡಿನ ಜೊತೆಯಿದ್ದು, ಜನಪದ ಶಾಸ್ತ್ರಗಳ ಅಪೂರ್ವ ಅನುಭವವನ್ನು ಪಡೆದುಕೊಂಡಿದ್ದರು. ಸುಕ್ರಿಯವರಿಗೆ ಕಾಡಿನ ಗಿಡಮರಗಳು ಆಪ್ತವಾಗಿದ್ದವು. ಔಷಧೀಯ ಸಸ್ಯಗಳ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಅದರಲ್ಲಿ ಚಿರಕಲ, ಹಳ್ಚೆರಿ ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಇವರಿಗಿತ್ತು. ಕಾಡಿನ ಸಾಮಾನ್ಯ ಹುಲ್ಲುಕಡ್ಡಿಗಳ ಬಗ್ಗೆಯೂ ಚೆನ್ನಾಗಿ ಬಲ್ಲವರಾಗಿದ್ದರು. ಒಮ್ಮೆ ಸುಕ್ರಿಯವರೊಂದಿಗೆ ಲೇಖಕಿಯವರು ಬಯಲಿನಲ್ಲಿ ಹೋಗುತ್ತಿರುವಾಗ ಸುಕ್ರಿಯವರು ಒಂದು ಜಾತಿಯ ಹುಲ್ಲಿನ ಹತ್ತಾರು ಹೂ-ತೆನೆಗಳನ್ನು ಕೊಯ್ದುಕೊಂಡು ಆ ಹುಲ್ಲನ್ನು ಪರಿಚಯಿಸಿದ್ದರು. ಈ ರೀತಿಯಾಗಿ ಸುಕ್ರಿಯವರ ಕಾಡಿನ ಸಂಬಂಧ ಅಪಾರವಾಗಿತ್ತು.
26. ಸುಕ್ರಿಯವರು ಸಮಾಜಕ್ಕೆ ಒಳಿತಾಗುವ ಅನೇಕ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಇವರು ರೈತಪರ ಹೋರಾಟದಲ್ಲಿ ಕಾಲ್ನಡಿಗೆಯಲ್ಲಿಯೇ ರೈತರ ಜೊತೆಗೆ ಕಾರವಾರಕ್ಕೆ ಹೋಗಿ ಚಳುವಳಿ

ನಡೆಸಿದರು. ಸಮಾಜಕ್ಕೆ ಒಳಿತಾಗುವ ಎಲ್ಲಾ ಚಳುವಳಿಗಳಲ್ಲಿ ಅಗ್ರ ಪಂಕ್ತಿಯಲ್ಲಿ ನಿಂತಿದ್ದರು. ಕೋಟೆಬಾವಿ ಚಳುವಳಿ, ಬುಡಕಟ್ಟು ಜಿಲ್ಲಾ ಚಳುವಳಿ, ಸಾಕ್ಷರತಾ ಆಂದೋಲನ, ಮದ್ಯಪಾನ ವಿರೋಧಿ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇವರಿಗೆ ಓದು-ಬರಹ ಬರದಿದ್ದರೂ ಸಾಮಾಜಿಕ ಕೆಡಕು ಯಾವುದು? ಒಳಿತು ಯಾವುದು? ಎಂಬುದರ ಸ್ಪಷ್ಟ ಅರಿವಿತ್ತು. ಸಮಾಜಕ್ಕೆ ಒಳಿತಾಗುವ ಚಳುವಳಿಗಳಲ್ಲಿ ಭಾಗವಹಿಸಿ ಜೊತೆಯ ಹೋರಾಟಗಾರರಿಗೆ ಪ್ರೋತ್ಸಾಹ ನೀಡುವಲ್ಲಿ ಸುಕ್ರಿಯವರು ಎತ್ತಿದ ಕೈ. ಇವರು ಚಳುವಳಿಯ ಸಮಯದಲ್ಲಿ ಮುಂಚೂಣಿಯಲ್ಲಿದ್ದರೆ ಸಾಕು ಚಳುವಳಿಗಾರರಿಗೆ ಆನೆಬಲ ಬರುತ್ತಿತ್ತು. ಇವೆಲ್ಲಾ ನಿದರ್ಶನಗಳು ಸುಕ್ರಿ ಬೊಮ್ಮಗೌಡರವರು ಸಾಮಾಜಿಕ ಕಳಕಳಿ ಹೊಂದಿರುವ ಮಹಿಳೆ ಎಂಬುದನ್ನು ತಿಳಿಸುತ್ತದೆ.

↔

## ಪದ್ಯ ಭಾಗ

## 1. ಅನ್ವೇಷಣೆ

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ಹುಡುಕು
2. (ಬಿ) ವಿಷ
3. (ಎ) ಲೋಪ
4. (ಸಿ) ಗಿಡ-ಮರ

**ಒಂದು ಅಂಕದ ಪ್ರಶ್ನೆಗಳು;**

5. ಕವಿ ಶಿವರುದ್ರಪ್ಪನವರು ದೇವರನ್ನು ಕಲ್ಲು ಮಣ್ಣುಗಳ ರೂಪದಲ್ಲಿ ಕಂಡರು.
6. ಕವಿ ಶಿವರುದ್ರಪ್ಪನವರು ಮೊದಲು ದೇವರನ್ನು ಕಲ್ಲು ಮಣ್ಣುಗಳ ಗುಡಿಯೊಳಗೆ ಹುಡುಕಿ ವಿಫಲರಾದರು.
7. ನಂದನವೆಂದರೆ ನಮ್ಮಲ್ಲಿರುವ ಸುಖ, ಸಂತೋಷ, ನೆಮ್ಮದಿಗಳು. ಬಂಧನವೆಂದರೆ ನಮ್ಮ ಜೀವನದಲ್ಲಿ ಬರುವ ಕಷ್ಟಗಳು.
8. ನಂದನ ಮತ್ತು ಬಂಧನ ಇವು ನಮ್ಮೊಳಗಿವೆ ಎಂದು ಕವಿ ಹೇಳಿದ್ದಾರೆ.
9. ಒಳಗಿನ ತಿಳಿಯನು ಕಲಕದೆ ಇದ್ದಾಗ ಅಮೃತದ ಸವಿ ನಾಲಗೆಗೆ ಸಿಗುತ್ತದೆ.
10. ಬದುಕಿನಲ್ಲಿ ಹೊಂದಾಣಿಕೆ ಎಂಬುದು ಕಷ್ಟ ಎಂದು ಕವಿ ಹೇಳಿದ್ದಾರೆ.
11. ಮಾನವನಲ್ಲಿ ಅಹಂ ತುಂಬಿದಾಗ ಹತ್ತಿರವಿದ್ದರೂ, ದೂರ ನಿಲ್ಲುವ ರೀತಿಯಲ್ಲಿ ವರ್ತಿಸುತ್ತಾನೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

12. ಕವಿ ಶಿವರುದ್ರಪ್ಪರವರ ಪ್ರಕಾರ ಮನುಷ್ಯ ದೇವರನ್ನು ಕಲ್ಲು ಮಣ್ಣುಗಳಿಂದ ಕಟ್ಟಿದ ದೇವಾಲಯಗಳಲ್ಲಿ ಹುಡುಕುತ್ತಾನೆ. ಆದರೆ ಅಲ್ಲಿ ದೇವರು ಕಾಣುವುದಿಲ್ಲ. ಕೊನೆಗೆ ದೇವರು ಸುಖ-ಸಂತೋಷಗಳಿಂದಿರುವ ಮನುಷ್ಯನ ಹೃದಯದಲ್ಲಿಯೇ ಪ್ರೀತಿ ಸ್ನೇಹಗಳ ರೂಪದಲ್ಲಿ ಇದ್ದಾನೆ ಎಂಬುದನ್ನು ಕವಿ ತಿಳಿಸಿಕೊಟ್ಟಿದ್ದಾರೆ.
13. ಕವಿ ಶಿವರುದ್ರಪ್ಪನವರು ಹೇಳುವಂತೆ ಬದುಕಿನಲ್ಲಿ ಹೊಂದಿಕೊಂಡು ಹೋಗುವುದು ಕಷ್ಟ. ಮನುಷ್ಯ ತನ್ನ ಸುತ್ತ ಅಹಂಕಾರದ ಕೋಟೆಯನ್ನು ಕಟ್ಟಿಕೊಂಡಿದ್ದಾನೆ. ಇದರಿಂದ ಅವನ ಸಂಬಂಧಗಳು ದೈಹಿಕವಾಗಿ ಹತ್ತಿರವಿದ್ದರೂ, ದೂರ ಸರಿದಿವೆ. ತಾನು, ತನ್ನದು ಎಂಬ ಮನೋಭಾವವನ್ನು ತೊಡೆದು ಹಾಕಿ, ಪ್ರೀತಿ ಸ್ನೇಹದಿಂದ ಎಲ್ಲರೊಂದಿಗೂ ಹೊಂದಿಕೊಂಡು ಹೋದಾಗ ಮಾತ್ರ ನೆಮ್ಮದಿಯ ಬದುಕನ್ನು ಪಡೆಯಬಹುದು ಎಂದು ಕವಿ ಹೇಳಿದ್ದಾರೆ.

**ಕವಿ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ
ಕೃತಿ, ಬಿರುದು/ಪ್ರಶಸ್ತಿ01ಅಂಕ
ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ
ಒಟ್ಟು 03 ಅಂಕಗಳು

14. ಕವಿ ಶಿವರುದ್ರಪ್ಪನವರು 1926ರಲ್ಲಿ ಶಿವಮೊಗ್ಗದ ಶಿಕಾರಿಪುರದ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಸಾಮಗಾನ, ಗೋಡೆ, ತೆರೆದದಾರಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ರಾಷ್ಟ್ರಕವಿಗಳಾದ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ
ಸಂದರ್ಭದ ವಿವರಣೆ 01 ಅಂಕ
ಸ್ವಾರಸ್ಯಕ್ಕೆ 01 ಅಂಕ
ಒಟ್ಟು 03 ಅಂಕಗಳು

15. ಈ ವಾಕ್ಯವನ್ನು ಜಿ ಎಸ್ ಶಿವರುದ್ರಪ್ಪನವರು ಬರೆದಿರುವ 'ಗೋಡೆ' ಕವನ ಸಂಕಲನದಿಂದ ಆಯ್ದ 'ಅನ್ವೇಷಣೆ' ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ನಮ್ಮಲ್ಲಿರುವ ಪ್ರೀತಿ ಸ್ನೇಹವೆಂಬ ದೇವರನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಮನುಷ್ಯ ದೇವರನ್ನು ಕಲ್ಲು-ಮಣ್ಣುಗಳಿಂದ ಕಟ್ಟಿದ ದೇವಾಲಯಗಳಲ್ಲಿ ಹುಡುಕುತ್ತಾನೆ. ಆದರೆ ಅಲ್ಲಿ ದೇವರು ಕಾಣುವುದಿಲ್ಲ. ಕೊನೆಗೆ ದೇವರು ಸುಖ-ಸಂತೋಷಗಳಿಂದಿರುವ ಮನುಷ್ಯನ ಹೃದಯದಲ್ಲಿಯೇ ಪ್ರೀತಿ-ಸ್ನೇಹಗಳ ರೂಪದಲ್ಲಿ ಇದ್ದಾನೆ ಎಂಬುದನ್ನು ಕವಿ ತಿಳಿಸಿಕೊಟ್ಟಿದ್ದಾರೆ.

ಮನುಷ್ಯರಲ್ಲಿ ಪ್ರೀತಿ ಸ್ನೇಹಗಳಿರಬೇಕು ಎಂಬುದು ಈ ಮಾತಿನ ಸ್ವಾರಸ್ಯ.

16. ಈ ವಾಕ್ಯವನ್ನು ಜಿ ಎಸ್ ಶಿವರುದ್ರಪ್ಪನವರು ಬರೆದಿರುವ 'ಗೋಡೆ' ಕವನ ಸಂಕಲನದಿಂದ ಆಯ್ದ 'ಅನ್ವೇಷಣೆ' ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ಹೃದಯವೆಂಬ ತಿಳಿ ಸರೋವರದಲ್ಲಿರುವ ಅಮೃತದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಮನುಷ್ಯರಲ್ಲಿ ಪ್ರೀತಿ ಸ್ನೇಹವೆಂಬ ನಂದನವನವೂ ಇದೆ. ತಾನು ತನ್ನದೆಂಬ ಬಂಧನವೂ ಇದೆ. ಅವನ ಹೃದಯವೆಂಬ ತಿಳಿ ಸರೋವರದಲ್ಲಿ ಅಡಗಿರುವ ಅಹಂಕಾರವನ್ನು ಕಲಕದೆ ಪ್ರೀತಿ ಸ್ನೇಹವನ್ನು ಹಂಚಿದಾಗ ಮಾತ್ರ ಆತನಿಗೆ ಆನಂದವೆಂಬ ಅಮೃತವನ್ನು ಸವಿಯಲು ಸಾಧ್ಯ ಎಂದು ಹೇಳುವಾಗ ಈ ಮಾತು ಬಂದಿದೆ.

ನಮ್ಮೊಳಗಿನ ಕೆಟ್ಟತನವನ್ನು ಕಲಕಿ ಬೇರೆಯವರಲ್ಲೂ ಹಾಳಾಗಬಾರದು ಎಂಬುದು ಇದರ ಆಶಯ.

17. ಈ ವಾಕ್ಯವನ್ನು ಜಿ ಎಸ್ ಶಿವರುದ್ರಪ್ಪನವರು ಬರೆದಿರುವ 'ಗೋಡೆ' ಕವನ ಸಂಕಲನದಿಂದ ಆಯ್ದ 'ಅನ್ವೇಷಣೆ' ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ಮನುಷ್ಯ ಅಹಂಕಾರದಿಂದ ತನ್ನೆಲ್ಲ ಸ್ನೇಹ ಸಂಬಂಧಗಳನ್ನು ದೂರ ಮಾಡಿಕೊಂಡಿದ್ದಾನೆ ಎಂದು ಓದುಗರಿಗೆ ಹೇಳಿದ್ದಾರೆ. ಮನುಷ್ಯ ತನ್ನ ಸುತ್ತ ಅಹಂಕಾರದ ಕೋಟೆಯನ್ನು ಕಟ್ಟಿಕೊಂಡಿದ್ದಾನೆ. ಇದರಿಂದ ಅವನ ಸಂಬಂಧಗಳು ದೈಹಿಕವಾಗಿ ಹತ್ತಿರವಿದ್ದರೂ, ದೂರ ಸರಿದಿವೆ ಎಂದು ಹೇಳುವ ಸಂದರ್ಭ ಇದಾಗಿದೆ.

ಮನುಷ್ಯರಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕೆಂಬುದು ಈ ಮಾತಿನ ಸ್ವಾರಸ್ಯ.

**ಪದ್ಯಭಾಗವನ್ನು ಪೂರ್ಣಗೊಳಿಸುವುದು;** (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 01 ಅಂಕ)

18. ಹತ್ತಿರವಿದ್ದೂ, ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ ||

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

19. ಕವಿ ಶಿವರುದ್ರಪ್ಪರವರು ದೇವರಾಗಲೀ, ಆನಂದವಾಗಲೀ ಇವುಗಳನ್ನು ಬೇರೆ ಕಡೆ ಹುಡುಕಿದರೆ ಸಿಗುವಂತಹುಗಳಲ್ಲ. ನಮ್ಮ ಆಂತರ್ಯದಲ್ಲೇ ಇರುವಂತಹುಗಳು. ಸುಖಕ್ಕಾಗಿ ಹಾಗೂ ಕಷ್ಟ ಪರಿಹಾರಕ್ಕಾಗಿ ದೇವರನ್ನು ಬೇಡಿದರೆ ಪ್ರಯೋಜನವಿಲ್ಲ. ಅವುಗಳನ್ನು ನಾವೇ ಪಡೆಯಬೇಕು. ನಮ್ಮ ಕಷ್ಟಗಳನ್ನು ಹಾಗೂ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬೇಕು. ಪ್ರೀತಿ ಸ್ನೇಹವೆಂಬ

ಚಿಲುಮೆಯನ್ನು ನಮ್ಮ ಸುತ್ತ ಮುತ್ತಲು ಹಂಚಬೇಕು. ಇದರ ಮೂಲಕ ನಾನು ಎಂಬ ಗರ್ವವನ್ನು ಬಿಟ್ಟು ಬದುಕಬೇಕೆಂಬುದಾಗಿ ತಿಳಿಸಿರುತ್ತಾರೆ. ತಾನು, ತನ್ನದು ಎಂಬ ಮನೋಭಾವವನ್ನು ತೊಡೆದು ಹಾಕಿ, ಪ್ರೀತಿ ಸ್ನೇಹದಿಂದ ಎಲ್ಲರೊಂದಿಗೂ ಹೊಂದಿಕೊಂಡು ಹೋದಾಗ ಮಾತ್ರ ನೆಮ್ಮದಿಯ ಬದುಕನ್ನು ಪಡೆಯಬಹುದು ಎಂದು ಕವಿ ಹೇಳಿದ್ದಾರೆ.

## 2. ಹಾರಿದ ಹಕ್ಕಿಗಳು

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಧ್ವನಿ
2. (ಎ) ಪಕ್ಷಿ
3. (ಎ) ಹಾವು-ಅಣ್ಣು

**ಒಂದು ಅಂಕದ ಪ್ರಶ್ನೆಗಳು;**

4. ಕವಿಯವರ ಪ್ರಕಾರ ಉದ್ಯಾನದ ಗಿಡಗಳು ಬಣ್ಣ ಬಣ್ಣದ ಹೂವುಗಳಿಂದ ಬಳುಕುತ್ತಾ, ಅಲುಗಾಡುತ್ತಾ, ಸಮೃದ್ಧವಾಗಿ ಬೆಳೆದು ನಿಂತಿದ್ದವು.
5. ಬಣ್ಣ ಬಣ್ಣದ ಹಕ್ಕಿಗಳು ಬಣ್ಣ ಬಣ್ಣದ ಹೂವುಗಳಿಂದ ಸಮೃದ್ಧವಾಗಿ ಬೆಳದಿದ್ದ ಗಿಡಗಳ ಸೌಂದರ್ಯವನ್ನು ಕಂಡು ಉಲಿಯುತ್ತಿದ್ದವು.
6. ಬಣ್ಣ ಬಣ್ಣ ಹಕ್ಕಿಗಳಿಗೆ ಅವುಗಳ ಮಾಂಸವನ್ನು ಪಡೆಯಲು ಚಿಟಬಿಲುಗಳಿಂದ ಹೊಡೆಯಲಾಯಿತು.
7. ಹಕ್ಕಿಗಳು ಪ್ರಾಣ ರಕ್ಷಣೆಗಾಗಿ ಬೇರೆ ಕಡೆಗೆ ಹಾರಿ ಹೋದವು.
8. ಹಾರಿ ಹೋದ ಹಕ್ಕಿಗಳು ಸಮಯ ಬಂದಾಗ ತಿರುಗಿ ಬೀಳಬಹುದು.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

9. ಸಮೃದ್ಧ ನಾಡಿನಲ್ಲಿ ಸುಖ ಸಂತೋಷದಿಂದ ಸ್ವಚ್ಛಂದವಾಗಿ ದುಡಿಯುವವರಿಗೆ ತೊಂದರೆಗಳಾದರೆ ಅವರು ಸುಖದ ನೆಲೆಯನ್ನು ಹುಡುಕಿ ಬೇರೆಡೆ ಹೋಗುತ್ತಾರೆ. ಇದರಿಂದ ಸಮೃದ್ಧ ನಾಡನ್ನು ಕಟ್ಟಲು ಸಾಧ್ಯವಿಲ್ಲ. ಒಮ್ಮೆ ಎಂತಹ ದುಡಿಯುವ ವರ್ಗವನ್ನು ಕಳೆದುಕೊಂಡು ಮತ್ತೊಮ್ಮೆ ಅವರನ್ನು ಹಿಂತಿರುಗಿ ಮಾತೃಸ್ಥಾನಕ್ಕೆ ಬನ್ನಿ ಎಂದು ಬಲವಂತ ಪಡಿಸಿದರೆ, ಅವರು ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುತ್ತಾರೆ. ಹಾಗಾಗಿ ವ್ಯವಸ್ಥೆಗಳು, ಸಂಪನ್ಮೂಲಗಳು ಸರ್ವರ ಹಿತವನ್ನು ಕಾಪಾಡುವಂತಿರಬೇಕೆಂಬ ಸಂದೇಶವನ್ನು ಕವಿ ಭಂಡಾರಿಯವರು ಹಾರಿದ ಹಕ್ಕಿಗಳು ಎಂಬ ಕವಿತೆಯ ಮೂಲಕ ನೀಡಿದ್ದಾರೆ.

10. ಹಕ್ಕಿಗಳ ಮಾಂಸದ ಆಸೆಗಾಗಿ ಚಿಟಬಿಲ್ಲು ತೆಗೆದುಕೊಂಡು ಹಕ್ಕಿಗಳನ್ನು ಗುರಿಯಿಟ್ಟು ಹೊಡೆಯಲಾರಂಭಿಸಿದರು. ಇದರಿಂದ ಉದ್ಯಾನವನದ ಹಕ್ಕಿಗಳು ತೊಂದರೆಗೆ ಒಳಗಾದವು. ಇದರ ಪರಿಣಾಮವಾಗಿ ಹಕ್ಕಿಗಳು ಉದ್ಯಾನವನ್ನು ಬಿಟ್ಟು ಪ್ರಾಣ ರಕ್ಷಣೆಗಾಗಿ ಹಾರಿ ಹೋದವು. ಹಕ್ಕಿಗಳು ಎಲ್ಲಿ ಅವುಗಳಿಗೆ ಸ್ವಚ್ಛಂದವಾಗಿ ಹೂವು-ಹಣ್ಣುಗಳು ದೊರೆಯುತ್ತದೆಯೋ ಆ ಜಾಗವನ್ನು ಹುಡುಕಿಕೊಂಡು ಹೊರಟವು. ಇದರಿಂದ ಸುಂದರವಾದ ಉದ್ಯಾನವನವು ಬರಡಾಗಿ ಬಡವಾಯಿತು.

**ಕವಿ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

11. ರೋಹಿದಾಸ ವಿಠ್ಠಲ ಭಂಡಾರಿಯವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕೆರೆಕೋಣ ಎಂಬಲ್ಲಿ 1936ರಲ್ಲಿ ಜನಿಸಿದರು. ಇವರು ಕೊಲೆಗಾರ, ಹದ್ದುಗಳು, ತಲೆಮಾರು, ಬಿರುಗಾಳಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ವಾಜಂತ್ರಿ ಶಿಕ್ಷಕ ಪ್ರಶಸ್ತಿ, ಜಿಲ್ಲೆ ಹಾಗೂ ರಾಜ್ಯ ಶಿಕ್ಷಕ ಪ್ರಶಸ್ತಿ, ಸಿಸು ಸಂಗಮೇಶ ದತ್ತಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ದೊರೆತಿವೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

12. ಈ ವಾಕ್ಯವನ್ನು ಆರ್ ವಿ ಭಂಡಾರಿಯವರು ಬರೆದಿರುವ 'ಹದ್ದುಗಳು' ಕವನ ಸಂಕಲನದಿಂದ ಆಯ್ದ 'ಹಾರಿದ ಹಕ್ಕಿಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಕವಿ ಬಣ್ಣ ಬಣ್ಣದ ಹಕ್ಕಿಗಳ ಉಲಿತದಿಂದ ಇಮ್ಮಡಿಯಾದ ಉದ್ಯಾನದ ಸೌಂದರ್ಯವನ್ನು ಓದುಗರಿಗೆ ತಿಳಿಸಿದ್ದಾರೆ. ಉದ್ಯಾನದ ಗಿಡಗಳು ಬಣ್ಣ ಬಣ್ಣದ ಹೂವುಗಳಿಂದ ಬಳುಕುತ್ತಾ, ಅಲುಗಾಡುತ್ತಾ, ಸಮೃದ್ಧವಾಗಿ ಬೆಳೆದು ನಿಂತಿದ್ದವು. ಉದ್ಯಾನದ ಸಮೃದ್ಧತೆ ಹಾಗೂ ಸೌಂದರ್ಯವನ್ನು ಕಂಡ ಬಣ್ಣ ಬಣ್ಣದ ಹಕ್ಕಿಗಳು ಅಲ್ಲಿ ಬಂದು ನೆಲೆಸಿ, ತಮ್ಮ ಮಧುರವಾದ ಸ್ವರದಿಂದ ಉಲಿಯುತ್ತಾ ಉದ್ಯಾನದ ಸೌಂದರ್ಯವನ್ನು ಇಮ್ಮಡಿಗೊಳಿಸಿದವು ಎಂದು ಹೇಳುವಾಗ ಈ ಮಾತು ಬಂದಿದೆ.

ಉದ್ಯಾನದ ಸೌಂದರ್ಯ ಹಕ್ಕಿಗಳ ಉಲಿತದಿಂದ ಇಮ್ಮಡಿಯಾಗಿತ್ತು ಎಂಬುದು ಈ ಮಾತಿನ ಸ್ವಾರಸ್ಯ.

13. ಈ ವಾಕ್ಯವನ್ನು ಆರ್ ವಿ ಭಂಡಾರಿಯವರು ಬರೆದಿರುವ 'ಹದ್ದುಗಳು' ಕವನ ಸಂಕಲನದಿಂದ ಆಯ್ದ 'ಹಾರಿದ ಹಕ್ಕಿಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ವ್ಯವಸ್ಥೆಯ ಕ್ರೂರತೆಯನ್ನು ಓದುಗರಿಗೆ ತಿಳಿಸುತ್ತಿದ್ದಾರೆ. ಸ್ವಚ್ಛಂದವಾಗಿ ಹಾರಾಡುತ್ತಾ ಉದ್ಯಾನದ ಸೌಂದರ್ಯವನ್ನು ಇಮ್ಮಡಿಗೊಳಿಸಿದ ಹಕ್ಕಿಗಳನ್ನು ಮಾಂಸದ ಆಸೆಗಾಗಿ ಚಿಟಬಿಲ್ಲಿನಿಂದ ಗುರಿಯಿಟ್ಟು ಹೊಡೆದು ಉರುಳಿಸಲಾಗುತ್ತಿ ಎಂದು ಹೇಳುವ ಸಂದರ್ಭ ಇದಾಗಿದೆ.

ಹಕ್ಕಿಗಳ ಸ್ವಚ್ಛಂದ ಸ್ವತಂತ್ರಕ್ಕೆ ವಿರುದ್ಧವಾದುದು ಎಂಬುದು ಈ ಮಾತಿನ ಸ್ವಾರಸ್ಯ.

14. ಈ ವಾಕ್ಯವನ್ನು ಆರ್ ವಿ ಭಂಡಾರಿಯವರು ಬರೆದಿರುವ 'ಹದ್ದುಗಳು' ಕವನ ಸಂಕಲನದಿಂದ ಆಯ್ದ 'ಹಾರಿದ ಹಕ್ಕಿಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ವ್ಯವಸ್ಥೆಯ ವಿರುದ್ಧ ದುಡಿಯುವ ವರ್ಗ ಬಂಡಾಯ ಏಳುವುದರ ಬಗ್ಗೆ ಓದುಗರಿಗೆ ತಿಳಿಸುತ್ತಿದ್ದಾರೆ. ಹಾರಿ ಹೋದ ಹಕ್ಕಿಗಳನ್ನು ಮರಳಿ ಬನ್ನಿ. ಇದು ನಿಮ್ಮ ಮಾತೃಸ್ಥಾನ ಎಂದು ಕರೆದರೆ ಅವುಗಳು ಹಿಂತಿರುಗಿ ಬರಲಾರವು. ನೀವೇನಾದರೂ ಬಲವಂತ ಪಡಿಸಿದರೆ ಅವುಗಳು ಸಮಯ ನೋಡಿಕೊಂಡು ನಿಮ್ಮ ಮೇಲೆ ತಿರು ಬೀಳುತ್ತವೆ ಎಂದು ಹೇಳುವ ಸಂದರ್ಭ ಇದಾಗಿದೆ.

ವ್ಯವಸ್ಥೆಗಳು ಸರ್ವರ ಹಿತ ಕಾಪಾಡುವಂತಿರಬೇಕು ಎಂಬುದು ಈ ಮಾತಿನ ಸ್ವಾರಸ್ಯ.

**ಮೌಲ್ಯವನ್ನಾಧರಿಸಿದ ಸಾರಾಂಶ;**

ಅಂಶಗಳನ್ನಾಧರಿಸಿದ ವಿಷಯಾಂಶಕ್ಕೆ 02 ಅಂಕಗಳು

ಮೌಲ್ಯ, ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 03 ಅಂಕಗಳು

15. ಪ್ರಸ್ತುತ ಪದ್ಯಭಾಗವನ್ನು ಆರ್ ವಿ ಭಂಡಾರಿಯವರು ಬರೆದಿರುವ 'ಹದ್ದುಗಳು' ಕವನ ಸಂಕಲನದಿಂದ ಆಯ್ದ 'ಹಾ ದ ಹಕ್ಕಿಗಳು' ಎಂಬ ಪದ್ಯದಿಂದ ಆರಿಸಲಾಗಿದೆ. ಉದ್ಯಾನದ ತುಂಬೆಲ್ಲ ಬಣ್ಣ ಬಣ್ಣದ ಹೂವುಗಳಿಂದ ತೂಗುತ್ತಾ, ಬಳಕುತ್ತಾ, ಅಲುಗಾಡುತ್ತಾ ಸಮೃದ್ಧವಾಗಿ ಬೆಳೆದ ಗಿಡಗಳಿವೆ. ಈ ಗಿಡದ ಸಮೃದ್ಧತೆ ಹಾಗೂ ಸೌಂದರ್ಯವನ್ನು ಕಂಡ ಬಣ್ಣ ಬಣ್ಣದ ಹಕ್ಕಿಗಳು ಅಲ್ಲಿಗೆ ಬಂದು ನೆಲೆಸುತ್ತಾ ಮಧುರವಾದ ಸ್ವರಗಳಿಂದ ಉಲಿಯುತ್ತಿವೆ. ಇದರಿಂದ ಉದ್ಯಾನದ ಸೌಂದರ್ಯ ಇಮ್ಮಡಿಯಾಗಿದೆ.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪರ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

16. 'ಹಾರಿದ ಹಕ್ಕಿಗಳು' ಎಂಬ ಕವನದಲ್ಲಿ ಕವಿ ಆರ್ ವಿ ಭಂಡಾರಿಯವರು ನಿಸರ್ಗ ನೀಡಿರುವ ಸಮಾನತೆಯು ಎಲ್ಲರಿಗೂ ಸಿಗುವಂತಾಗಬೇಕು, ಇಲ್ಲದಿದ್ದಲ್ಲಿ ನಾಡು ಬಡವಾಗುತ್ತದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಉದ್ಯಾನದ ತುಂಬೆಲ್ಲ ಬಣ್ಣ ಬಣ್ಣದ ಹೂವುಗಳಿಂದ ತೂಗುತ್ತಾ, ಬಳಕುತ್ತಾ, ಅಲುಗಾಡುತ್ತಾ ಸಮೃದ್ಧವಾಗಿ ಬೆಳೆದ ಗಿಡಗಳಿವೆ. ಈ ಗಿಡದ ಸಮೃದ್ಧತೆ ಹಾಗೂ ಸೌಂದರ್ಯವನ್ನು ಕಂಡ ಬಣ್ಣ ಬಣ್ಣದ ಹಕ್ಕಿಗಳು ಅಲ್ಲಿಗೆ ಬಂದು ನೆಲೆಸುತ್ತಾ ಮಧುರವಾದ ಸ್ವರಗಳಿಂದ ಉಲಿಯುತ್ತಿವೆ. ಇದರಿಂದ ಉದ್ಯಾನದ ಸೌಂದರ್ಯ ಇಮ್ಮಡಿಯಾಗಿದೆ. ಅಂದರೆ ನಾಡಿನಲ್ಲಿರುವ ಸಮೃದ್ಧವಾದ ಸಂಪನ್ಮೂಲಗಳನ್ನು ಬಳಸಿಕೊಂಡು ಮತ್ತಷ್ಟು ಸಮೃದ್ಧಿಯನ್ನು ಪಡೆಯುತ್ತಿದೆ ಎಂಬುದನ್ನು ಕವಿ ಉದ್ಯಾನ, ಬೆಳೆದು ನಿಂತ ಗಿಡ ಹಾಗೂ ಹಕ್ಕಿಗಳೆಂಬ ರೂಪಕವನ್ನು ಬಳಸಿಕೊಂಡು ತಿಳಿಸಿದ್ದಾರೆ.

ಹೀಗೆ ಸ್ವಚ್ಛಂದವಾಗಿ ಹಾರಾಡುತ್ತಾ ಉದ್ಯಾನದ ಸೌಂದರ್ಯ ಇಮ್ಮಡಿಯಾಗಲು ಕಾರಣವಾಗಿರುವ ಹಕ್ಕಿಗಳ ಮಾಂಸದ ಆಸೆಗಾಗಿ ಅವುಗಳನ್ನು ಗುರಿಯಿಟ್ಟು ಚಿಟಬಿಲ್ಲಿನಿಂದ ಹೊಡೆಸು ಉರುಳಿಸುತ್ತಿದ್ದೀರಿ. ಇದರಿಂದ ಆ ಹಕ್ಕಿಗಳೆಲ್ಲ ತಮಗೆ ಸ್ವಚ್ಛಂದವಾಗಿ ದೊರೆಯುವ ಹೂವು-ಹಣ್ಣುಗಳನ್ನು ಹುಡುಕಿಕೊಂದು ಬೇರೆಡೆಗೆ ಹಾರಿ ಹೋಗುತ್ತಿವೆ. ಅಂದರೆ ನಮ್ಮ ವ್ಯವಸ್ಥೆಯು ದುಡಿಯುವ ವರ್ಗಕ್ಕೆ ಸ್ವಚ್ಛಂದವಾಗಿ ದುಡಿಯಲು ಅವಕಾಶ ನೀಡದೆ ಅವರನ್ನು ಹಿಂಸಿಸುತ್ತಾ, ತೊಂದರೆ ನೀಡುತ್ತಾ ಅವರ ಮೇಲೆ ದಬ್ಬಾಳಿಕೆ ಮಾಡಿದರೆ, ಅವರು ಎಲ್ಲಿ ತಮ್ಮ ದುಡಿಮೆಗೆ ಸರಿಯಾದ ಪ್ರತಿಫಲ ದೊರೆಯುತ್ತದೆಯೋ ಅಲ್ಲಿಗೆ ಹೊರಟು ಹೋಗುತ್ತಾರೆ. ಆಗ ನಮ್ಮ ನಾಡಿನ ಸಮೃದ್ಧತೆ ಕಡಿಮೆಯಾಗುತ್ತದೆ. ನಾಡು ಬಡವಾಗುತ್ತದೆ ಎಂದು ಕವಿ ಹೇಳಿದ್ದಾರೆ.

## 3. ಜ್ಯೋತಿಯೇ ಆಗು ಜಗಕೆಲ್ಲ

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಕಾಡು
2. (ಎ) ನಮಗ
3. (ಡಿ) ಶ್ರೀಮಂತ
4. (ಎ) ಲೋಪ
5. (ಬಿ) ರೊಕ್ಕ

**ಒಂದು ಅಂಕದ ಪ್ರಶ್ನೆಗಳು;**

6. ತಾಯಿ ತನ್ನ ಮಗನು ಆಚಾರ ಮತ್ತು ನೀತಿಗೆ ಒಡೆಯನಾಗಬೇಕೆಂದು ಬಯಸುತ್ತಾಳೆ.

7. ತಾಯಿ ತನ್ನ ಮಗನನ್ನು ಜಗತ್ತಿಗೆ ಜ್ಯೋತಿಯಾಗಿ ಬೆಳಗಬೇಕೆಂದು ಆಶಿಸುತ್ತಾಳೆ.
8. ಜನಪದರು ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ.
9. ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಎದೆಯುದ್ದ ಕಾಣಿಸುತ್ತದೆ.
10. ಸಂಸಾರವೆಂಬ ಸಾಗರದಲ್ಲಿ ಈಸುವುದು ಎಂದರೆ ಸಂಸಾರದಲ್ಲಿ ಬರುವ ಕಷ್ಟಗಳನ್ನೆಲ್ಲಾ ಎದುರಿಸುವುದು ಎಂದರ್ಥ.
11. ಜನಪದರು ಬಂಗಾರವೆಂಬುದು ಸ್ಥಿರವಾದುದ್ದಲ್ಲ ಎಂದಿದ್ದಾರೆ.
12. ಜನಪದರ ಪ್ರಕಾರ ಹಡೆದವ್ವನಿದ್ದರೆ ಸಾಮ್ರಾಜ್ಯ ನಮ್ಮೊಡನೆ ಇದೆ ಎನಿಸುವುದು.
13. ಉಣ್ಣುವಾಗ, ಉಡುವಾಗ ಜನರೆಲ್ಲ ನೆಂಟರಾಗುತ್ತಾರೆಂದು ಜನಪದರು ಹೇಳುತ್ತಾರೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

14. ತಾಯಿ ತನ್ನ ಮಗು ಆಚಾರದಲ್ಲಿ ಅರಸನಾಗಿ ಅಂದರೆ ಒಳ್ಳೆಯ ಸಂಪ್ರದಾಯಗಳನ್ನು ಪಾಲಿಸುವಂತಹ ವ್ಯಕ್ತಿಯಾಗಬೇಕು. ನೀತಿಗೆ ಪ್ರಭುವಾಗಿ ಶ್ರೇಷ್ಠ ಮಾತುಗಳನ್ನಾಡುವಂತಹ ಗುಣಗಳನ್ನು ಹೊಂದಿ ಇಡೀ ಜಗತ್ತಿಗೆ ಮಾದರಿಯಾಗಬೇಕು. ಎಲ್ಲರನ್ನೂ ಸನ್ಮಾರ್ಗದಲ್ಲಿ ನಡೆಸಿ ಜಗಕ್ಕೆ ಜ್ಯೋತಿಯಾಗಬಲ್ಲನೆಂದು ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳಿರಬೇಕೆಂದು ಬಯಸುತ್ತಾಳೆ.
15. ವಿದ್ಯೆ ಬಲ್ಲವನು ಅಂದರೆ ವಿದ್ಯಾವಂತನಾದವನಿಗೆ ಕೈಲಾಸವೇ ದೊರೆಯುತ್ತದೆ. ಇದರರ್ಥ ಈಜಿನಲ್ಲಿ ಪರಿಣಿತನಾದವನಿಗೆ ಸಾಗರವು ಎದೆಯುದ್ದದ ನದಿಯಂತೆ ಹೇಗೆ ಗೋಚರವಾಗುತ್ತದೆಯೋ, ಅದೇ ರೀತಿ ವಿದ್ಯಾವಂತನಾದವನಿಗೆ ಸಂಸಾರದಲ್ಲಿ ಬರುವ ಕಷ್ಟಗಳೆಲ್ಲ ತೃಣದಂತೆ ಕಾಣುತ್ತದೆ. ಆತ ಯಾವುದಕ್ಕೂ ಧೃತಿಗೆಡದೆ ಕೈಲಾಸವಾಸಿಯಂತೆ ನೆಮ್ಮದಿಯಾಗಿರುತ್ತಾನೆಂದು ಜನಪದರು ವಿದ್ಯಾಭ್ಯಾಸದ ಮಹತ್ವವನ್ನು ತಿಳಿಸಿದ್ದಾರೆ.
16. ಜನಪದರು ಶ್ರೀಮಂತಿಕೆಯ ಪ್ರದರ್ಶನ, ದರ್ಪವನ್ನು ಬಂಗಾರದ ಬಳೆಗೆ ಹೋಲಿಸಿದ್ದಾರೆ. ಹಣ, ಅಂತಸ್ತು, ಅಧಿಕಾರ ಇವಾವುದೂ ಸ್ಥಿರವಾದುದ್ದಲ್ಲ. ಇಂದು ಶ್ರೀಮಂತನಾದವನು ನಾಳೆ ಬಡವನಾಗಬಹುದು. ಹಾಗಾಗಿ ಶಾಶ್ವತವಲ್ಲದ ಶ್ರೀಮಂತಿಕೆಯ ದರ್ಪವನ್ನು ತೋರಿಸದೆ ಮಾನವೀಯತೆಯನ್ನು ಎತ್ತಿ ಹಿಡಿಯುವಂತೆ ನಡೆದುಕೊಳ್ಳಬೇಕೆಂಬುದು ಜನಪದರ ಭಾವನೆಗಳು.
17. ಜನಪದರು ಮನುಷ್ಯನ ನಡೆ ಹೇಗಿರಬೇಕೆಂದು ತಿಳಿಸುತ್ತಾ, ನಾವು ಯಾರಿಗಾದರೂ ಏನನ್ನಾದರೂ ಕೊಟ್ಟರೆ ಸಂಕಟ ಪಟ್ಟುಕೊಳ್ಳದೆ ಸಂತೋಷದಿಂದ ಇರಬೇಕು. ಹಸಿದವರಿಗೆ ಊಟಕ್ಕೆ ಹಾಕಿ ಹಂಗಿಸದೇ ಊಟಕ್ಕೆ ಕೊಟ್ಟ ತೃಪ್ತಿಯನ್ನು ಅನುಭವಿಸಬೇಕು. ಊಟಕ್ಕೆ ಹಾಕಿ ಎಷ್ಟೊಂದು ಉಂಡೆ ಎಂದು ಹೇಳದೆ ತೃಪ್ತನಾಗುವಂತೆ ಊಟ ಬಡಿಸಬೇಕು. ಈ ಮೂರು ಅಂಶಗಳು ಮಾತ್ರ ಶಿವನಿಗೆ ಪ್ರಿಯವಾಗುವುದು.
18. ಅಕ್ಕ ಇದ್ದರೆ ಮಾತ್ರ ಭಾವನೊಂದಗಿನ ಸಂಬಂಧ ಇರುವುದು. ಕೈಯಲ್ಲಿ ಹಣವಿದ್ದರೆ ಮಾತ್ರ ಸಂತೆಗೆ ಹೋಗಿ ಸಾಮಾನುಗಳನ್ನು ಕೊಂಡು ತರಲಾಗುವುದು. ಮಕ್ಕಳಿದ್ದರೆ ಮಾತ್ರ ನಾವು ಆಸ್ತಿ,

ಮನೆಗೆ ಬೆಲೆ ಇರುವುದು. ಹಾಗೆಯೇ ಹಡೆದವ್ವ ನಿದ್ದರಷ್ಟೇ ಇಡೀ ಸಾಮ್ರಾಜ್ಯ ನಮ್ಮೊಡನೆ ಇದೆ ಎನಿಸುವುದು. ಸಿರಿ-ಸಂಪತ್ತು ನೆಮ್ಮದಿ ದೊರೆಯುವುದು ಎಂದು ಹಡೆದವ್ವನ ಮಹತ್ವವನ್ನು ಜನಪದರು ಎತ್ತಿ ಹಿಡಿದಿದ್ದಾರೆ.

19. ನಾವು ಸುಖ ಸಮೃದ್ಧಿಯಿಂದ ಇದ್ದು, ಉಂಡು ಉಡಲಿಕ್ಕೆ ಅನುಕೂಲವಿದ್ದಾಗ ಮಾತ್ರ ಎಲ್ಲ ಜನರು ನಮ್ಮ ನೆಂಟರಾಗುತ್ತಾರೆ. ಆದರೆ ನಮಗೆ ಕಷ್ಟ ಬಂದು ಅಡವಿ ಸೊಪ್ಪನ್ನು ತಿನ್ನುವ ಪರಿಸ್ಥಿತಿ ಬಂದಾಗ ಯಾರೂ ನಮ್ಮ ಹತ್ತಿರ ಬರುವುದಿಲ್ಲ. ಒಡಹುಟ್ಟಿದ ಅಣ್ಣನೂ ಕೂಡ ನಮ್ಮ ಮುಖ ನೋಡಲು ಇಚ್ಛಿಸುವುದಿಲ್ಲವೆಂದು ಜನಪದರು ಹೇಳಿದ್ದಾರೆ.

**ಗಾದೆ ವಿಸ್ತರಿಸುವುದು;**

ಗಾದೆಯ ಮಹತ್ವದ ವಿವರಣೆ 01 ಅಂಕ

ಉದಾಹರಣೆಯೊಂದಿಗೆ ಅರ್ಥ ವಿವರಣೆ 01 ಅಂಕ

ಪದಬಂಧಗಳಿಗೆ, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

20. ಇದೊಂದು ಅನುಭವದ ಗಾದೆಯ ಮಾತು. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆಗಳು ಕಿರಿದಾದರೂ ಹಿರಿದಾದ ಅರ್ಥವಿರುತ್ತದೆ. ಇದು ವಿಶಾಲವಾದ ಜೀವನದ ಅನುಭವದಿಂದ ಕೂಡಿದ ಗಾದೆ ಮಾತು. ತ್ವರಿತವಾಗಿ ಆಡಿದ ಹರಿತವಾದ ಮಾತುಗಳು ಫಲಿತಾಂಶವನ್ನು ನಕರಾತ್ಮಕವಾಗಿಸುತ್ತವೆ. ಅಲ್ಲದ ಸಂದರ್ಭದಲ್ಲಿ ವಲ್ಲದ ಮಾತುಗಳನ್ನಾಡಿ, ಸಲ್ಲದ ಅಪವಾದಗಳನ್ನು ತನ್ನಡೆಗೆ ತಂದುಕೊಳ್ಳುತ್ತದೆ. ಮೌನವಾದರೂ ನಿಷ್ಠುರ ವಾದತ್ವವನ್ನು ಪ್ರತಿಪಾದಿಸಿ, ಒದಗಬಹುದಾದ ವಿಪತ್ತನ್ನು ದೂರಿಕರಿಸಿ, ಸಂಪತ್ತಿನ ಸಂಗ್ರಹಕ್ಕೆ ಕಾರಣೀಭೂತವಾಗುತ್ತದೆ. ಎಡವಿದ ಕಾಲಿಗಿಂತ ಎಡವಿದ ನಾಲಿಗೆ ಅಪಾಯ ಎಂಬ ಸತ್ಯವನ್ನು ಈ ಗಾದೆ ಪ್ರಚುರಪಡಿಸುತ್ತದೆ.

- ✓ ಮೌಲ್ಯಾಂಕನಕ್ಕಾಗಿ ಕೆಲವು ಸೂಚಿತ ಗಾದೆಗಳು;
    - ಕೈ ಕೆಸರಾದರೆ ಬಾಯಿ ಮೊಸರು.
    - ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.
    - ಗಿಡವಾಗಿ ಬಗ್ಗದ್ದು; ಮರವಾಗಿ ಬಗ್ಗೀತೆ.
    - ಹಾಸಿಗೆ ಇದ್ದಷ್ಟು ಕಾಲು ಚಾಚು.
    - ಅತಿ ಆಸೆ ಗತಿಗೇಡು.
    - ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ.
    - ಊಟಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳ ಇಲ್ಲ.
    - ದೇಶ ಸುತ್ತಿ ನೋಡು; ಕೋಶ ಓದಿನೋಡು.
    - ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

- ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

21. ಈ ವಾಕ್ಯವನ್ನು ದೇ. ಜವರೇಗೌಡರವರು ಸಂಪಾದಿಸಿರುವ 'ಜನಪದ ಗೀತಾಂಜಲಿ' ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡು' ಸಂಕಲಗಳಿಂದ ಆಯ್ಕೆ ಮಾಡಿದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಜನಪದರು ತಾಯಿಯ ವಿವೇಕವನ್ನು ಸಮಾಜಕ್ಕೆ ತಿಳಿಸಿದ್ದಾರೆ. ತಾಯಿ ತನ್ನ ಮಗು ಆಚಾರದಲ್ಲಿ ಅರಸನಾಗಿ ಅಂದರೆ ಒಳ್ಳೆಯ ಸಂಪ್ರದಾಯಗಳನ್ನು ಪಾಲಿಸುವಂತಹ ವ್ಯಕ್ತಿಯಾಗಬೇಕು. ನೀತಿಗೆ ಪ್ರಭುವಾಗಿ ಶ್ರೇಷ್ಠ ಮಾತುಗಳನ್ನಾಡುವಂತಹ ಗುಣಗಳನ್ನು ಹೊಂದಿ ಇಡೀ ಜಗತ್ತಿಗೆ ಮಾದರಿಯಾಗಬೇಕು. ಎಲ್ಲರನ್ನೂ ಸನ್ಮಾರ್ಗದಲ್ಲಿ ನಡೆಸಿ ಜಗಕ್ಕೆ ಜ್ಯೋತಿಯಾಗಬಲ್ಲನೆಂದು ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳಿರಬೇಕೆಂದು ಆಶಿಸುವಾಗ ಈ ಮಾತು ಬಂದಿದೆ.

    ತಾಯಿಯ ವಿವೇಕ ಅಪಾರವಾದುದು ಎಂಬುದು ಈ ಮಾತಿನ ಸ್ವಾರಸ್ಯ.

22. ಈ ವಾಕ್ಯವನ್ನು ದೇ. ಜವರೇಗೌಡರವರು ಸಂಪಾದಿಸಿರುವ 'ಜನಪದ ಗೀತಾಂಜಲಿ' ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡು ಸಂಕಲಗಳಿಂದ ಆಯ್ಕೆ ಮಾಡಿದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಜನಪದರು ಸಮಾಜಕ್ಕೆ ತಿಳಿಸಿದ್ದಾರೆ. ಶ್ರೀಮಂತಿಕೆ ಬಂದಿದೆ ಎಂದು ಬಡವರನ್ನು ಬೈದು ನಿಕೃಷ್ಟವಾಗಿ ಕಾಣಬಾರದು. ಏಕೆಂದರೆ ಮಧ್ಯಾಹ್ನದ ಹೊತ್ತು ಹೊರಳಿ ಸಂಜೆಯಾಗುವಂತೆ ಶ್ರೀಮಂತಿಕೆ ಹೋಗಿ ಬಡವರಾಗಬಹುದು. ಶ್ರೀಮಂತಿಕೆ ಎಂದೂ ಸ್ಥಿರವಲ್ಲ ಎಂದು ಹೇಳುವ ಸಂದರ್ಭ ಇದಾಗಿದೆ.

    ಶ್ರೀಮಂತಿಕೆ ಅಸ್ಥಿರವಾದುದು ಎಂಬುದು ಈ ಮಾತಿನ ಸ್ವಾರಸ್ಯ.

23. ಈ ವಾಕ್ಯವನ್ನು ದೇ. ಜವರೇಗೌಡರವರು ಸಂಪಾದಿಸಿರುವ 'ಜನಪದ ಗೀತಾಂಜಲಿ' ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡು ಸಂಕಲಗಳಿಂದ ಆಯ್ಕೆ ಮಾಡಿದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಜನಪದರು ಸಮಾಜಕ್ಕೆ ತಿಳಿಸಿದ್ದಾರೆ. ಮನುಷ್ಯರ ನಡೆ ಶಿವನಿಗೆ ಪ್ರಿಯವಾಗುವಂತಿರಬೇಕು. ನಾವು ಯಾರಿಗಾದರೂ ಏನನ್ನಾದರೂ ಕೊಟ್ಟರೆ, ಕೊಟ್ಟೆ ಎಂದು

ಸಂಕಟ ಪಡದೆ ಸಂತೋಷಿಸಬೇಕು. ಹಾಗೆ ಹಸಿದು ಬಂದವರಿಗೆ ಊಟಕ್ಕೆ ಹಾಕಿ ಹಂಗಿಸಬಾರದು ಎಂದು ಹೇಳುವ ಸಂದರ್ಭ ಇದಾಗಿದೆ.

ಕೊಟ್ಟ ದಾನ ಸಂಕಟ ಪಡದೆ ಸಂತೋಷಿಸಬೇಕು ಎಂಬುದು ಈ ಮಾತಿನ ಸ್ವಾರಸ್ಯ.

24. ಈ ವಾಕ್ಯವನ್ನು ದೇ. ಜವರೇಗೌಡರವರು ಸಂಪಾದಿಸಿರುವ 'ಜನಪದ ಗೀತಾಂಜಲಿ' ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡು' ಸಂಕಲಗಳಿಂದ ಆಯ್ಕೆ ಮಾಡಿದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಸಮಾಜಕ್ಕೆ ತಿಳಿಸಿದ್ದಾರೆ. ಸಮೃದ್ಧಿಯಿಂದ ಇದ್ದು ಉಂಡು ಉಡಲಿಕ್ಕೆ ಅನುಕೂಲವಿದ್ದಾಗ ಮಾತ್ರ ಎಲ್ಲ ಜನರು ನಮ್ಮ ನೆಂಟರಾಗುತ್ತಾರೆ. ಆದರೆ ನಮಗೆ ಅಡವಿ ಸೊಪ್ಪು ತಿನ್ನುವಂತಹ ಕಷ್ಟ ಬಂದಾಗ ನಮ್ಮ ಒಡಹುಟ್ಟಿದಣ್ಣ ಕೂಡ ನಮ್ಮ ಮುಖ ನೋಡಲು ಬರುವುದಿಲ್ಲ ಎಂದು ಹೇಳುವ ಸಂದರ್ಭ ಇದಾಗಿದೆ.

ಸಂಬಂಧಗಳ ನಿಜ ಸ್ವರೂಪ ಸರಳ ಸುಂದರವಾಗಿ ಅಭಿವ್ಯಕ್ತಿಕೊಂಡಿದೆ ಎಂಬುದು ಈ ಮಾತಿನ ಸ್ವಾರಸ್ಯ.

**ಪದ್ಯಭಾಗವನ್ನು ಪೂರ್ಣಗೊಳಿಸುವುದು;** (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 01 ಅಂಕ ಒಟ್ಟಾರೆ 4 ಅಂಕಗಳು)

25. ಕೊಟ್ಟು ಕುದಿಯಲುಬೇಡ ಇಟ್ಟು ಹಂಗಿಸಬೇಡ
ಎಷ್ಟುಂಡರೆಂದು ಅನಬೇಡ | ಇವು ಮೂರು
ಮುಟ್ಟುವುದು ಶಿವನ ಬಳಿಯಲ್ಲಿ.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

26. ಜನಪದರು ತಮ್ಮ ಜನಪದದಲ್ಲಿ ಪ್ರೀತಿ ಸಂಬಂಧಗಳ ನಿಜ ಸ್ವರೂಪವನ್ನು ಸರಳ ಸುಂದರವಾಗಿ ವ್ಯಕ್ತಪಡಿಸಿರುತ್ತಾರೆ. ನಾವು ಸುಖ ಸಮೃದ್ಧಿಯಿಂದ ಇದ್ದು, ಉಣ್ಣಲಿಕ್ಕೆ, ಉಡಲಿಕ್ಕೆ, ಹಾಸಲಿಕ್ಕೆ, ಹೊದೆಯಲಿಕ್ಕೆ ಅನುಕೂಲವಿದ್ದಾಗ ಎಲ್ಲಾ ಜನರು ನಮ್ಮ ನೆಂಟಗಾರುತ್ತಾರೆ. ಆದರೆ ನಮ್ಮ ಸುಖ ಸಮೃದ್ಧತೆ ಹೋಗಿ ಕಷ್ಟ ಪರಂಪರೆ ಬಂದು ಅಡವಿಯ ಸೊಪ್ಪನ್ನು ಬೇಯಿಸಿ ತಿನ್ನುವ ಪರಿಸ್ಥಿತಿಯು ಬಂದಾಗ ಈ ನೆಂಟರೆಲ್ಲಾ ನಮ್ಮಿಂದ ದೂರವಾಗುತ್ತಾರೆ. ಯಾರೊಬ್ಬರ ಸುಳಿವು ಇರುವುದಿಲ್ಲ. ಒಡಹುಟ್ಟಿದ ಅಣ್ಣನೂ ಕೂಡ ನಮ್ಮ ಸಂಬಂಧದಿಂದ ದೂರವಾಗುತ್ತಾನೆ. ಅಂದರೆ ಸುಖವಿದ್ದಾಗ ಎಲ್ಲರೂ ಬೆಸೆದುಕೊಳ್ಳುತ್ತಾರೆ. ಕಷ್ಟ ಬಂದಾಗ ನಮ್ಮೊಂದಿಗಿನ ಸಂಬಂಧವನ್ನು ಕಡಿದುಕೊಳ್ಳುತ್ತಾರೆ. ಕಷ್ಟದ ಕಾಲದಲ್ಲಿ ಒಡಹುಟ್ಟಿದವರೂ ದೂರವಾಗುತ್ತಾರೆಂದು ಜನಪದರು ತಮ್ಮ ಜನಪದದ ಹಾಡಿನಲ್ಲಿ ವ್ಯಕ್ತಪಡಿಸಿರುತ್ತಾರೆ.

27. ಜ್ಯೋತಿಯೇ ಆಗು ಜಗಕ್ಕೆಲ್ಲ ತ್ರಿಪದಿಗಳಲ್ಲಿ ತಾಯಿ ತನ್ನ ಮಗು ಆಚಾರದಲ್ಲಿ ಅರಸನಾಗಿ ಅಂದರೆ ಒಳ್ಳೆಯ ಸಂಪ್ರದಾಯಗಳನ್ನು ಪಾಲಿಸುವಂತಹ ವ್ಯಕ್ತಿಯಾಗಬೇಕು. ನೀತಿಗೆ ಪ್ರಭುವಾಗಿ ಶ್ರೇಷ್ಠ ಮಾತುಗಳನ್ನಾಡುವಂತಹ ಗುಣಗಳನ್ನು ಹೊಂದಿ, ಇಡೀ ಜಗತ್ತಿಗೆ ಮಾದರಿಯಾಗಬೇಕು. ಎಲ್ಲರನ್ನೂ ಸನ್ಮಾರ್ಗದಲ್ಲಿ ನಡೆಸಿ, ಜಗಕ್ಕೆ ಜ್ಯೋತಿಯಾಗಬಲ್ಲನೆಂದು ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳಿರಬೇಕೆಂದು ಬಯಸುತ್ತಾಳೆ. ವಿದ್ಯೆ ಬಲ್ಲವನು ಅಂದರೆ ವಿದ್ಯಾವಂತನಾದವನಿಗೆ ಕೈಲಾಸವೇ ದೊರೆಯುತ್ತದೆ. ಇದರರ್ಥ ಈಜಿನಲ್ಲಿ ಪರಿಣಿತನಾದವನಿಗೆ ಸಾಗರವು ಎದೆಯುದ್ದದ ನದಿಯಂತೆ ಹೇಗೆ ಗೋಚರವಾಗುತ್ತದೆಯೋ ಅದೇ ರೀತಿ ವಿದ್ಯಾವಂತನಾದವನಿಗೆ ಸಂಸಾರದಲ್ಲಿ ಬರುವ ಕಷ್ಟಗಳೆಲ್ಲ ತೃಣದಂತೆ ಕಾಣುತ್ತದೆ. ಆತ ಯಾವುದಕ್ಕೂ ಧೃತಿಗೆಡದೆ ಕೈಲಾಸವಾಸಿಯಂತೆ ನೆಮ್ಮದಿಯಾಗಿರುತ್ತಾನೆಂದು ಜನಪದರು ವಿದ್ಯಾಭ್ಯಾಸದ ಮಹತ್ವವನ್ನು ತಿಳಿಸಿದ್ದಾರೆ. ಹಣ, ಅಂತಸ್ತು, ಅಧಿಕಾರ ಇವಾವುದೂ ಸ್ಥಿರವಾದುದ್ದಲ್ಲ. ಇಂದು ಶ್ರೀಮಂತನಾದವನು ನಾಳೆ ಬಡವನಾಗಬಹುದು, ಹಾಗಾಗಿ ಶಾಶ್ವತವಲ್ಲದ ಶ್ರೀಮಂತಿಕೆಯ ದರ್ಪವನ್ನು ತೋರಿಸದೆ ಮಾನವೀಯತೆಯನ್ನು ಎತ್ತಿ ಹಿಡಿಯುವಂತೆ ನಡೆದುಕೊಳ್ಳಬೇಕೆಂಬುದು ಜನಪದರ ಭಾವನೆಗಳು. ನಾವು ಯಾರಿಗಾದರೂ ಏನನ್ನಾದರೂ ಕೊಟ್ಟರೆ ಸಂಕಟ ಪಟ್ಟುಕೊಳ್ಳದೆ ಸಂತೋಷದಿಂದ ಇರಬೇಕು. ಹಸಿದವರಿಗೆ ಊಟಕ್ಕೆ ಹಾಕಿ ಹಂಗಿಸದೇ ಊಟಕ್ಕೆ ಕೊಟ್ಟ ತೃಪ್ತಿಯನ್ನು ಅನುಭವಿಸಬೇಕು. ಊಟಕ್ಕೆ ಹಾಕಿ ಎಷ್ಟೊಂದು ಉಂಡೆ ಎಂದು ಹೇಳದೆ ತೃಪ್ತನಾಗುವಂತೆ ಊಟ ಬಡಿಸಬೇಕು. ಈ ಮೂರು ಅಂಶಗಳು ಮಾತ್ರ ಶಿವನಿಗೆ ಪ್ರಿಯವಾಗುವುದು. ಅಕ್ಕ ಇದ್ದರೆ ಮಾತ್ರ ಭಾವನೊಂದಗಿನ ಸಂಬಂಧ ಇರುವುದು. ಕೈಯಲ್ಲಿ ಹಣವಿದ್ದರೆ ಮಾತ್ರ ಸಂತೆಗೆ ಹೋಗಿ ಸಾಮಾನುಗಳನ್ನು ಕೊಂಡು ತರಲಾಗುವುದು. ಮಕ್ಕಳಿದ್ದರೆ ಮಾತ್ರ ನಾವು ಆಸ್ತಿ, ಮನೆಗೆ ಬೆಲೆ ಇರುವುದು. ಹಾಗೆಯೇ ಹಡೆದವ್ವ ನಿದ್ದರಷ್ಟೇ ಇಡೀ ಸಾಮ್ರಾಜ್ಯ ನಮ್ಮೊಡನೆ ಇದೆ ಎನಿಸುವುದು. ಸಿರಿ ಸಂಪತ್ತು ನೆಮ್ಮದಿ ದೊರೆಯುವುದು. ನಾವು ಸುಖ ಸಮೃದ್ಧಿಯಿಂದ ಇದ್ದು, ಉಂಡು ಉಡಲಿಕ್ಕೆ ಅನುಕೂಲವಿದ್ದಾಗ ಮಾತ್ರ ಎಲ್ಲ ಜನರು ನಮ್ಮ ನೆಂಟರಾಗುತ್ತಾರೆ. ಆದರೆ ನಮಗೆ ಕಷ್ಟ ಬಂದು ಅಡವಿ ಸೊಪ್ಪನ್ನು ತಿನ್ನುವ ಪರಿಸ್ಥಿತಿ ಬಂದಾಗ ಯಾರೂ ನಮ್ಮ ಹತ್ತಿರ ಬರುವುದಿಲ್ಲ. ಒಡಹುಟ್ಟಿದ ಅಣ್ಣನೂ ಕೂಡ ನಮ್ಮ ಮುಖ ನೋಡಲು ಇಚ್ಛಿಸುವುದಿಲ್ಲವೆಂದು ಜನಪದರು ಹೇಳಿದ್ದಾರೆ.

## 3. ನನ್ನ ಹಾಗೆಯೇ

**ಬಹು ಆಯ್ಕೆ ಪ್ರಶ್ನೆಗಳು;**

1. (ಎ) ಹೊದಿಕೆ
2. (ಸಿ) ಗೆಲುವು
3. (ಬಿ) ಮಾರ್ಜನ
4. (ಡಿ) ಗುಣಸಂಧಿ

**ಒಂದು ಅಂಕದ ಪ್ರಶ್ನೆಗಳು;**

5. ಬಾಹುಬಲಿಯನ್ನು ಕಂಡು ಮಗುವು ಈತನಾರು ತಾತ, ಇಲ್ಲಿ ನಿಂತು ನೋಡುತಿರುವನು? ಎಂದು ಅಜ್ಜನನ್ನು ಕೇಳಿತು.
6. ಬಾಹುಬಲಿ ಮೂರ್ತಿ ಇರುವ ಬೆಟ್ಟದ ಹೆಸರು ಇಂದ್ರಗಿರಿ.
7. ಬಾಹುಬಲಿ ಮೂರ್ತಿಯು ಧೀರತನದ ಪ್ರತಿಕವೆಂದು ಅಜ್ಜನು ಹೇಳಿದನು.
8. ಅಜ್ಜನ ಪ್ರಕಾರ ಬಾಹುಬಲಿಯೇ ಅಭಯಮೂರ್ತಿ.
9. ಬಾಹುಬಲಿಯ ಅಣ್ಣನ ಹೆಸರು ಭರತ.
10. ಭರತ ಸೋತು, ಬಾಹುಬಲಿಯು ಗೆದ್ದನು.
11. ಬಾಹುಬಲಿಯು ಗೆದ್ದ ರಾಜ್ಯವನ್ನು ಮರಳಿಸುತ್ತಾ ಭರತನಿಗೆ 'ನೀನು ಸೋತುಗೆದ್ದೆ ಅಣ್ಣ, ನಾನು ಗೆದ್ದು ಸೋತೆನು.'
12. ಬಾಹುಬಲಿಯು ಹುಟ್ಟು ಸಾವಿನ ಮರ್ಮವನ್ನು ತಿಳಿಯಲು ಕಂಡುಕೊಂಡ ದಾರಿ ತಪಸ್ಸು.
13. ಸೂರ್ಯಚಂದ್ರರು ಬಾಹುಬಲಿಯನ್ನು ದೀಪವೆಂದು ತಿಳಿದು ನಮಿಸಿದರು.
14. ಬಾಹುಬಲಿ ಮೂರ್ತಿಯು ಮಜ್ಜನದ ಸಮಯದಲ್ಲಿ ದುಗ್ಧ ಹಾಸದಲ್ಲಿ ನಲಿವ ಮುಗ್ಧ ಮಗುವಿನಂತೆ ಗೋಚರಿಸುತ್ತದೆ ಎಂದು ಕವಿ ವರ್ಣಿಸಿದ್ದಾರೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

15. ಅಜ್ಜನು ಬಾಹುಬಲಿಯ ಮೂರ್ತಿ ಹಾಗೂ ಕೀರ್ತಿಯ ಬಗ್ಗೆ ಹೀಗೆ ಹೇಳಿದನು. 'ಬಾ ಬಲಿ ಮೂರ್ತಿಯು ಧೀರತನದ ಮೂರ್ತಿ. ಇವನ ಕೀರ್ತಿ ದೇಶದೆಲ್ಲೆಡೆ ಹರಡಿದೆ. ಬೆಟ್ಟ ಹತ್ತುವವರನ್ನು–ಇಳಿಯುವವರನ್ನು ಲೆಕ್ಕ ಮಾಡುತ್ತಿದ್ದಾನೆ. ಹತ್ತುವಾಗ ಯಾರೆಲ್ಲಾ ಬಳಲುತ್ತಾರೋ ಅವರಿಗೆ ಸಹಾಯ ಹಸ್ತವನ್ನು ನೀಡುತ್ತಾನೆ' ಎಂದು ಹೇಳಿದನು.
16. ಬಾಹುಬಲಿಯ ಅಣ್ಣನಾದ ಭರತನು ಬಾಹುಬಲಿಯೊಂದಿಗೆ ಯುದ್ಧಕ್ಕೆ ನಿಂತನು. ಮಲ್ಲಯುದ್ಧ, ದೃಷ್ಟಿಯುದ್ಧ ಮತ್ತು ಜಲಯುದ್ಧಗಳಲ್ಲಿ ಬಾಹುಬಲಿ ಗೆದ್ದು, ಭರತ ಸೋತನು. ಸೋಲಿನ ಅವಮಾನದಿಂದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾದನು. ನಶ್ವರವಾಗಿರುವ ಈ ರಾಜ್ಯಕ್ಕಾಗಿ ಅಣ್ಣ-ತಮ್ಮಂದಿರೆಂಬ ಸಂಬಂಧ ಮರೆತು ಯುದ್ಧಕ್ಕೆ ನಿಂತವನೆಂದು ಬೇಸರಗೊಂಡ ಬಾಹುಬಲಿ ರಾಜ್ಯವನ್ನು ಭರತನಿಗೆ ಹಿಂದಿರುಗಿಸುತ್ತಾನೆ. ಹುಟ್ಟು-ಸಾವುಗಳ ಮರ್ಮವನ್ನು ಹುಡುಕಲು ತಪಸ್ಸಿಗೆ ಹೋಗುತ್ತಾನೆ.
17. ಮಗುವಿನ ತಾಯಿ, ಮಗುವಿಗೆ ಸ್ನಾನಕ್ಕಾಗಿ ನೀರೆರೆಯುವ ಮುಂಚೆ ಎಣ್ಣೆಯನ್ನು ಹಚ್ಚಿ ಬಾಹುಬಲಿಯ ರೀತಿ ನಿಲ್ಲಿಸಿರುತ್ತಾಳೆ. ಬಾಹುಬಲಿಯು ಮಹಾಮಸ್ತಕಾಭಿಷೇಕಕ್ಕೆ ನಿಂತಿರುವನೆಂದು ಅಜ್ಜನಿಂದ ತಿಳಿದ ಮಗುವು ಬಾಹುಬಲಿಯೂ ಕೂಡ ನನ್ನ ಹಾಗೆಯೇ ಎಂದು ತಿಳಿಯುತ್ತದೆ. ಬಾಹುಬಲಿಯು ಕೂಡ ಎರೆಸಿಕೊಳ್ಳುವುದಕ್ಕಾಗಿ ಮೊದಲ ಚಂಬಿಗಾಗಿ ಕಾಯುತ್ತಾ ನನ್ನ ಹಾಗೆಯೇ

ನಿಂತಿದ್ದಾನೆ ಅಂದುಕೊಳ್ಳುತ್ತದೆ. ಹೀಗಾಗಿ ಬಾಹುಬಲಿಯು ತನ್ನ ಹಾಗೆಯೇ ಎಂದು ಮಗು ಭಾವಿಸಿತು.

**ಕವಿ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

18. ಸು ರಂ ಎಕ್ಕುಂಡಿಯವರ ಪೂರ್ಣ ಹೆಸರು ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಇವರು 1923ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಜನಿಸಿದರು. ಇವರು ಆನಂದತೀರ್ಥ, ಸಂತಾನ, ಬೆಳ್ಳಕ್ಕಿಗಳು, ಕಥನ ಕವನಗಳು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ರಾಜ್ಯ ಶಿಕ್ಷಕರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಹಾಗೂ ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

19. ಈ ವಾಕ್ಯವನ್ನು ಸು ರಂ ಎಕ್ಕುಂಡಿಯವರ 'ಕಥನ ಕವನಗಳು' ಕವನ ಸಂಗ್ರಹದಿಂದ ಆಯ್ದ 'ನನ್ನ ಹಾಗೆಯೇ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ತಾತ, ಬಾಹುಬಲಿಯ ತ್ಯಾಗ, ಸಾಹಸ ಮತ್ತು ಸ್ವಾಭಿಮಾನವನ್ನು ಕುರಿತು ಮಗುವಿಗೆ ಹೇಳುತ್ತಾನೆ. ಮಗು ತನ್ನ ತಾತನನ್ನು ಈತನಾರು? ಇಂದ್ರಗಿರಿಯ ನೆತ್ತಿಯ ಮೇಲೆ ನಿಂತು ಏನು ಮಾಡುತ್ತಿರುವನು? ಎಂದು ಪ್ರಶ್ನಿಸಿದಾಗ ತಾತನು, ಮಗುವಿಗೆ ಧೀರತನದ ಮೂರ್ತಿಯಾಗಿರುವ ಬಾಹುಬಲಿಯ ಕೀರ್ತಿಯ ಬಗ್ಗೆ ಹೇಳುವಾಗ ಈ ಮಾತು ಬಂದಿದೆ.

20. ಈ ವಾಕ್ಯವನ್ನು ಸು ರಂ ಎಕ್ಕುಂಡಿಯವರ 'ಕಥನ ಕವನಗಳು' ಕವನ ಸಂಗ್ರಹದಿಂದ ಆಯ್ದ 'ನನ್ನ ಹಾಗೆಯೇ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ಬಾಹುಬಲಿಯು ಭರತನಿಗೆ ಹೇಳುವನು. ಭರತನು ತಮ್ಮನಾದ ಬಾಹುಬಲಿಯೊಂದಿಗೆ ಯುದ್ಧ ಮಾಡಲು ಮುಂದಾಗುತ್ತಾನೆ. ಆ ಯುದ್ಧದಲ್ಲಿ ಬಾಹುಬಲಿ ಗೆಲುವನ್ನು ಸಾಧಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು

ಮುಂದಾಗುತ್ತಾನೆ. ಇದನ್ನರಿತ ಬಾಹುಬಲಿಯು ಗೆದ್ದ ರಾಜ್ಯವನ್ನು ಭರತನಿಗೆ ಹಿಂದಿರುಗಿಸುತ್ತಾ ಈ ಮಾತನ್ನು ಹೇಳುವನು.

21. ಈ ವಾಕ್ಯವನ್ನು ಸು ರಂ ಎಕ್ಕುಂಡಿಯವರ 'ಕಥನ ಕವನಗಳು' ಕವನ ಸಂಗ್ರಹದಿಂದ ಆಯ್ದ 'ನನ್ನ ಹಾಗೆಯೇ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ಕವಿ ಮಗುವಿನ ಮುಗ್ಧತೆಯನ್ನು ಕುರಿತು ಓದುಗರಿಗೆ ಹೇಳಿದ್ದಾರೆ. ಗೊಮಟೇಶನು ನನ್ನ ಹಾಗೆಯೇ, ನನಗೆ, ಅಮ್ಮ ಸ್ನಾನ ಮಾಡಿಸುವ ಮುಂಚೆ ಎಣ್ಣೆ ಹಚ್ಚಿ ನಿಲ್ಲಿಸಿರುತ್ತಾಳೆ. ಅದೇ ರೀತಿ ಗೊಮ್ಮಟನು ಮಜ್ಜನಕ್ಕಾಗಿ ಮೊದಲ ಚೆಂಬಿಗಾಗಿ ಕಾಯುತ್ತಿರುವನು ಎಂದು ಮಗು ಹೇಳಿದಾಗ ಮಗುವಿನ ಮುಗ್ಧತೆಯನ್ನು ಕಂಡು ಗೊಮ್ಮಟೇಶ ನಕ್ಕುಬಿಟ್ಟ ಎಂದು ಹೇಳುವ ಸಂದರ್ಭ ಇದಾಗಿದೆ.

**ಮೌಲ್ಯವನ್ನಾಧರಿಸಿದ ಸಾರಾಂಶ;**

ಅಂಶಗಳನ್ನಾಧರಿಸಿದ ವಿಷಯಾಂಶಕ್ಕೆ 02 ಅಂಕಗಳು

ಮೌಲ್ಯ, ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 03 ಅಂಕಗಳು

22. ಪ್ರಸ್ತುತ ಪದ್ಯಭಾಗವನ್ನು ಸು ರಂ ಎಕ್ಕುಂಡಿಯವರು ಬರೆದಿರುವ 'ಕಥನ ಕವನಗಳು' ಕವನ ಸಂಕಲನದಿಂದ ಆಯ್ದ ನನ್ನ ಹಾಗೆಯೇ ಎಂಬ ಪದ್ಯದಿಂದ ಆರಿಸಲಾಗಿದೆ. ಮಗುವಿನ ತಾಯಿ, ಮಗುವಿಗೆ ಸ್ನಾನಕ್ಕಾಗಿ ನೀರೆರೆಯುವ ಮುಂಚೆ ಎಣ್ಣೆಯನ್ನು ಹಚ್ಚಿ ಬಾಹುಬಲಿಯ ರೀತಿ ನಿಲ್ಲಿಸಿರುತ್ತಾಳೆ. ಬಾಹುಬಲಿಯು ಮಹಾಮಸ್ತಕಾಭಿಷೇಕಕ್ಕೆ ನಿಂತಿರುವನೆಂದು ಅಜ್ಜನಿಂದ ತಿಳಿದ ಮಗುವು ಬಾಹುಬಲಿಯೂ ಕೂಡ ನನ್ನ ಹಾಗೆಯೇ ಎಂದು ತಿಳಿಯುತ್ತದೆ. ಬಾಹುಬಲಿಯು ಕೂಡ ಎರೆಸಿಕೊಳ್ಳುವುದಕ್ಕಾಗಿ ಮೊದಲ ಚಂಬಿಗಾಗಿ ಕಾಯುತ್ತಾ, ನನ್ನ ಹಾಗೆಯೇ ನಿಂತಿದ್ದಾನೆ ಎಂದು ಹೇಳುತ್ತದೆ. ಹೀಗಾಗಿ ಬಾಹುಬಲಿಯು ತನ್ನ ಹಾಗೆಯೇ ಎಂದು ಮಗು ಭಾವಿಸಿತು. ಇಲ್ಲಿ ಮಗುವಿನ ಮುಗ್ಧತೆಯನ್ನು ಕಂಡು ಗೊಮ್ಮಟೇಶ ನಕ್ಕುಬಿಟ್ಟನು.

**ಎಂಟು-ಹತ್ತು ವಾಕ್ಯಗಳ ಪ್ರಶ್ನೆ;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

23. ಭರತ ಬಾಹುಬಲಿಯ ಅಣ್ಣ. ಭರತನು ಇಡೀ ಭೂಮಂಡಲವನ್ನೆಲ್ಲ ಗೆದ್ದ ಬಾಹುಬಲಿಯ ಅಣ್ಣನಾದ ಭರತನು ಬಾಹುಬಲಿಯೊಂದಿಗೆ ಯುದ್ಧಕ್ಕೆ ನಿಂತನು. ಇವರಿಬ್ಬರ ನಡುವೆ ಮಲ್ಲಯುದ್ಧ, ದೃಷ್ಟಿಯುದ್ಧ ಮತ್ತು ಜಲಯುದ್ಧಗಳಲ್ಲಿ ಬಾಹುಬಲಿ ಗೆದ್ದು, ಭರತ ಸೋತನು. ಸೋಲಿನ ಅವಮಾನದಿಂದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ.

ನಶ್ವರವಾಗಿರುವ ಈ ರಾಜ್ಯಕ್ಕಾಗಿ ಅಣ್ಣ-ತಮ್ಮಂದಿರೆಂಬ ಸಂಬಂಧ ಮರೆತು ಯುದ್ಧಕ್ಕೆ ನಿಂತವನೆಂದು ಬೇಸರಗೊಂಡ ಬಾಹುಬಲಿ ರಾಜ್ಯವನ್ನು ಭರತನಿಗೆ ಹಿಂದಿರುಗಿಸುತ್ತಾನೆ. ಭರತನಿಗೆ ಒಪ್ಪಿಸುತ್ತಾ "ನೀನು ಸೋತು ಗೆದ್ದೆ, ಆದರೆ ನಾನು ಗೆದ್ದು ಸೋತೆ". ಇಲ್ಲಿ ಯಾವುದೂ ಶಾಶ್ವತವಲ್ಲ. ಜೀವಾತ್ಮ ಎಷ್ಟೇ ದೊಡ್ಡವನೆನಿಸಿದರೂ ಆತ ಸಾವನ್ನು ಗೆಲ್ಲಲಾರ. ನಾನು ತಪಸ್ಸಿಗೆ ಹೊರಡುತ್ತೇನೆ. ತಪಸ್ಸಿನಿಂದ ಹುಟ್ಟು-ಸಾವುಗಳ ಮರ್ಮವನ್ನು ಕಂಡುಕೊಳ್ಳುತ್ತೇನೆಂದು ತಪಸ್ಸಿಗೆ ಹೋಗುತ್ತಾನೆ.

24. ಪ್ರಸ್ತುತ ಕವನದ ಕವಿ ಸು ರಂ ಎಕ್ಕುಂಡಿಯವರು, ತಾತ ಹಾಗೂ ಮಗುವಿನ ನಡುವೆ ನಡೆದ ಸಂಭಾಷಣೆಯ ಮಾರ್ಮಿಕ ಚಿತ್ರಣವನ್ನು ಇಲ್ಲಿ ಚಿತ್ರಿಸಿದ್ದಾರೆ.

ತಾತನ ಜೊತೆ ಮಗುವೊಂದು ಬಾಹುಬಲಿಯನ್ನು ನೋಡಲು ಹೋಗಿರುತ್ತದೆ. ಅಲ್ಲಿದ್ದ ಬಾಹುಬಲಿಯ ಮೂರ್ತಿಯನ್ನು ಕಂಡು ತನ್ನ ಸಹಜ ಮುಗ್ಧತೆಯಿಂದ ತಾತನೊಂದಿಗೆ ಸಂಭಾಷಿಸುವುದು ಇಲ್ಲಿ ವ್ಯಕ್ತವಾಗಿದೆ. ಬಾಹುಬಲಿಗೆ ಮಹಾಮಸ್ತಕಾಭಿಷೇಕ ನಡೆಯುವುದನ್ನು ನೋಡಲು ಮಗು ಮತ್ತು ಅಜ್ಜ ಹೋಗಿರುತ್ತಾರೆ. ಆಗ ಮಗು ತನ್ನ ತಾತನನ್ನು ಕೇಳುತ್ತದೆ. ಈತನಾರು? ಇಂದ್ರಗಿರಿಯ ನೆತ್ತಿಯ ಮೇಲೆ ನಿಂತು ಏನು ಮಾಡುತ್ತಿರುವನು? ಎಂದು ಪ್ರಶ್ನಿಸಿದಾಗ ತಾತನು, ಮಗುವಿಗೆ ಧೀರತನದ ಮೂರ್ತಿಯಾಗಿರುವ ಬಾಹುಬಲಿಯ ಕೀರ್ತಿಯ ಬಗ್ಗೆ ತಿಳಿಸುತ್ತಾನೆ. ಇವನ ಕೀರ್ತಿ ದೇಶದೆಲ್ಲೆಡೆ ಹರಡಿದೆ. ಬೆಟ್ಟ ಹತ್ತುವವರನ್ನು–ಇಳಿಯುವವರನ್ನು ಲೆಕ್ಕ ಮಾಡುತ್ತಿದ್ದಾನೆ. ಹತ್ತುವಾಗ ಯಾರೆಲ್ಲಾ ಬಳಲುತ್ತಾರೋ ಅವರಿಗೆ ಸಹಾಯ ಹಸ್ತವನ್ನು ನೀಡುತ್ತಾನೆ ಎಂದು ಹೇಳಿದನು. ಮಗುವು ಅವನ ಬಳಿ ಯಾರು ಇಲ್ಲ. ಅವನಿಗೆ ಭಯವಾಗುವುದಿಲ್ಲವೇ? ಎಂದು ಮರು ಪ್ರಶ್ನಿಸಿದಾಗ ಅದಕ್ಕೆ ತಾತ, ಅವನಿಗೆಲ್ಲಿಯ ಭಯ, ಆತನೇ ಎಲ್ಲರಿಗೂ ಅಭಯವನ್ನು ನೀಡುವನು. ಒಮ್ಮೆ ಬಾಹುಬಲಿಯ ಅಣ್ಣನಾದ ಭರತನು ಬಾಹುಬಲಿಯೊಂದಿಗೆ ಯುದ್ಧಕ್ಕೆ ನಿಂತನು. ಮಲ್ಲಯುದ್ಧ, ದೃಷ್ಟಿಯುದ್ಧ ಮತ್ತು ಜಲಯುದ್ಧಗಳಲ್ಲಿ ಬಾಹುಬಲಿ ಗೆದ್ದು, ಭರತ ಸೋತನು. ಸೋಲಿನ ಅವಮಾನದಿಂದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾದನು. ನಶ್ವರವಾಗಿರುವ ಈ ರಾಜ್ಯಕ್ಕಾಗಿ ಅಣ್ಣ-ತಮ್ಮಂದಿರೆಂಬ ಸಂಬಂಧ ಮರೆತು ಯುದ್ಧಕ್ಕೆ ನಿಂತವನೆಂದು ಬೇಸರಗೊಂಡ ಬಾಹುಬಲಿ ರಾಜ್ಯವನ್ನು ಭರತನಿಗೆ ಹಿಂದಿರುಗಿಸುತ್ತಾನೆ. ಹುಟ್ಟು-ಸಾವುಗಳ ಮರ್ಮವನ್ನು ಹುಡುಕಲು ತಪಸ್ಸಿಗೆ ಹೋಗುತ್ತಾನೆ. ಕೊನೆಗೆ ಜ್ಞಾನದ ಬೆಳಕು ದೊರೆಯುತ್ತದೆ. ಅದರ ತೇಜಸ್ಸಿನಿಂದ ದೀಪದಂತೆ ಬೆಳಗುತ್ತಾ ನಿಂತಿದ್ದಾನೆ ಎಂದನು. ನಿಂತಿರುವ ಬಾಹುಬಲಿಯನ್ನು ನೋಡಿದ ಮಗುವು ನನ್ನ ತಾಯಿ, ನನಗೆ ಸ್ನಾನಕ್ಕಾಗಿ ನೀರೆರೆಯುವ ಮುಂಚೆ ಎಣ್ಣೆಯನ್ನು ಹಚ್ಚಿ, ಬಾಹುಬಲಿಯ ರೀತಿ ನಿಲ್ಲಿಸಿರುತ್ತಾಳೆ. ಬಾಹುಬಲಿಯು ಮಹಾಮಸ್ತಕಾಭಿಷೇಕಕ್ಕೆ ನಿಂತಿರುವನೆಂದು ಅಜ್ಜನಿಂದ ತಿಳಿದ ಮಗುವು ಬಾಹುಬಲಿಯೂ ಕೂಡ ನನ್ನ ಹಾಗೆಯೇ ಎಂದು ತಿಳಿಯುತ್ತದೆ. ಬಾಹುಬಲಿಯು ಕೂಡ ಎರೆಸಿಕೊಳ್ಳುವುದಕ್ಕಾಗಿ ಮೊದಲ ಚಂಬಿಗಾಗಿ ಕಾಯುತ್ತಾ ನನ್ನ ಹಾಗೆಯೇ ನಿಂತಿದ್ದಾನೆ ಎಂದು ಹೇಳುತ್ತದೆ. ಹೀಗಾಗಿ ಬಾಹುಬಲಿಯು ತನ್ನ ಹಾಗೆಯೇ ಎಂದು ಮಗು ಭಾವಿಸಿತು. ಇಲ್ಲಿ ಮಗುವಿನ ಮುಗ್ಧತೆಯನ್ನು ಕಂಡು ಗೊಮ್ಮಟೇಶ ನಕ್ಕುಬಿಟ್ಟನು.

## ಪಠ್ಯ ಪೂರಕ ಅಧ್ಯಯನ

### 1. ಒಗಟು

**ಒಂದು ಅಂಕದ ಪ್ರಶ್ನೆಗಳು;**

1. ಒಗಟುಗಳಿಗೆ ಒಡಪು, ಮುಂಡಿಗೆ, ಬೆಡಗಿನ ವಚನಗಳು, ಪ್ರಹೇಳಿಕೆ ಮುಂತಾದ ಹೆಸರುಗಳಿವೆ.
2. ಸಂಸ್ಕೃತದಲ್ಲಿ ಒಗಟಿನ ಪ್ರಕಾರವನ್ನು ಪ್ರಹೇಳಿಕೆ ಎಂದು ಕರೆಯುತ್ತಾರೆ.
3. ಒಗಟು ಎಂದರೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ವ್ಯಾಜದಿಂದ ಚಮತ್ಕಾರಯುತವಾಗಿ ವರ್ಣಿಸುವುದು.
4. ಚಂದ್ರ ಮತ್ತು ನಕ್ಷತ್ರಗಳಿಗಿರುವ ಒಗಟೆಂದರೆ "ಅಂಗೈ ಅಗಲದ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ"
5. ಒಗಟುಗಳಲ್ಲಿ ವ್ಯಕ್ತವಾಗುವ ಅದ್ಬುತವಾದ ಪ್ರಜ್ಞೆ ಎಂದರೆ ಸಾಮ್ಯಪ್ರಜ್ಞೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

6. ಒಗಟಿನಲ್ಲಿರುವ ಎರಡು ಸದೃಶ ವಸ್ತುಗಳೆಂದರೆ ಒಂದು ಉಪಮಾನ ಇನ್ನೊಂದು ಉಪಮೇಯ. ಉಪಮಾನ ವಾಚ್ಯವಾಗಿರುತ್ತದೆ. ಉಪಮೇಯ ಅಸ್ಪಷ್ಟವಾಗಿ ಗುಹ್ಯವಾಗಿರುತ್ತದೆ. ಅದನ್ನು ಒಗಟಿನ ಕರ್ತೃ ಜಾಣ್ಮೆಯಿಂದ ಬಚ್ಚಿಟ್ಟಿರುತ್ತಾನೆ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆ ಹಚ್ಚಬೇಕಾಗುತ್ತದೆ.
7. ಒಗಟಿನ ಸ್ವಾರಸ್ಯ ಸೌಂದರ್ಯಕ್ಕೆ ಒಂದು ನಿದರ್ಶನವೆಂದರೆ "ಅಮ್ಮನ ಸೀರೆ ಮಡಿಸೋಕಾಗಲ್ಲ. ಅಪ್ಪನ ದುಡ್ಡು ಎಣಿಸೋಕ್ಕಾಗಲ್ಲ" ಇದಕ್ಕೆ ಉತ್ತರ ಆಕಾಶ ಮತ್ತು ನಕ್ಷತ್ರಗಳು. ಆಕಾಶವು ಅಮ್ಮನ ಸೀರೆಯಂತೆ ಕಂಡಿದೆ. ಆಕಾಶದಲ್ಲಿರುವ ನಕ್ಷತ್ರಗಳು ಅಪ್ಪನ ದುಡ್ಡಿನ ಹಾಗೆ ಇಲ್ಲಿ ತೋರಿದೆ. ಆಕಾಶವನ್ನು ಮಡಿಸಲಿಕ್ಕೆ ಹೇಗೆ ಆಗುವುದಿಲ್ಲವೋ? ನಕ್ಷತ್ರಗಳನ್ನು ಎಣಿಸಲು ಸಾಧ್ಯವಿಲ್ಲ ಎಂಬುದನ್ನು ಸ್ವಾರಸ್ಯವಾಗಿ ವ್ಯಕ್ತಪಡಿಸಲಾಗಿದೆ.
8. "ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ" ಎಂಬ ಒಗಟು ಹಲಸಿನ ತೊಳೆ ಮತ್ತು ಬೀಜಗಳನ್ನು ನಿರ್ದೇಶಿಸುತ್ತದೆ. ಹಲಸಿನ ತೊಳೆಯ ಹೊಂಬಣ್ಣವನ್ನು ಕವಿ ಗಮನಿಸಿರುವುದಿರಲಿ, ಒಳಗಿನ ಬೀಜವನ್ನು ಬೆಳ್ಳಿಯ ಲಿಂಗವನ್ನಾಗಿ ಕಂಡಿರುವುದು ಒಂದು ವಿಶೇಷಾನುಭವವೇ ಸರಿ ಎಂಬುದು ಒಗಟಿನ ಸ್ವಾರಸ್ಯ ಸೌಂದರ್ಯ.
9. ನಮಗೆ ತಿಳಿದಿರುವ ಒಗಟುಗಳೆಂದರೆ – ನೀಲಿ ಕೆರೇಲಿ ಬಿಳಿ ಮೀನು (ಚಂದ್ರ ಮತ್ತು ನಕ್ಷತ್ರ), ಅಂಗೈ ಅಗಲದ ಗದ್ದೆ, ಗದ್ದೆಗೆ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ (ದೀಪ), ಚಿನ್ನದ ಗಿಣಿ ಬಾಲದಲ್ಲಿ ನೀರು ಕುಡಿಯುತ್ತೆ (ದೀಪ),  ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ (ಮಲ್ಲಿಗೆ ಹೂವಿನ ಗಿಡ), ಅಡ್ಡ ಕೂಯ್ದರೆ ಚಕ್ರವಲ್ಲ, ಉದ್ದ ಕೂಯ್ದರೆ ಶಂಖವಲ್ಲ, ಮೂಸಿದರೆ ವಾಸನೆ, ಬಿಡಿಸಿದರೆ ಹತ್ತಿಪ್ಪತ್ತು

(ಈರುಳ್ಳಿ), ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ, ಮೂರು ಕಣ್ಣುಂಟು ಹರನಲ್ಲ (ತೆಂಗಿನಕಾಯಿ).

## 2. ವಚನಗಳು

**ಒಂದು ಅಂಕದ ಪ್ರಶ್ನೆಗಳು;**

1. ಬಸವಣ್ಣನವರ ವಚನಗಳ ಅಂಕಿತನಾಮ ಕೂಡಲಸಂಗಮದೇವ.
2. ಜನರು ದುಡಿದು ಬದುಕಲು ಬಸವಣ್ಣನವರು ನೀಡಿದ ಸಂದೇಶವೇನೆಂದರೆ ಕಾಯಕವೇ ಕೈಲಾಸ.
3. ಬಸವಣ್ಣನವರ ಅನುಸಾರ ಮಾಣಿಕ್ಯದ ದೀಪ್ತಿಯಂತೆ ಇರಬೇಕಾದುದು ನುಡಿ ಅಂದರೆ ಮಾತು.
4. ಕರ್ನಾಟಕ ಸರ್ಕಾರ ಬಸವಣ್ಣನವರಿಗೆ "ವಿಶ್ವಗುರು ಸಾಂಸ್ಕೃತಿಕ ನಾಯಕ" ಎಂಬ ಬಿರುದನ್ನು ಕೊಟ್ಟಿದೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

5. ಬಸವಣ್ಣನವರ ದೃಷ್ಟಿಯಲ್ಲಿ ನಮ್ಮ ನುಡಿ ಅಂದರೆ ಮಾತು ಮುತ್ತಿನ ಹಾರದಂತಿರಬೇಕು. ಮಾಣಿಕ್ಯದ ದೀಪ್ತಿಯಂತಿರಬೇಕು. ಸ್ಪಟಿಕದ ಶಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದು ಅಹುದು ಎನ್ನುವಂತಿರಬೇಕು.
6. ಕಳ್ಳತನ ಮಾಡಬಾರದು. ಬೇರೆಯವರಿಗೆ ನೋವನ್ನು ನೀಡಬಾರದು. ಸುಳ್ಳು ಹೇಳಬಾರದು. ಕೋಪಗೊಳ್ಳಬಾರದು. ಬೇರೆಯವರ ಬಗ್ಗೆ ಅಸಹ್ಯ ಪಡಬಾರರು. ತನ್ನನ್ನು ಬಣ್ಣಿಸಬಾರದು. ಎದುರಿಗೆ ನಿಂತವರನ್ನು ನಿಂದಿಸಿ ಮಾತನಾಡಬಾರದು. ಇದುವೇ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗುತ್ತದೆ. ನಾವು ಈ ಎಲ್ಲಾ ರೀತಿ ನಡೆದುಕೊಂಡಾಗ ಕೂಡಲಸಂಗಮ ದೇವ ಒಲಿಯುವನು.

## 8ನೇ ತರಗತಿ

## ದ್ವಿತೀಯ ಭಾಷೆ ಕನ್ನಡ

## ನೀಲಿ ನಕಾಶೆ

**ಸಂಕಲನಾತ್ಮಕ ಮೌಲ್ಯಾಂಕನ-1**

**ಮಾದರಿ ಪ್ರಶ್ನೆಪತ್ರಿಕೆ-1**

ಉದ್ದಿಷ್ಟಾನುಸಾರ ಪ್ರಾಮುಖ್ಯತೆ;

| ಪ್ರಶ್ನೆಗಳು/ಅಂಕಗಳು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 01 | 12 | 04 | 01 |
| ಅಂಕಗಳು | 04 | 18 | 15 | 03 |

ವಿಷಯವಸ್ತು ಅನುಸಾರ ಪ್ರಾಮುಖ್ಯತೆ;

| ಪ್ರಶ್ನೆಗಳು/ಅಂಕಗಳು | ಗದ್ಯ | ಪದ್ಯ | ವ್ಯಾಕರಣ | ಪೂ ಅದ್ಯಯನ | ರಚನೆ |
|---|---|---|---|---|---|
| ಪ್ರಶ್ನೆಗಳು | 07 | 06 | 02 | 01 | 02 |
| ಅಂಕಗಳು | 14 | 14 | 02 | 02 | 08 |

ಪ್ರಶ್ನಾನುಸಾರ ಪ್ರಾಮುಖ್ಯತೆ;

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 02 | 02 |
| 2 | ಕಿರು ಉತ್ತರ-1 (01 ಅಂಕ) | 05 | 05 |
| 3 | ಕಿರು ಉತ್ತರ-2 (02 ಅಂಕಗಳ) | 04 | 08 |
| 4 | ದೀರ್ಘ ಉತ್ತರ-1 (03 ಅಂಕಗಳ) | 04 | 12 |
| 5 | ದೀರ್ಘ ಉತ್ತರ-2 (04 ಅಂಕಗಳ) | 02 | 08 |
| 6 | ದೀರ್ಘ ಉತ್ತರ-3 (05 ಅಂಕಗಳ) | 01 | 05 |

## ಸಂಕಲನಾತ್ಮಕ ಮೌಲ್ಯಾಂಕನ-1

## ಮಾದರಿ ಪ್ರಶ್ನೆಪತ್ರಿಕೆ-1

## 8ನೇ ತರಗತಿ

## ದ್ವಿತೀಯ ಭಾಷೆ ಕನ್ನಡ

**ಸಮಯ : 1 : 30 ಗಂಟೆ** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ:**

1. ಲೋಪ ಸಂಧಿಗೆ ಉದಾಹರಣೆಯಿದು – **2 x 1 = 2**

(ಎ) ಗುರುವನ್ನು (ಬಿ) ಬೇರೊಬ್ಬ

(ಸಿ) ಮಳೆಗಾಲ (ಡಿ) ಹೂಬುಟ್ಟಿ

2. “ಮನೆಯಿಂದ” ಪದದಲ್ಲಿರುವ ವಿಭಕ್ತಿ ಪ್ರತ್ಯಯ –

(ಎ) ಪ್ರಥಮ (ಬಿ) ದ್ವಿತೀಯ

(ಸಿ) ಚತುರ್ಥ (ಡಿ) ಷಷ್ಠಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 5 x 1 = 5**

3. ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ಏಕೆ ನಿಲ್ಲಿಸಿದರು?
4. ಅಶೋಕನು ಸಾಧಿಸಿದ ಎರಡು ಬಗೆಯ ಬದುಕು ತಿಳಿಸಿ.
5. ಗಾಂಧೀಜಿಯವರಿಗೆ ಕಾಪಿ ಮಾಡಲು ಹೇಳಿದ ಉಪಾಧ್ಯಾಯರ ಮೇಲೆ ಗೌರವ ಏಕೆ ಕಡಿಮೆಯಾಗಲಿಲ್ಲ?
6. ಹಕ್ಕಿಗಳು ಬೇರೆ ಕಡೆಗೆ ಹಾರಿ ಹೋಗಲು ಕಾರಣವೇನು?
7. ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಹೇಗೆ ಕಾಣಿಸುತ್ತದೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 4 x 2 = 8**

8. ಬುದ್ಧನ ಪ್ರಕಾರ 'ದ್ವೇಷ' ದುಃಖವನ್ನು ಹೇಗೆ ಹೆಚ್ಚಿಸುತ್ತದೆ?
9. ಕನಸಿನ ಬಗ್ಗೆ ಕಲಾಂರವರ ಸಂದೇಶವನ್ನು ತಿಳಿಸಿ.
10. ಹಡೆದವ್ವನ ಶ್ರೇಷ್ಠತೆಯನ್ನು ಜನಪದರು ಯಾವ ರೀತಿ ಬಣ್ಣಿಸಿದ್ದಾರೆ?
11. ಕೂಡಲಸಂಗಮ ದೇವರನ್ನು ಒಲಿಸುವ ಪರಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

**IV. ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 1 x 3 = 3**

12. ಸು ರಂ ಎಕ್ಕುಂಡಿ

**V. ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ: 1 x 3 = 3**

13. “ಮಾತು ಬೆಳ್ಳಿ, ಮೌನ ಬಂಗಾರ”

**VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:1 x 3 = 3**

14. “ಕಾಪಿ ಮಾಡುವ ಕಲೆ ನನಗೆ ಕೊನೆಗೂ ಬರಲೇ ಇಲ್ಲ”

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ: 1 x 3 = 3**

15. ಇಲ್ಲಿ ಉದ್ಯಾನದ ತುಂಬ

ಗಿಡಗಳಿದ್ದವು

ಗಿಡಗಳ ತುಂಬ ಹೂವು ಅಲೆದು

ಕುಲುಕುತ್ತಿದ್ದವು

ಬಣ್ಣ ಬಣ್ಣದ ಹೂಗಳ ಮೇಲೆ

ಬಣ್ಣ ಬಣ್ಣದ ಹಕ್ಕಿ

ಉಲಿಯುತ್ತಿದ್ದವು.

**VIII. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ: 1 x 4 = 4**

16. ಎಲ್ಲೋ ---------------------------------

-----------------------------------------

-----------------------------------------

---------------------------- ನಮ್ಮೊಳಗೆ ||

**IX. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 1 x 4 = 4**

17. ಸುಕ್ರಿ ಬೊಮ್ಮಗೌಡ ಸಾಮಾಜಿಕ ಕಳಕಳಿ ಹೊಂದಿರುವ ಮಹಿಳೆ ಎಂಬುದನ್ನು ಹೇಗೆ ಹೇಳುತ್ತೀರಿ?

ಅಥವಾ

ಸುಕ್ರಿಯವರು 'ಜಾನಪದದ ಗಣಿ' ಆದುದು ಹೇಗೆ? ವಿವರಿಸಿ.

**X. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತ್ಯನ್ನು ಆಧರಿಸಿ ಪತ್ರ ಬರೆಯಿರಿ:**

**1 x 5 = 5**

18. ನಿಮ್ಮನ್ನು ಪೃಥ್ವಿ, 8ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಶಿವನಹಳ್ಳಿ, ಬೆಂಗಳೂರು ಎಂದು ಭಾವಿಸಿ ಪರಿಸರ ಕಾಳಜಿಯ ಕುರಿತು ಮೈಸೂರಿನಲ್ಲಿರುವ ನಿಮ್ಮ ಅಣ್ಣ ಲಿತಿನ್ ರಾಜುಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ತರಬಾಳು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಅಹುಜ ಎಂದು ಭಾವಿಸಿ, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಂತೆ ಕೋರಿ ಅಧ್ಯಕ್ಷರು, ತರಬಾಳು ಗ್ರಾಮ ಪಂಚಾಯಿತಿಗೆ ಪತ್ರ ಬರೆಯಿರಿ.

## ನೀಲಿ ನಕಾಶೆ

**ಸಂಕಲನಾತ್ಮಕ ಮೌಲ್ಯಾಂಕನ-1**

**ಮಾದರಿ ಪ್ರಶ್ನೆಪತ್ರಿಕೆ-2**

ಉದ್ದಿಷ್ಟಾನುಸಾರ ಪ್ರಾಮುಖ್ಯತೆ;

| **ಪ್ರಶ್ನೆಗಳು/ಅಂಕಗಳು** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** |
|---|---|---|---|---|
| ಪ್ರಶ್ನೆಗಳು | 02 | 11 | 05 | 01 |
| ಅಂಕಗಳು | 04 | 15 | 18 | 03 |

ವಿಷಯವಸ್ತು ಅನುಸಾರ ಪ್ರಾಮುಖ್ಯತೆ;

| **ಪ್ರಶ್ನೆಗಳು/ಅಂಕಗಳು** | **ಗದ್ಯ** | **ಪದ್ಯ** | **ವ್ಯಾಕರಣ** | **ಪೂ ಅದ್ಯಯನ** | **ರಚನೆ** |
|---|---|---|---|---|---|
| ಪ್ರಶ್ನೆಗಳು | 08 | 06 | 02 | 01 | 02 |
| ಅಂಕಗಳು | 14 | 14 | 02 | 02 | 08 |

ಪ್ರಶ್ನಾನುಸಾರ ಪ್ರಾಮುಖ್ಯತೆ;

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 02 | 02 |
| 2 | ಕಿರು ಉತ್ತರ-1 (01 ಅಂಕ) | 06 | 06 |
| 3 | ಕಿರು ಉತ್ತರ-2 (02 ಅಂಕಗಳ) | 04 | 08 |
| 4 | ದೀರ್ಘ ಉತ್ತರ-1 (03 ಅಂಕಗಳ) | 04 | 12 |
| 5 | ದೀರ್ಘ ಉತ್ತರ-2 (04 ಅಂಕಗಳ) | 03 | 12 |
| 6 | ದೀರ್ಘ ಉತ್ತರ-3 (05 ಅಂಕಗಳ) | - | - |

**ಸಂಕಲನಾತ್ಮಕ ಮೌಲ್ಯಾಂಕನ-1**

**ಮಾದರಿ ಪ್ರಶ್ನೆಪತ್ರಿಕೆ-2**

**8ನೇ ತರಗತಿ**

**ದ್ವಿತೀಯ ಭಾಷೆ ಕನ್ನಡ**

**ಸಮಯ : 1 : 30 ಗಂಟೆ** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು – ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ:**

1. ಕನ್ನಡ ವರ್ಣಮಾಲೆಯಲ್ಲಿರುವ ಸ್ವರಾಕ್ಷರಗಳ ಸಂಖ್ಯೆ – **2 x 1 = 2**

   (ಎ) 12 (ಬಿ) 13

   (ಸಿ) 14 (ಡಿ) 15

2. “ಹಲವು” ಪದವು ಇದಕ್ಕೆ ಉದಾಹರಣೆಯಾಗಿದೆ –

(ಎ) ಗುಣವಾಚಕ (ಬಿ) ಸಂಖ್ಯಾವಾಚಕ

(ಸಿ) ಭಾವವಾಚಕ (ಡಿ) ಪರಿಮಾಣವಾಚಕ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 6 x 1 = 6**

3. ಬುದ್ಧದೇವರು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಏನು ಮಾಡಬೇಕು?
4. ಕನಸು ಕಾರ್ಯರೂಪಕ್ಕೆ ಇಳಿಯಲು ಇರುವ ಸೋಪಾನವನ್ನು ತಿಳಿಸಿ.
5. ಗಾಂಧೀಜಿಯವರಿಗೆ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಏಕೆ ಸೂಚಿಸಿದರು?
6. ಸುಕ್ರಿಯವರು ಮಳೆರಾಯನನ್ನು ಒಲಿಸಿಕೊಳ್ಳಲು ಹಾಡುತ್ತಿದ್ದ ಹಾಡು ಯಾವುದೆಂದು ತಿಳಿಸಿ.
7. ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?
8. ಕವಿಯವರ ಪ್ರಕಾರ ಉದ್ಯಾನದ ಗಿಡಗಳು ಹೇಗೆ ಬೆಳೆದು ನಿಂತಿದ್ದವು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 4 x 2 = 8**

9. ಕಲಾಂರವರ ಕನಸಿನಲ್ಲಿ ಅಶೋಕನು ಕಂಡಿದ್ದು ಹೇಗೆ?
10. ಹರಿಶ್ಚಂದ್ರ ನಾಟಕ ಗಾಂಧಿಜಿಯವರ ಮೇಲೆ ಸ್ಪೂರ್ತಿ ತುಂಬಿತು. ಹೇಗೆ?
11. ಉದ್ಯಾನದ ಹಕ್ಕಿಗಳು ತೊಂದರೆಗೆ ಒಳಗಾದದ್ದು ಏಕೆ? ಅದರ ಪರಿಣಾಮವೇನಾಯಿತು?
12. “ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ” ಒಗಟಿನ ಸ್ವಾರಸ್ಯ ಸೌಂದರ್ಯವನ್ನು ತಿಳಿಸಿ.

**IV. ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 1 x 3 = 3**

13. ಜಿ ಎಸ್ ಶಿವರುದ್ರಪ್ಪ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ: 2 x 3 = 6**

14. “ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು”
15. “ಕಟ್ವಾಡೆ ಕುಟ್ವಾಡೆ ಕಟ್ಟೈದ್ರೆ ಚೂಡಾಡೆ.”

**VI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ: 1 x 3 = 3**

16. “ತಾತ, ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು. ಬಾಹುಬಲಿಯು ಕೂಡ ತನ್ನ ಹಾಗೆಯೇ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ”

ಗೊಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ.

**VII. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 1 x 4 = 4**

17. 'ಸುಖಕ್ಕೆ ಬರುವ ಜನ ಕಷ್ಟಕ್ಕೆ ಬಾರರು' ಎನ್ನುವ ಮಾತು ಜನಪದರ ಹಾಡಿನಲ್ಲಿ ಹೇಗೆ ವ್ಯಕ್ತವಾಗಿದೆ?

ಅಥವಾ

"ಜ್ಯೋತಿಯೇ ಆಗು ಜನಕೆಲ್ಲ" ಕವಿತೆಯಲ್ಲಿ ವ್ಯಕ್ತವಾಗಿರುವ ಜನಪದರ ಭಾವನೆಗಳನ್ನು ವ್ಯಕ್ತಪಡಿಸಿ.

**VIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: 2 + 2 = 4**

18. ಭಾರತ ಕೃಷಿ ಪ್ರಧಾನವಾದ ಹಳ್ಳಿಗಳ ದೇಶ. ರೈತರನ್ನು ದೇಶದ ಬೆನ್ನೆಲುಬು, ಅನ್ನದಾತ ಎಂದು ಕರೆಯುತ್ತಾರೆ. ದೇಶಕ್ಕೆ ಅನ್ನ ನೀಡುವ ರೈತ ಇಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ರೈತರ ಆತ್ಮಹತ್ಯೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ವಿದ್ಯುತ್, ನೀರು, ಸರಿಯಾದ ಬಿತ್ತನೆ ಬೀಜಗಲ ಕೊರತೆ, ರಸಗೊಬ್ಬರದ ಕೊರತೆ, ಸೂಕ್ತ ಬೆಲೆ ಸಿಗದಿರುವುದು. ಕೃಷಿ ಕಾರ್ಮಿಕರ ಕೊರತೆ, ಅತಿವೃಷ್ಟಿ-ಅನಾವೃಷ್ಟಿ, ಕೌಟುಂಬಿಕ ಕಲಹ, ಸಾಲಭಾದೆ ಇತ್ಯಾದಿ ಸಮಸ್ಯೆಗಳಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇವುಗಳಲ್ಲಿ ಪ್ರಮುಖವಾಗಿ ರೈತ ಬೆಳೆದ ಬೆಳೆಗೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ಸಾಲವನ್ನು ಪಡೆದು ತೀರಿಸಲಾಗದೆ ಆತ್ಮಹತ್ಯೆಗೆ ಒಳಗಾಗುತ್ತಾನೆ. ಪ್ರತಿವರ್ಷ ಸೆಪ್ಟೆಂಬರ್ 10 ರಂದು ಜಾಗತಿಕ ಆತ್ಮಹತ್ಯಾ ತಡೆಗಟ್ಟುವಿಕೆಯ ದಿನಾಚರಣೆಯನ್ನು ಆಚರಿಸಲಾಗುತ್ತದೆ. ರೈತರ ಆತ್ಮಹತ್ಯೆಗೆ ಪರಿಹಾರಗಳೆಂದರೆ ಸರ್ಕಾರ ಮತ್ತು ರೈತರ ಸಂಘ ಸಂಸ್ಥೆಗಳು ಸೂಕ್ತವಾದ ಸಲಹೆಗಳನ್ನು ನೀಡಿ, ರೈತರಿಗೆ ದೊರೆಯುವ ಸವಲತ್ತುಗಳನ್ನು ನೇರವಾಗಿ ರೈತರಿಗೇ ಸಿಗುವ ಹಾಗೆ ಮಾಡಬೇಕು. ಅತಿವೃಷ್ಟಿ-ಅನಾವೃಷ್ಟಿಯಾಗಿ ಬೆಳೆ ನಾಶವಗಿದ್ದರೆ, ಬ್ಯಾಂಕುಗಳಿಂದ ಪಡೆದ ಸಾಲವನ್ನು

ಅ) ರೈತರ ಆತ್ಮಹತ್ಯೆಗೆ ಕಾರಣಗಳನ್ನು ತಿಳಿಸಿ.

ಬ) ರೈತರ ಆತ್ಮಹತ್ಯೆಗೆ ಪರಿಹಾರೋಪಾಯಗಳೇನು?

**IX. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ: 1 x 4 = 4**

19. ಗ್ರಂಥಾಲಯದ ಮಹತ್ವ

ಅಥವಾ

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು.

## ಭಾಗ – 2

## 5. ಏನಾದರೂ ಮಾಡಿ ದೂರಬೇಡಿ

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ಫೋನ್
2. (ಬಿ) ಉದ್ಯೋಗ
3. (ಎ) ವಸತಿ
4. (ಬಿ) ಸಕ್ಕರೆ

**ಒಂದು ಅಂಕದ ಪ್ರಶ್ನೆಗಳು:**

5. ಲೇಖಕಿಯು ಸ್ವದೇಶಿ ಕಂಪನಿಯ ವಸ್ತುಗಳನ್ನು ಪ್ರಜ್ಞಾಪೂರ್ವಕವಾಗಿ ಹುಡುಕುತ್ತೇನೆ ಎಂದಿದ್ದಾರೆ.
6. ಲೇಖಕಿಯು ತಮ್ಮ ಲೇಖನದಲ್ಲಿ ಸಣ್ಣ ಯತ್ನದಲ್ಲೂ ಬದಲಾವಣೆ ಮತ್ತು ಸುಧಾರಣೆಯ ಹಾದಿಯಲ್ಲಿ ಒಂದು ಪುಟ್ಟ ಹೆಜ್ಜೆ ಮುಂದಿಡಲು ಸಾಧ್ಯ ಎಂಬ ನಂಬುಗೆಯನ್ನು ವ್ಯಕ್ತಪಡಿಸಿದ್ದಾರೆ.
7. ಲೇಖಕಿಯ ಪ್ರಕಾರ ಕೆಲವರಲ್ಲಿ ಇರುವ ಹವ್ಯಾಸ ದೂರುವುದು. ಕೆಲವರಲ್ಲಿ ದೂರುವುದೇ ಕಸುಬಾಗುತ್ತದೆ.
8. ಭಾರತಿ ಪ್ರಭುರವರು ವಾಕ್-ಶ್ರವಣ ತಜ್ಞರು ಹಾಗೂ ಪರಿಸರದ ಬಗ್ಗೆ ಕಾಳಜಿಯುಳ್ಳವರಾಗಿದ್ದರು.
9. ಭಾರತಿ ಪ್ರಭುರವರು ಅಂಗಡಿಯಿಂದ ಸಾಮಾನುಗಳನ್ನು ಕೊಳ್ಳಲು ಪ್ಲಾಸ್ಟಿಕ್ ಚೀಲ ಬಳಸದೆ ಕೈಚೀಲ ಬಳಸುತ್ತಿದ್ದುದರಿಂದ ಮನೆಯಿಂದಲೇ ಕೈಚೀಲ ಹಿಡಿದು ಹೊರಡುತ್ತಾರೆ.
10. ಕೃಷಿಗೆ ಬಳಸುವ ಕೀಟನಾಶಕಗಳು, ರಾಸಾಯನಿಕ ಗೊಬ್ಬರಗಳೆಲ್ಲವೂ ಅಂತರ್ಜಲ ನೀರಿನಲ್ಲಿ ಬೆರೆತು ಕಲುಷಿತವಾಗುತ್ತಿದೆ.
11. ಲೇಖಕಿಯು ಸಿ ಎಸ್ ಇ ವರದಿಯಲ್ಲಿ ಓದಿದ ವಿಚಾರ ಯಾವುದೆಂದರೆ ಅಂತರ್ಜಲವನ್ನು ಬಳಸುವ ಕೋಲಾ ಕಂಪನಿಗಳು ಪೂರ್ಣವಾಗಿ ನೀರನ್ನು ಶುದ್ಧಿ ಮಾಡದೆ ಇದ್ದ ಕಾರಣ ಕೀಟನಾಶಕ ತಂಪು ಪಾನೀಯದಲ್ಲಿ ಉಳಿಯಿತು.
12. ಅನಿವಾಸಿ ಭಾರತೀಯರ ಭಾರತದಲ್ಲಿ ಸ್ವಚ್ಛತೆಯಿಲ್ಲ, ವ್ಯವಸ್ಥೆ ಸರಿಯಿಲ್ಲ, ಅದಿಲ್ಲ-ಇದಿಲ್ಲ, ಇಲ್ಲಿ ನೋಡಿ ಎಷ್ಟು ಚೆನ್ನಾಗಿದೆ? ಎಂಬ ಮಾತು  ಕೇಳಿದಾಗ ಲೇಖಕಿಗೆ ಕೆಡುಕೆನಿಸುತ್ತಿತ್ತು.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

13. ವಿದೇಶಿ ಕಂಪನಿಯ ದಿನಬಳಕೆಯ ವಸ್ತುಗಳೆಂದರೆ ಸೋಪು, ಟೂತ್ ಪೇಸ್ಟ್, ಚಪ್ಪಲಿ, ಕೋಲಾ, ಮೊಬೈಲ್, ಕಂಪ್ಯೂಟರ್, ಫ್ರಿಜ್ಜು, ಕಾರು, ಸ್ಕೂಟರ್ ಮುಂತಾದವುಗಳು.

14. ಸ್ವದೇಶಿ ಕಂಪನಿಯ ವಸ್ತುಗಳನ್ನು ಬಳಸದೆ, ಮಾರಾಟ ಮಾಡದೇ, ವಿದೇಶಿ ಕಂಪನಿಯವರು ಕೊಟ್ಟ ಆಕರ್ಷಕ ಇನಾಮು, ಶೋ ಕೇಸು, ಫ್ರಿಜ್ಜುಗಳನ್ನು ಪಡೆದು, ವಿದೇಶಿ ವಸ್ತುಗಳನ್ನು ಮಾರಾಟ ಮಾಡುತ್ತಿರುವುದರಿಂದ ಹಾಗೂ ಅದನ್ನು ಕೊಳ್ಳುತ್ತಿರುವುದರಿಂದ ನಮ್ಮ ದೇಶ ಹಾಳಾಗಿ ಹೋಗುತ್ತಿದೆ ಎಂದು ಲೇಖಕಿಯವರು ಹೇಳಿದ್ದಾರೆ.
15. ಭಾರತಿ ಪ್ರಭುರವರು ಪರಿಸರ ಕಾಳಜಿಯುಳ್ಳ ವ್ಯಕ್ತಿ. ತಮ್ಮಿಂದ ಪರಿಸರ ಮಲಿನವಾಗದಂತೆ ಬಲು ಎಚ್ಚರ ವಹಿಸುವ ಕುಟುಂಬ. ಅವರ ಮನೆಯಲ್ಲಿ ದೀಪಾವಳಿ ದಿನದಂದು ದೀಪಗಳು ನರ್ತಿಸುತ್ತವೆ. ಪಠಾಕಿಗಳನ್ನು ಕಡ್ಡಾಯವಾಗಿ ಬಳಸುವುದಿಲ್ಲ. ಇವರು ಅಂಗಡಿಯಿಂದ ಸಾಮಾನುಗಳನ್ನು ಕೊಳ್ಳಲು ಪ್ಲಾಸ್ಟಿಕ್ ಚೀಲ ಬಳಸದೆ, ಕೈಚೀಲ ಬಳಸುತ್ತಿದ್ದುದರಿಂದ ಮನೆಯಿಂದಲೇ ಪ್ರಜ್ಞಾಪೂರ್ವಕವಾಗಿ ಕೈಚೀಲ ಹಿಡಿದು ಹೊರಡುತ್ತಾರೆ.
16. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಪ್ಲಾಸ್ಟಿಕ್ ಚೀಲ ಬಳಸದೆ ಮನೆಯಿಂದಲೇ ಪ್ರಜ್ಞಾಪೂರ್ವಕವಾಗಿ ಕೈಚೀಲ ಬಳಸುವುದರಿಂದ, ದೀಪಾವಳಿ ದಿನದಂದು ಪಠಾಕಿಗಳು ಕಡ್ಡಾಯವಾಗಿ ಶಬ್ದ ಮಾಡದೇ ದೀಪಗಳು ನರ್ತಿಸುವುದರಿಂದ, ಮನೆಯಲ್ಲಿ, ಕಾರಲ್ಲಿ, ಸ್ಕೂಟರಲ್ಲಿ ಸದಾ ಕೈಗೆ ಸಿಗುವಂತೆ ಕೈಚೀಲ ಇಟ್ಟಿರುವುದರಿಂದ ಸುಧಾರಿಸಬಹುದಾಗಿದೆ. ನಾವು ಇದನ್ನು ಪ್ರಜ್ಞಾಪೂರ್ವಕವಾಗಿ ರೂಢಿ ಮಾಡಿಕೊಳ್ಳಬೇಕು. ನಮಗೆ ಇದೇ ಅಭ್ಯಾಸವಾಗಬೇಕು.
17. ಕೃಷಿಯಲ್ಲಿ ಬಳಸುವ ರಾಸಾಯನಿಕ ಕೀಟನಾಶಕಗಳು, ರಾಸಾಯನಿಕ ಗೊಬ್ಬರ ಇವೆಲ್ಲಾ ಅಂತರ್ಜಲವನ್ನು ಕಲುಷಿತಗೊಳಿಸುತ್ತವೆ. ಅಂತರ್ಜಲವನ್ನು ಬಳಸುವ ಕೋಲಾ ಕಂಪನಿಗಳು ಪೂರ್ಣವಾಗಿ ನೀರನ್ನು ಶುದ್ದಿ ಮಾಡದೆ ಇದ್ದ ಕಾರಣ, ಕೀಟನಾಶಕ ತಂಪು ಪಾನೀಯದಲ್ಲಿ ಉಳಿಯಿತು ಎಂಬುದಾಗಿ ಕೋಲಾದಲ್ಲಿ ಕೀಟನಾಶಕ ಮಿಶ್ರಣದ ಬಗ್ಗೆ ಸಿ ಎಸ್ ಇ ವರದಿಯಲ್ಲಿ ತಿಳಿಸಿದೆ.

**ಲೇಖಕಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

18. ಶ್ರೀಮತಿ ನೇಮಿಚಂದ್ರರವರ ಜನನ 1959 ರಲ್ಲಿ ಚಿತ್ರದುರ್ಗದಲ್ಲಿ ಆಯಿತು. ಇವರು ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ಒಂದು ಕನಸಿನ ಪಯಣ, ಬದುಕು ಬದಲಿಸಬಹುದು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

19. ಪ್ರಸ್ತುತ ವಾಕ್ಯವನ್ನು ಶ್ರೀಮತಿ ನೇಮಿಚಂದ್ರರವರು ಬರೆದಿರುವ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಏನಾದರೂ ಮಾಡಿ, ದೂರಬೇಡಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರು ನೆಂಟರ ಹುಡುಗನಿಗೆ ಹೇಳುದುದಾಗಿದೆ. ಲೇಖಕಿಯವರ ಮನೆಗೆ ನೆಂಟರ ಹುಡುಗ ಬಂದಿದ್ದ. ಆತ ಬೆಂಗಳೂರಿನ ಎಂ ಜಿ ರಸ್ತೆ ಪೂರಾ ಸುತ್ತಿ ಬಂದು, ಅಕ್ಕ ಬರೀ ವಿದೇಶಿ ಅಂಗಡಿ ಸಾಮಾನು, ವಿದೇಶಿ ಸಂಸ್ಕೃತಿ ಶೋಕಿ, ನಮ್ಮ ದೇಶ ಹಾಳಾಗಿ ಹೋಗ್ತಾಯಿದೆ ಎಂದು ಹೇಳುವಾಗ ಈ ಮೇಲಿನ ವಾಕ್ಯ ಬಂದಿದೆ.

20. ಪ್ರಸ್ತುತ ವಾಕ್ಯವನ್ನು ಶ್ರೀಮತಿ ನೇಮಿಚಂದ್ರರವರು ಬರೆದಿರುವ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಏನಾದರೂ ಮಾಡಿ, ದೂರಬೇಡಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರು, ಪು ತಿ ನ ರವರು ಹೇಳಿದ ಮಾತನ್ನು ನೆನಪಿಸಿಕೊಂಡದ್ದಾಗಿದೆ. ಲೇಖಕಿಯವರು ಕಾಲೇಜು ದಿನಗಳಲ್ಲಿ ಕನ್ನಡ ಸಂಘದ ಕಾರ್ಯಕ್ರಮಕ್ಕೆ ಪು ತಿ ನ ಅವರನ್ನು ಅಹ್ವಾನಿಸಿದ್ದರು. ಅವರು ತಮ್ಮ ಭಾಷಣದ ಮಧ್ಯೆ ಯಾವುದೋ ವಿಷಯವನ್ನು ಉಲ್ಲೇಖಿಸಿ, ಅವರು ಹೇಳಿದ ಮಾತು ಸುಮ್ಮನೆ ದೂರಬೇಡಿ, ಏನಾದರೂ ಮಾಡಿ ಎಂದು ತಮ್ಮ ಭಾಷಣದಲ್ಲಿ ಹೇಳುವಾಗ ಈ ಮೇಲಿನ ವಾಕ್ಯ ಬಂದಿದೆ.

21. ಪ್ರಸ್ತುತ ವಾಕ್ಯವನ್ನು ಶ್ರೀಮತಿ ನೇಮಿಚಂದ್ರರವರು ಬರೆದಿರುವ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಏನಾದರೂ ಮಾಡಿ, ದೂರಬೇಡಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರು ಗೆಳತಿಯಲ್ಲಿ ಹೇಳಿದುದಾಗಿದೆ. ಲೇಖಕಿಯವರು ಕೃಷಿಯಲ್ಲಿ ಬಳಸುವ ರಾಸಾಯನಿಕ ಕೀಟನಾಶಕಗಳು, ರಾಸಾಯನಿಕ ಗೊಬ್ಬರ ಇವೆಲ್ಲಾ ಅಂತರ್ಜಲವನ್ನು ಕಲುಷಿತಗೊಳಿಸುತ್ತವೆ. ಅಂತರ್ಜಲವನ್ನು ಬಳಸುವ ಕೋಲಾ ಕಂಪನಿಗಳು ಪೂರ್ಣವಾಗಿ ನೀರನ್ನು ಶುದ್ದಿ ಮಾಡದೆ ಇದ್ದ ಕಾರಣ, ಕೀಟನಾಶಕ ತಂಪು ಪಾನೀಯದಲ್ಲಿ ಉಳಿಯಿತು ಎಂದು ಹೇಳುವಾಗ ಈ ಮೇಲಿನ ವಾಕ್ಯ ಬಂದಿದೆ.

22. ಪ್ರಸ್ತುತ ವಾಕ್ಯವನ್ನು ಶ್ರೀಮತಿ ನೇಮಿಚಂದ್ರರವರು ಬರೆದಿರುವ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಏನಾದರೂ ಮಾಡಿ, ದೂರಬೇಡಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕಿಯವರಿಗೆ ವಿದೇಶಿ ಯಾತ್ರೆಯ ಸಮಯದಲ್ಲಿ ಅನಿವಾಸಿ ಭಾರತೀಯ ಹೇಳಿದುದಾಗಿದೆ. ಲೇಖಕಿಯವರು ವಿದೇಶಿ ಯಾತ್ರೆ ಕೈಗೊಂಡಾಗ ಅನಿವಾಸಿ ಭಾರತೀಯರ ಮನೆಯಲ್ಲಿ ಉಳಿದುಕೊಳ್ಳುವ ಸಂದರ್ಭ ಬರುತ್ತಿತ್ತು. ಕೆಲವು ಅನಿವಾಸಿ ಭಾರತೀಯರು

ಭಾರತದಲ್ಲಿ ಸ್ವಚ್ಚತೆಯಿಲ್ಲ, ವ್ಯವಸ್ಥೆ ಸರಿಯಿಲ್ಲ, ಅದಿಲ್ಲ-ಇದಿಲ್ಲ, ಇಲ್ಲಿ ನೋಡಿ ಎಷ್ಟು ಚೆನ್ನಾಗಿದೆ? ಎಂದೆಲ್ಲ ಭಾರತವನ್ನು ದೂರುವಾಗ ಈ ಮೇಲಿನ ವಾಕ್ಯ ಬಂದಿದೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

23. ಲೇಖಕಿಯವರ ಮನೆಗೆ ನೆಂಟರ ಹುಡುಗ ಬಂದಿದ್ದ. ಆತ ಬೆಂಗಳೂರಿನ ಎಂ ಜಿ ರಸ್ತೆ ಪೂರಾ ಸುತ್ತಿ ಬಂದು, ಅಕ್ಕ ಬರೀ ವಿದೇಶಿ ಅಂಗಡಿ ಸಾಮಾನು, ವಿದೇಶಿ ಸಂಸ್ಕೃತಿ ಶೋಕಿ, ನಮ್ಮ ದೇಶ ಹಾಳಾಗಿ ಹೋಗ್ತಾಯಿದೆ ಎಂದನು. ಆಗ ಲೇಖಕಿಯವರು ನೀನು ಬಳಸುವ ಸೋಪು, ಟೂತ್ ಪೇಸ್ಟ್, ಚಪ್ಪಲಿ, ಕೋಲಾ, ಮೊಬೈಲ್, ಕಂಪ್ಯೂಟರ್, ಫ್ರಿಜ್ಜು, ಕಾರು, ಸ್ಕೂಟರ್ ಎಲ್ಲವೂ ವಿದೇಶಿಯ ಕಂಪನಿಗಳದ್ದು, ನಾನು, ನೀನು ಕೊಳ್ಳದೆಯೇ ವಿದೇಶಿ ಕಂಪನಿ ಇಲ್ಲಿ ತಳವೂರಿವೆಯೇ? ಎಂದು ಲೇಖಕಿ ಪ್ರಶ್ನಿಸುತ್ತಾರೆ. "ಎಂ ಜಿ ರಸ್ತೆ ಬದಲಾಯಿಸುವ ಮೊದಲು ನಾವು ನಮ್ಮ ಮನೆಯಲ್ಲಿ ಒಂದಿಷ್ಟು ಸುಧಾರಣೆ ತರಬೇಕು" ಎನ್ನುತ್ತಾರೆ. "ಅಂಗಡಿಗೆ ಹೋದಾಗಲೆಲ್ಲ ಸ್ವದೇಶಿ ಕಂಪನಿಯ ವಸ್ತುಗಳನ್ನು ಹುಡುಕುತ್ತಾರೆ. ಸ್ವದೇಶಿ ವಸ್ತುಗಳನ್ನು ಮಾರದೆ ಇರುವ ಅಂಗಡಿಯವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇದರಿಂದ ಬದಲಾವಣೆಯ ಕ್ರಾಂತಿ ಆಗಬಹುದು. ಇಲ್ಲದೆ ಇರಬಹುದು" ಎಂಬುದು ವಿದೇಶಿ ಸಾಮಾನು, ವಿದೇಶಿ ಸಂಸ್ಕೃತಿಯ ಕುರಿತು ಲೇಖಕಿಯ ಅಭಿಪ್ರಾಯವಾಗಿದೆ.
24. 'ಏನಾದರು ಮಾಡಿ, ದೂರಬೇಡೆ' ಲೇಖನದಲ್ಲಿರುವ ಪ್ರಮುಖ ಅಂಶಗಳೆಂದರೆ ವಿದೇಶಿ ಅಂಗಡಿ ಸಾಮಾನು ಹಾಗೂ ವಿದೇಶಿ ಸಂಸ್ಕೃತಿಯ ಶೋಕಿ ಬೆಂಗಳೂರಿನ ಪ್ರತಿ ಅಂಗಡಿಯಲ್ಲಿಯು ವಿದೇಶಿ ವಸ್ತುಗಳು ಜಾಸ್ತಿ ಇರುತ್ತವೆ. ಸ್ವದೇಶಿ ವಸ್ತುಗಳು ಇದ್ದರೂ ಬಳಕೆ ಕಡಿಮೆ. ಜನರು ವಿದೇಶಿ ವಸ್ತುಗಳಿಗೆ ಮನಸೋಲುವುದು ಹೆಚ್ಚು. ಸ್ವದೇಶಿಯ ವಸ್ತುಗಳ ಬಳಕೆ ಹೆಚ್ಚು ಮಾಡಬೇಕು ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ. ಪರಿಸರ ಕಾಳಜಿಯ ಬಗ್ಗೆ ತಿಳಿಸುತ್ತಾ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಪ್ಲಾಸ್ಟಿಕ್ ಚೀಲ ಬಳಸದೆ ಮನೆಯಿಂದಲೇ ಪ್ರಜ್ಞಾಪೂರ್ವಕವಾಗಿ ಕೈಚೀಲ ಬಳಸುವುದರಿಂದ, ದೀಪಾವಳಿ ದಿನದಂದು ಪಠಾಕಿಗಳು ಕಡ್ಡಾಯವಾಗಿ ಶಬ್ದ ಮಾಡದೇ ದೀಪಗಳು ನರ್ತಿಸುವುದರಿಂದ, ಮನೆಯಲ್ಲಿ, ಕಾರಲ್ಲಿ, ಸ್ಕೂಟರಲ್ಲಿ ಸದಾ ಕೈಗೆ ಸಿಗುವಂತೆ ಕೈಚೀಲ ಇಟ್ಟಿರುವುದರಿಂದ ಸುಧಾರಿಸಬಹುದಾಗಿದೆ. ನಾವು ಇದನ್ನು ಪ್ರಜ್ಞಾಪೂರ್ವಕವಾಗಿ ರೂಢಿ ಮಾಡಿಕೊಳ್ಳಬೇಕು. ನಮಗೆ ಇದೇ ಅಭ್ಯಾಸವಾಗಬೇಕು. ಹಾಗೆಯೇ ವಿದೇಶಿ ಕಂಪನಿಗಳು ತಯಾರಿಸಿದ ಕೋಲಾ ಹಾಗೂ ಇತರ ಪಾನೀಯಗಳಲ್ಲಿ ಕೀಟನಾಶಕ ಬಳಕೆ ಬಗ್ಗೆ ತಿಳಿಸಲಾಗಿದೆ. ಮನೆಯಲ್ಲಿನ ಕಸವನ್ನೆಲ್ಲ ಒಂದು ಗುಂಡಿಗೆ ಹಾಕಿ, ಕೊಳೆತ ಮೇಲೆ ಆದ ಸಾವಯವ ಗೊಬ್ಬರವನ್ನು

ಬಳಸಬೇಕು ಎಂಬುದನ್ನೂ ಸಹ ತಿಳಿಸಲಾಗಿದೆ. ಭಾರತದ ಬಗ್ಗೆ ಅನಿವಾಸಿ ಭಾರತೀಯರ ಅಭಿಪ್ರಾಯವನ್ನು ತಿಳಿಸಲಾಗಿದೆ.

**ಪತ್ರ ಬರೆಯುವುದು;**

25. ವೈಯಕ್ತಿಕ ಪತ್ರ

ಇಂದ ವಿಳಾಸ, ದಿನಾಂಕ, ಸಂಬೋದನೆಗೆ 01 ಅಂಕ
ಪತ್ರದ ಒಡಲು/ವಿಷಯ ನಿರೂಪಣೆಗೆ 02 ಅಂಕಗಳು
ಮುಕ್ತಾಯ, ಗೆ ವಿಳಾಸಕ್ಕೆ 01 ಅಂಕ
ಭಾಷಾಶೈಲಿ, ವಿನ್ಯಾಸಕ್ಕೆ 01 ಅಂಕ
ಒಟ್ಟು 05 ಅಂಕಗಳು

ವ್ಯಾವಹಾರಿಕಪತ್ರ/ಮನವಿ ಪತ್ರ

ಇಂದ ವಿಳಾಸ, ಗೆ ವಿಳಾಸ, ಸಂಬೋದನೆಗೆ 01 ಅಂಕ
ಪತ್ರದ ಒಡಲು/ವಿಷಯ ನಿರೂಪಣೆಗೆ 02 ಅಂಕಗಳು
ಮುಕ್ತಾಯ, ಸ್ಥಳ, ದಿನಾಂಕಕ್ಕೆ 01 ಅಂಕ
ಭಾಷಾಶೈಲಿ, ವಿನ್ಯಾಸಕ್ಕೆ 01 ಅಂಕ
ಒಟ್ಟು 05 ಅಂಕಗಳು

## 6. ಪರಿವರ್ತನೆ

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ತಿಳುವಳಿಕೆ
2. (ಬಿ) ದುರ್ಮಾರ್ಗ
3. (ಡಿ) ಗುಣ
4. (ಎ) ಪ್ರಥಮ
5. (ಸಿ) ಅವಳು
6. (ಎ) ರಾಮ

**ಒಂದು ಅಂಕದ ಪ್ರಶ್ನೆಗಳು;**

7. ಮನಸ್ಸಿಗೆ ಹಿತಕರವಾದ, ಆನಂದದಾಯಕವಾದ ಮಾತುಗಳು ಕಿವಿಗೆ ಬಿದ್ದರೆ ದುಷ್ಟನ ಮನಸ್ಸು ಪರಿವರ್ತನೆಯಾಗುತ್ತದೆ.

8. ಜಿ ಎಸ್ ಬಸವರಾಜಶಾಸ್ತ್ರಿಯವರ ತಾತನ ಹೆಸರು ಗಣೇಕಲ್ ಶಿವಯ್ಯ.
9. ಗಣೇಕಲ್ ಶಿವಯ್ಯನವರು ಬಯಲಾಟದ ನಿರ್ದೇಶನಕ್ಕೆ, ಪಿಟೀಲು ವಾದನಕ್ಕೆ ಪ್ರಸಿದ್ಧರಾಗಿದ್ದರು.
10. ಗಣೇಕಲ್ ಶಿವಯ್ಯನವರು ಅರ್ಧ ತಾಸು ತಮ್ಮ ಸಂಗೀತವನ್ನು ಕೇಳಿದರೆ ಹಣ ಕೊಡುವುದಾಗಿ ಹೇಳಿದರು. ಅದಕ್ಕೆ ಕಳ್ಳರು ಸಂಗೀತ ಕೇಳಲು ಒಪ್ಪಿಕೊಂಡರು.
11. ಕಳ್ಳರ ಮನಸ್ಸನು ಪರಿವರ್ತಿಸಿ, ಸನ್ಮಾರ್ಗಕ್ಕೆ ತಂದವರು ಗಣೇಕಲ್ ಶಿವಯ್ಯನವರು.
12. ರಾಯಚೂರಿನ ತಾರಾನಾಥರವರ ಪ್ರಕಾರ ಬಡವರ ಉದ್ಧಾರವಾಗಬೇಕಾದರೆ ಮೊದಲು ಅವರ ಮಕ್ಕಳು ವಿದ್ಯಾವಂತರಾಗಬೇಕು.
13. ತಾರಾನಾಥರು ಬಡವರ ಮಕ್ಕಳು ವಿದ್ಯಾವಂತರಾಗಿ, ನೌಕರಿ ಹಿಡಿದು, ಸುಖ ಜೀವನ ನಡೆಸುವಂತಾಗಬೇಕೆಂದು ಆಶಯದೊಂದಿಗೆ ಆಶ್ರಮ ಕಟ್ಟಿದರು.
14. ತಾರಾನಾಥರ ವಾಚನ್ನು ಕದ್ದವನು ಆಶ್ರಮದ ಬಾಲಕ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

15. ಗಣೇಕಲ್ ಶಿವಯ್ಯನವರು ಕಳ್ಳರನ್ನು 'ಅಯ್ಯಾ ನಿಮಗೆ ಹಣ ಬೇಕು, ಅದು ನನ್ನಲ್ಲಿದೆ. ಅದನ್ನು ನಿಮಗೆ ಕೊಡುತ್ತೇನೆ. ಯಾವ ತಕರಾರೂ ಇಲ್ಲ. ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕು ಎಂದರು. ಅದೇನು ಕಷ್ಟಕರವಾದುದ್ದಲ್ಲ, ಕಿವಿಗಳಿಗೆ ಸುಖಕರವಾದುದು. ನೀವು ನಿಶ್ಚಿಂತೆಯಿಂದ ಕುಳಿತು ಅರ್ಧ ತಾಸು ತನ್ನ ಸಂಗೀತವನ್ನು ಕೇಳಬೇಕು' ಎಂದು ಕೇಳಿಕೊಂಡರು.
16. ಗಣೇಕಲ್ ಶಿವಯ್ಯನವರು ಮರದ ಕೆಳಗೆ ಕುಳಿತುಕೊಂಡು ಕಳ್ಳರ ಮುಂದೆ ಮಧುರವಾದ ಕಂಠದಿಂದ ಹಾಡತೊಡಗಿದರು. ಆ ಹಾಡು ಹಳ್ಳದಲ್ಲಿ ನೀರು ಜುಳುಜುಳು ಎಂದು ನಿಧಾನವಾಗಿ ಹರಿಯುವ ರೀತಿಯಲ್ಲಿತ್ತು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿ ಬಂದು ಅವನ ಹಾಡು ಕೇಳುತ್ತಾ, ಮೈ ಮರೆತು ನಿಂತಂತೆ ಗಣೇಕಲ್ ಶಿವಯ್ಯನವರ ಸಂಗೀತವಿತ್ತು.
17. ಗಣೇಕಲ್ ಶಿವಯ್ಯನವರ ಸಂಗೀತವನ್ನು ಮೈಮರೆತು ಕೇಳಿದ ನಂತರ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ಶಿವಯ್ಯನವರ ಮುಂದೆ ಇಟ್ಟು, ಅವರ ಪಾದಕ್ಕೆ ಎರಗಿ 'ತಾತ ನಿಮ್ಮ ಹಣ ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು' ಎಂದು ಹೇಳಿ ಹೊರಡ ತೊಡಗಿದರು.
18. ಗಣೇಕಲ್ ಶಿವಯ್ಯನವರು ಕೊನೆಯಲ್ಲಿ ಕಳ್ಳರು ಹೋಗುವುದನ್ನು ತಡೆದು "ಅಯ್ಯಾ ಅಯ್ಯಾ ದಯಾಳುಗಳೇ, ನಿಮ್ಮ ಹಣವು ನನಗೆ ಬೇಕಿಲ್ಲ. ನಿಮ್ಮ ಹಣದ ಜೊತೆಗೆ ನನ್ನ ಹಣವನ್ನೂ ಕೊಡುತ್ತೇನೆ, ಅದರಿಂದ ನಾಲ್ವರೂ ಸೇರಿ ವ್ಯಾಪಾರ ಮಾಡುತ್ತಾ ಜೀವನ ನಡೆಸಿ ಕಳ್ಳತನ ಬಿಟ್ಟು, ಸತ್ಯವಂತರಾಗಿ ಬಾಳಿ" ಎಂದು ಹೇಳಿ ಆಶೀರ್ವದಿಸಿದರು.
19. ತಾರಾನಾಥರು ಮಹಾಜ್ಞಾನಿಗಳೂ, ದಯಾಳುಗಳೂ, ಧೈರ್ಯವಂತರೂ, ಪರೋಪಕಾರಿಗಳೂ, ಪರರ ಹಿತೈಷಿಗಳೂ, ಆತ್ಮವಿಶ್ವಾಸಿಗಳೂ ಆಗಿದ್ದರು. ಅವರಿಗೆ ಅಸಾಧ್ಯವಾದ ಕೆಲಸವೇ ಇಲ್ಲ. ಅದು

ಎಂತಹದೇ ಇರಲಿ, ಸಾಧಿಸುವ ಶಕ್ತಿ ಅವರಲ್ಲಿ ಇತ್ತು. ಒಟ್ಟಿನಲ್ಲಿ ಅವರು ಎಲ್ಲರಿಗೂ ಅಂದರೆ ನಮ್ಮ ದೇಶದವರಿಗೂ, ಅಲ್ಲದೇ ವಿದೇಶಿಯರಿಗೂ ಬೇಕಾಗಿದ್ದರು.

20. ತಾರಾನಾಥರಿಗೆ ಬಾಲಕನ ಮೇಲೆ ಕರುಣೆಯು ಉಕ್ಕಿ ಬಂದು, ಅವನನ್ನು ಪೊಲೀಸರ ವಶಕ್ಕೆ ಕೊಡಬಾರದೆಂದು ನಿರ್ಧರಿಸಿದರು. ಪೊಲೀಸರು ಬಂದಾಗ "ಅವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ ವಾಚನ್ನು ರಿಪೇರಿ ಮಾಡಿಸಲು ನಾನೇ ಅವನ ಕೈಲಿ ಕೊಟ್ಟು ಕಳಿಸಿದ್ದೆ. ನನ್ನ ಸಹೋದರ ಮತ್ತು ಆ ವ್ಯಾಪರಿ ಇಬ್ಬರೂ ಸುಳ್ಳರೇ. ಅವರ ಮಾತನ್ನು ನಂಬಬೇಡಿ" ಎಂದು ಹೇಳಿ ಬಾಲಕನು ಶಿಕ್ಷೆ ಅನುಭವಿಸುವುದನ್ನು ತಪ್ಪಿಸಿದರು.
21. ರಾಯಚೂರಿನ ತಾರಾನಾಥರವರ ಪ್ರಕಾರ ಬಡವರ ಉದ್ಧಾರವಾಗಬೇಕಾದರೆ ಮೊದಲು ಅವರ ಮಕ್ಕಳು ವಿದ್ಯಾವಂತರಾಗಬೇಕು. ವಿದ್ಯಾವಂತರಾಗಿ, ನೌಕರಿ ಹಿಡಿದು, ಸುಖ ಜೀವನ ನಡೆಸುವಂತಾಗಬೇಕೆಂದು ಆಶಯದೊಂದಿಗೆ ಆಶ್ರಮ ಕಟ್ಟಿದರು. ಆ ಆಶ್ರಮಕ್ಕೆ ಸೇರಿದ ಬಡವ ಬಾಲಕ ವಾಚನ್ನು ಕದ್ದು, ಶಿಕ್ಷೆಗೆ ಗುರಿಯಾಗಿರುತ್ತಾನೆ. ಅದನ್ನು ತಪ್ಪಿಸಿದ ತಾರಾನಾಥರು ಮಗು ತಪ್ಪು ಮಾಡುವುದು ಸಹಜ. ಈಗ ನಿನಗೆ ಅದರ ಅರಿವಾಗಿದೆ. ಚೆನ್ನಾಗಿ ಓದಿ, ಚೆನ್ನಾಗಿ ಬದುಕು. ಅದೇ ನಿನಗೆ ಸಂತಸ ತರುತ್ತದೆ ಎಂದು ಹೇಳಿ ತಮ್ಮ ವಾಚನ್ನು ನೀಡಿ ಕ್ಷಮಿಸಿದರು.

**ಸಾಹಿತಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ
ಕೃತಿ, ಬಿರುದು/ಪ್ರಶಸ್ತಿ 01 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ
ಒಟ್ಟು 03 ಅಂಕಗಳು

22. ಜಿ ಎಸ್ ಬಸವರಾಜಶಾಸ್ತ್ರಿರವರು 1936ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗತಾಲ್ಲೂಕಿನ ಬೇಡರ ಗಣೇಕಲ್ ಗ್ರಾಮದಲ್ಲಿ ಜನಿಸಿದರು. ಇವರು ನಾಮಾವಳಿ, ಕರುಣಾಮಯಿ, ರೇಣುಕ ಚರಿತೆ, ತ್ರಿವೇಣಿ ಸಂಗಮ ಶಾಸ್ತ್ರಿ, ಕನಸು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಹವೌ ಸಂಘ ಸಂಸ್ಥೆಗಳು ಗೌರವ ಹಾಗೂ ಸನ್ಮಾನಗಳನ್ನು ನೀಡಿವೆ. ಅವರ ಅಭಿಮಾನಿಗಳು ಶಾಸ್ತ್ರಿ ಸಂಪದ ಎನ್ನುವ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ
ಸಂದರ್ಭದ ವಿವರಣೆ 01 ಅಂಕ
ಸ್ವಾರಸ್ಯಕ್ಕೆ 01 ಅಂಕ
ಒಟ್ಟು 03 ಅಂಕಗಳು

23. ಪ್ರಸ್ತುತ ವಾಕ್ಯವನ್ನು ಜಿ ಎಸ್ ಬಸವರಾಜಶಾಸ್ತ್ರಿರವರು ಬರೆದಿರುವ 'ಶಾಸ್ತ್ರಿ ಕನಸು' ಕೃತಿಯಿಂದ ಆಯ್ದ 'ಪರಿವರ್ತನೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಗಣೇಕಲ್ ಶಿವಯ್ಯನವರು ಕಳ್ಳರಿಗೆ ಹೇಳಿದರು. ಬಯಲಾಟವನ್ನು ಮುಗಿಸಿಕೊಂಡು ಶಿವಯ್ಯನವರು ಊರಿಗೆ ಹಿಂತಿರುಗುವಾಗ ಕಳ್ಳರು ಅವರನ್ನು ಅಡ್ಡಗಟ್ಟಿ ದೋಚಲು ಮುಂದಾದರು. ಅದಕ್ಕೆ ಶಿವಯ್ಯನವರು ನಿಮಗೆ ಬೇಕಾದ ಹಣ ನನ್ನ ಬಳಿಯಿದೆ. ಅದನ್ನು ನಿಮಗೆ ಕೊಡುತ್ತೇನೆ ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕೆಂದು ಹೇಳಿದರು. ಆಸೆ ಏನೆಂದು ಕಳ್ಳರು ಕೇಳಿದಾಗ ಈ ಮಾತು ಬಂದಿದೆ.

24. ಪ್ರಸ್ತುತ ವಾಕ್ಯವನ್ನು ಜಿ ಎಸ್ ಬಸವರಾಜಶಾಸ್ತ್ರಿರವರು ಬರೆದಿರುವ 'ಶಾಸ್ತ್ರಿ ಕನಸು' ಕೃತಿಯಿಂದ ಆಯ್ದ 'ಪರಿವರ್ತನೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಗಣೇಕಲ್ ಶಿವಯ್ಯನವರಿಗೆ ಕಳ್ಳರು ಹೇಳಿದರು. ಗಣೇಕಲ್ ಶಿವಯ್ಯನವರು ಮರದ ಕೆಳಗೆ ಕುಳಿತುಕೊಂಡು ಕಳ್ಳರ ಮುಂದೆ ಮಧುರವಾದ ಕಂಠದಿಂದ ಹಾಡತೊಡಗಿದರು. ಆ ಹಾಡು ಹಳ್ಳದಲ್ಲಿ ನೀರು ಜುಳುಜುಳು ಎಂದು ನಿಧಾನವಾಗಿ ಹರಿಯುವ ರೀತಿಯಲ್ಲಿತ್ತು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿ ಬಂದು ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಗಣೇಕಲ್ ಶಿವಯ್ಯನವರ ಸಂಗೀತವಿತ್ತು. ಸಂಗೀತವನ್ನು ಮೈಮರೆತು ಕೇಳಿದ ನಂತರ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ಶಿವಯ್ಯನವರ ಮುಂದೆ ಇಟ್ಟು ಅವರ ಪಾದಕ್ಕೆ ಎರಗಿ ಈ ಮೇಲಿನಂತೆ ಹೇಳಿದರು.

25. ಪ್ರಸ್ತುತ ವಾಕ್ಯವನ್ನು ಜಿ ಎಸ್ ಬಸವರಾಜಶಾಸ್ತ್ರಿರವರು ಬರೆದಿರುವ 'ಶಾಸ್ತ್ರಿ ಕನಸು' ಕೃತಿಯಿಂದ ಆಯ್ದ 'ಪರಿವರ್ತನೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಗಣೇಕಲ್ ಶಿವಯ್ಯನವರು ಕಳ್ಳರಿಗೆ ಹೇಳಿದರು. ಗಣೇಕಲ್ ಶಿವಯ್ಯನವರ ಮಧುರವಾದ ಹಾಡನ್ನು ಕೇಳಿ ಪರಿವರ್ತನೆಗೊಂಡ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ಶಿವಯ್ಯನವರ ಮುಂದೆ ಇಟ್ಟು, ಅವರ ಪಾದಕ್ಕೆ ಎರಗಿ 'ತಾತ ನಿಮ್ಮ ಹಣ ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು' ಎಂದು ಹೇಳಿ ಹೊರಟರು. ಆಗ ಶಿವಯ್ಯನವರು ನಿಮ್ಮ ಹಣವು ನನಗೆ ಬೇಕಿಲ್ಲ. ನಿಮ್ಮ ಹಣದ ಜೊತೆಗೆ ನನ್ನ ಹಣವನ್ನೂ ಕೊಡುತ್ತೇನೆ, ಅದರಿಂದ ನಾಲ್ವರೂ ಸೇರಿ ವ್ಯಾಪಾರ ಮಾಡುತ್ತಾ ಜೀವನ ನಡೆಸಿ, ಕಳ್ಳತನ ಬಿಟ್ಟು ಸತ್ಯವಂತರಾಗಿ ಬಾಳಿ" ಎಂದು ಹೇಳುವ ಸಂದರ್ಭ ಇದಾಗಿದೆ.

26. ಪ್ರಸ್ತುತ ವಾಕ್ಯವನ್ನು ಜಿ ಎಸ್ ಬಸವರಾಜಶಾಸ್ತ್ರಿರವರು ಬರೆದಿರುವ 'ಶಾಸ್ತ್ರಿ ಕನಸು' ಕೃತಿಯಿಂದ ಆಯ್ದ 'ಪರಿವರ್ತನೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ತಾರಾನಾಥರವರು ಪೊಲೀಸರಿಗೆ ಹೇಳಿದರು. ತಾರಾನಾಥರ ಆಶ್ರಮದ ಬಾಲಕನೊಬ್ಬನು ಅವರ ವಾಚನ್ನು ಕದ್ದು ವ್ಯಾಪಾರಿಯೊಬ್ಬರಿಗೆ ಮಾರಿರುತ್ತಾನೆ. ಅವನನ್ನು ಬಂಧಿಸಲು ಪೊಲೀಸರು ಆಶ್ರಮಕ್ಕೆ ಬಂದಾಗ, ತಾರಾನಾಥರು ಅವನಿಗೆ ಶಿಕ್ಷೆಯಾಗುವುದನ್ನು

ತಡೆಯುವುದಕ್ಕಾಗಿ ನಾನೇ ಅವನಿಗೆ ವಾಚನ್ನು ರಿಪೇರಿ ಮಾಡಿಸಲು ಕೊಟ್ಟಿದ್ದೆ ಎಂದು ಹೇಳುವ ಸಂದರ್ಭ ಇದಾಗಿದೆ.

27. ಪ್ರಸ್ತುತ ವಾಕ್ಯವನ್ನು ಜಿ ಎಸ್ ಬಸವರಾಜಶಾಸ್ತ್ರಿರವರು ಬರೆದಿರುವ 'ಶಾಸ್ತ್ರಿ ಕನಸು' ಕೃತಿಯಿಂದ ಆಯ್ದ 'ಪರಿವರ್ತನೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಆಶ್ರಮದ ಬಾಲಕ ತಾರಾನಾಥರಿಗೆ ಹೇಳಿದನು. ಪೋಲೀಸರು ವಾಚನ್ನು ಕದ್ದಿದ್ದ ಬಾಲಕನನ್ನು ಬಂಧಿಸಲು ಬಂದಿದ್ದಾಗ, ಅವರನ್ನು ತಡೆದು ಇವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಆ ವಾಚನ್ನು ನಾನೇ ರಿಪೇರಿಗೆಂದು ಇವನ ಕೈಯಲ್ಲಿ ನೀಡಿದ್ದೇನೆಂದು ಹೇಳಿ ಬಾಲಕನನ್ನು ಶಿಕ್ಷೆಯಿಂದ ತಪ್ಪಿಸುತ್ತಾರೆ. ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಪಗೊಂಡ ಬಾಲಕ ತಾರಾನಾಥರ ಪಾದಕ್ಕೆರಗಿ ಅಳುತ್ತಾ ಈ ಮೇಲಿನ ಮಾತನ್ನು ಹೇಳುವ ಸಂದರ್ಭ ಇದಾಗಿದೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

28. ಬಯಲಾಟವನ್ನು ಮುಗಿಸಿಕೊಂಡು ಶಿವಯ್ಯನವರು ಊರಿಗೆ ಹಿಂತಿರುಗುವಾಗ ಕಳ್ಳರು ಅವರನ್ನು ಅಡ್ಡಗಟ್ಟಿ ದೋಚಲು ಮುಂದಾದರು. ಅದಕ್ಕೆ ಶಿವಯ್ಯನವರು ನಿಮಗೆ ಬೇಕಾದ ಹಣ ನನ್ನ ಬಳಿಯಿದೆ. ಅದನ್ನು ನಿಮಗೆ ಕೊಡುತ್ತೇನೆ, ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕೆಂದು ಹೇಳಿದರು. ಆಸೆ ಏನೆಂದು ಕಳ್ಳರು ಕೇಳಿದರು. ಶಿವಯ್ಯನವರು ಅರ್ಧ ತಾಸು ತನ್ನ ಸಂಗೀತವನ್ನು ಕೇಳಬೇಕೆಂದು ಹೇಳಿದಾಗ ಅದಕ್ಕೆ ಕಳ್ಳರು ಸಿದ್ದರಾಗುತ್ತಾರೆ. ಶಿವಯ್ಯನವರು ಮರದ ಕೆಳಗೆ ಕುಳಿತುಕೊಂಡು ಕಳ್ಳರ ಮುಂದೆ ಮಧುರವಾದ ಕಂಠದಿಂದ ಹಾಡತೊಡಗಿದರು. ಆ ಹಾಡು ಹಳ್ಳದಲ್ಲಿ ನೀರು ಜುಳುಜುಳು ಎಂದು ನಿಧಾನವಾಗಿ ಹರಿಯುವ ರೀತಿಯಲ್ಲಿತ್ತು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿ ಬಂದು, ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಕಣೇಕಲ್ ಶಿವಯ್ಯನವರ ಸಂಗೀತವಿತ್ತು. ಸಂಗೀತವನ್ನು ಮೈಮರೆತು ಕೇಳಿದ ನಂತರ ಮಧುರವಾದ ಹಾಡನ್ನು ಕೇಳಿ ಪರಿವರ್ತನೆಗೊಂಡ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ಶಿವಯ್ಯನವರ ಮುಂದೆ ಇಟ್ಟು ಅವರ ಪಾದಕ್ಕೆ ಎರಗಿ 'ತಾತ ನಿಮ್ಮ ಹಣ ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು' ಎಂದು ಹೇಳಿ ಹೊರಟರು. ಆಗ ಶಿವಯ್ಯನವರು ನಿಮ್ಮ ಹಣವು ನನಗೆ ಬೇಕಿಲ್ಲ. ನಿಮ್ಮ ಹಣದ ಜೊತೆಗೆ ನನ್ನ ಹಣವನ್ನೂ ಕೊಡುತ್ತೇನೆ, ಅದರಿಂದ ನಾಲ್ವರೂ ಸೇರಿ ವ್ಯಾಪಾರ ಮಾಡುತ್ತಾ, ಜೀವನ ನಡೆಸಿ ಕಳ್ಳತನ ಬಿಟ್ಟು ಸತ್ಯವಂತರಾಗಿ ಬಾಳಿ" ಎಂದರು. ಹೀಗೆ

ಗಣೇಕಲ್ ಶಿವಯ್ಯನವರು ಮನಸ್ಸಿಗೆ ಹಿತವಾದ, ಆನಂದದಾಯಕವಾದ ಮಾತುಗಳಿಂದ ಕಳ್ಳರ ಮನಸ್ಸನು ಪರಿವರ್ತಿಸಿದರು.

29. ರಾಯಚೂರಿನ ತಾರಾನಾಥರ ಸಾಧನೆಗೆ ಒಮ್ಮೆ ವಿದೇಶಿಯರು ಒಂದು ವಾಚನ್ನು ಬಹುಮಾನವಾಗಿ ನೀಡಿದ್ದರು. ಅದನ್ನು ತಾರಾನಾಥರು ಕಟ್ಟದೆ ಕೋಣೆಯಲ್ಲಿ ಇಡುತ್ತಿದ್ದರು. ಅವರ ಆಶ್ರಮದಲ್ಲಿ ಓದುತ್ತಿದ್ದ ಬಾಲಕ ಅವರ ವಾಚನ್ನು ಕದ್ದು, ವ್ಯಾಪಾರಿಯೊಬ್ಬರಿಗೆ ಮಾರಿರುತ್ತಾನೆ. ಅವನನ್ನು ಬಂಧಿಸಲು ಪೊಲೀಸರು ಆಶ್ರಮಕ್ಕೆ ಬಂದಾಗ ತಾರಾನಾಥರವರಿಗೆ ಬಾಲಕನ ಮೇಲೆ ಕರುಣೆಯು ಉಕ್ಕಿ ಬಂದು, ಅವನನ್ನು ಪೊಲೀಸರ ವಶಕ್ಕೆ ಕೊಡಬಾರದೆಂದು ನಿರ್ಧರಿಸಿದರು. ಪೊಲೀಸರು ಬಂದಾಗ "ಅವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ ವಾಚನ್ನು ರಿಪೇರಿ ಮಾಡಿಸಲು ನಾನೇ ಅವನ ಕೈಲಿ ಕೊಟ್ಟು ಕಳಿಸಿದ್ದೆ. ನನ್ನ ಸಹೋದರ ಮತ್ತು ಆ ವ್ಯಾಪರಿ ಇಬ್ಬರೂ ಸುಳ್ಳರೇ. ಅವರ ಮಾತನ್ನು ನಂಬಬೇಡಿ" ಎಂದು ಹೇಳಿ ಬಾಲಕನು ಶಿಕ್ಷೆ ಅನುಭವಿಸುವುದನ್ನು ತಪ್ಪಿಸಿದರು. ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಪಗೊಂಡ ಬಾಲಕ ತಾರಾನಾಥರ ಪಾದಕ್ಕೆರಗಿ ಅಳುತ್ತಾ 'ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು' ಎಂದಾಗ ತಾರಾನಾಥರು ಮಗು ತಪ್ಪು ಮಾಡುವುದು ಸಹಜ. ಈಗ ನಿನಗೆ ಅದರ ಅರಿವಾಗಿದೆ. ಚೆನ್ನಾಗಿ ಓದಿ, ಚೆನ್ನಾಗಿ ಬದುಕು. ಅದೇ ನಿನಗೆ ಸಂತಸ ತರುತ್ತದೆ ಎಂದು ಹೇಳಿದರು. ಮುಂದೆ ಆ ಬಾಲಕ ವಿದ್ಯಾವಂತನಾಗಿ, ನೌಕರಿ ಹಿಡಿದು, ಉತ್ತಮ ಜೀವನ ನಡೆಸಿದ. ಹೀಗೆ ತಾರಾನಾಥರು ವಾಚನ್ನು ಕದ್ದ ಬಾಲಕನ ಮನಸ್ಸನ್ನು ಪರಿವರ್ತಿಸಿದರು.

## 7. ಒಂದು ಮರದ ಬೆಲೆ

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ಸಿಪ್ಪೆ
2. (ಬಿ) ದಿಟ್ಟೆ
3. (ಡಿ) ಅಂತರಂಗ
4. (ಡಿ) ಆಶ್ಚರ್ಯಸೂಚಕ
5. (ಸಿ) ಅಣ್ಣ
6. (ಎ) ಶಿಕ್ಷೆ

**ಒಂದು ವಾಕ್ಯದ ಪ್ರಶ್ನೆಗಳು;**

7. ಪಾಲ್ ಕೆಲನ್ ಅಮೆರಿಕ ದೇಶದ ಪ್ರಜೆ.
8. ಪಾಲ್ ಕೆಲನ್ ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಲ್ಲುವ ಅಪರಾಧವನ್ನು ಮಾಡಿದ್ದನು.

9. ಪಾಲ್ ಕೆಲನ್ ಗೆ ಅಮೆರಿಕಾದ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿತು.
10. ಅಮೆರಿಕಾದ ಜನರು ಸಾಯುತ್ತಿರುವ ಮರವನ್ನು ಉಳಿಸಲು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಟ್ಟು, ಮರಕ್ಕೆ ದೀರ್ಘಾಯಸ್ಸು ಬರಲೆಂದು ಪ್ರಾರ್ಥನೆ ಸಲ್ಲಿಸುತ್ತಾರೆ.
11. ಅಮೆರಿಕಾದ ಜನರು ತಮ್ಮ ಭವಿಷ್ಯದಲ್ಲಿ ಆಸಕ್ತಿಯಿರುವುದರಿಂದ ಅಲ್ಲಿನ ಜನ ಮರಗಳನ್ನು ಉಳಿಸಲು ಮುಂದಾಗುತ್ತಾರೆ.
12. ಭಾರತಕ್ಕೆ ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸವಿದ್ದು, ಅಮೆರಿಕಾಕ್ಕೆ ಇನ್ನೂರು ವರ್ಷಗಳ ಇತಿಹಾಸವಿದೆ.
13. ವಿಜ್ಞಾನಿಯೊಬ್ಬರ ಪ್ರಕಾರ ಒಂದು ಮರದ ಬೆಲೆಯನ್ನು ಮರದ ದಪ್ಪ, ಎತ್ತರ, ಅದರ ಉಪಯೋಗದ ಅಂದಾಜು ಇವೆಲ್ಲದರ ಅಂದಾಜಿನಂತೆ ನಿರ್ಧರಿಸಲಾಗುತ್ತದೆ.
14. ಹಾ ಮಾ ನಾಯಕರು ಹೇಳುವಂತೆ ಮರಗಳಿಲ್ಲದೆ ಮನುಕುಲವನ್ನು ಕಾಪಾಡಲು ಸಾಧ್ಯವಿಲ್ಲ ಎಂಬುದೇ ಎಲ್ಲವನ್ನೂ ಮೀರಿದ ಮರದ ಬೆಲೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

15. ಮರಗಳನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹಾಸ್ಟನ್ ನಗರ ಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್ ಗಳ ದೇಣಿಗೆ ನೀಡುತ್ತಾರೆ. ಮರಕ್ಕೆ ಬೇಗನೇ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ, ಸಾವಿರಾರು ವೃಕ್ಷ ಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನು ಇಡುತ್ತಾರೆ. ಅದಕ್ಕೆ ದೀರ್ಘಾಯುಸ್ಸು ಬರಲೆಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಹೀಗೆ ಮರಗಳನ್ನು ಉಳಿಸಲು ಅಮೇರಿಕಾದ ಜನರು ಸ್ಪಂದಿಸಿದ ರೀತಿ ಗಮನಾರ್ಹವಾಗಿದೆ.
16. ಭಾರತದಲ್ಲಿ ಮರಗಳನ್ನು ಕತ್ತರಿಸುವುದು ತೀರ ಸಾಮಾನ್ಯವಾದ ವಿಚಾರವಾಗಿದೆ. ಕಾನೂನಿಗೆ ವಿರುದ್ಧವಾಗಿದ್ದರೂ, ಮರಗಳನ್ನು ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ರಾಜ್ಯ ಮತ್ತು ರಾಷ್ಟ್ರದ ಹೆದ್ದಾರಿಗಳಲ್ಲಿಯೇ ಹಾಡು ಹಗಲಲ್ಲೇ ಈ ರೀತಿಯ ಮರಗಳನ್ನು ಕಡಿಯುತ್ತಿರುವುದು ಕಾಣಸಿಗುತ್ತದೆ. ಕೆಲವೊಮ್ಮೆ ಮೋಸ ಮಾಡಿ, ಉಪಾಯದಿಂದ ಮರಗಳನ್ನು ಕಡಿಯುತ್ತಿರುತ್ತಾರೆ. ಮೊದಲು ಸ್ವಲ್ಪ ಸ್ವಲ್ಪ ತೊಗಟೆ ತೆಗೆ , ಆ ಮೇಲೆ ಚೆಕ್ಕೆ ಕೆತ್ತುವುದರಿಂದ ಹಾಗೂ ಸೊಪ್ಪನ್ನು ಕಿತ್ತು, ಕೊಂಬೆಗಳನ್ನು ಕಡಿಯುವುದರಿಂದ ನಿಧಾನವಾಗಿ ಮರಗಳನ್ನು ಸಾಯಿಸಲಾಗುತ್ತದೆ.
17. ಬೆಂಗಳೂರು ಮಹಾನಗರದಲ್ಲಿ ಒಂದು ಹಳೆಯ ಆಲದ ಮರ, ಅದರ ಪಕ್ಕದಲ್ಲಿಯೇ ಗಣ್ಯ ವ್ಯಕ್ತಿಯೊಬ್ಬರ ಮನೆ. ಈ ಮರದಿಂದ ತಮಗೆ ತೊಂದರೆಯಾಗುತ್ತಿದೆ ಎಂದು ಆ ಪ್ರಭಾವಿ ಗಣ್ಯರ ದೂರು. ದೂರನ್ನು ಆಲಿಸಿದ ಸಂಬಂಧಪಟ್ಟ ಆಡಳಿತ ವರ್ಗದವರು ಪ್ರಭಾವಿ ಗಣ್ಯ ವ್ಯಕ್ತಿ ಎಂದು ಭಾವಿಸಿ ಆ ಮರವನ್ನು ಕಡಿದುಹಾಕಲು ಯೋಚಿಸುತ್ತಾರೆ.

**ಸಾಹಿತಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

18. ಡಾ. ಹಾ ಮಾ ನಾಯಕರವರ ಪೂರ್ಣ ಹೆಸರು ಹಾರೋಗದ್ದೆ ಮಾನಪ್ಪ ನಾಯಕ. ಇವರು 1931 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ ಜನಿಸಿದರು. ಇವರು ಸಾಹಿತ್ಯ ಸಲ್ಲಾಪ, ಸಂಚಯ, ಸಂವಾದ, ಸಂಪದ, ಸಾಂಪ್ರತ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಇವರು ಬೀದರ್ ನಲ್ಲಿ ನಡೆದ ೫೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

19. ಪ್ರಸ್ತುತ ಮಾಕ್ಯವನ್ನು ಡಾ. ಹಾ ಮಾ ನಾಯಕರವರು ಬರೆದಿರುವ 'ಸಂಪದ' ಕೃತಿಯಿಂದ ಆಯ್ದ'ಒಂದು ಮರದ ಬೆಲೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕರು ಅಮೆರಿಕಾದ ಪ್ರಜೆಗಳಿಗೆ ಮರದ ಮೇಲಿರುವ ಕಾಳಜಿಯನ್ನು ಕುರಿತು ಹೇಳಿದ್ದಾರೆ. ಅಮೆರಿಕಾದ ಪ್ರಜೆ ಪಾಲ್ ಕೆಲನ್ ಎಂಬುವವನು ಐನೂರು ವರ್ಷ ಹಳೆಯದಾದ ಮರವೊಂದಕ್ಕೆ ಸಸ್ಯನಾಶಕವನ್ನು ಬಳಸಿ ಕೊಂದನು. ಇದರಿಂದ ಮರ ಅರ್ಧ ಸತ್ತು ಹೋಯಿತು. ಆ ಮರವು ಬೇಗ ಗುಣಮುಖವಾಗಲೆಂದು ಹಾರೈಸಿ ಸಾವಿರಾರು ಜನ ವೃಕ್ಷ ಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆಂದು ಹೇಳುವ ಸಂದರ್ಭ ಇದಾಗಿದೆ.

20. ಪ್ರಸ್ತುತ ಮಾಕ್ಯವನ್ನು ಡಾ. ಹಾ ಮಾ ನಾಯಕರವರು ಬರೆದಿರುವ 'ಸಂಪದ' ಕೃತಿಯಿಂದ ಆಯ್ದ'ಒಂದು ಮರದ ಬೆಲೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕರು ಮರದ ಪ್ರಾಮುಖ್ಯತೆಯನ್ನು ಕುರಿತು ಹೇಳಿದ್ದಾರೆ. ವಿಜ್ಞಾನಿಗಳ ಪ್ರಕಾರ ಆರೋಗ್ಯವಂತ ಮರದ ಬೆಲೆ ಹದಿನಾರು ಲಕ್ಷ ರೂಪಾಯಿಗಿಂತ ಹೆಚ್ಚು. ಅದು ಉತ್ಪಾದಿಸುವ ಆಮ್ಲಜನಕ, ಹೀರುವ ಇಂಗಾಲದಜನಕ, ಮಣ್ಣಿನ ಸವೆತ ತಡೆಯಲು, ಅಂತರ್ಜಲ ಹೆಚ್ಚಿಸಲು, ಪ್ರವಾಹ ತಡೆಯಲು, ಆಹಾರ-ಗೊಬ್ಬರ, ಪಶು-ಪಕ್ಷಿ, ಕ್ರಿಮಿಕೀಟಗಳಿಗೆ ನೀಡುವ ಆಶ್ರಯ ಹೀಗೆ ಪ್ರತಿಯೊಂದಕ್ಕೂ ಬೆಲೆ ಕಟ್ಟಬಹುದು. ಆದರೆ ಅದೆಲ್ಲದಕ್ಕೂ ಮೀರಿದ

ಬೆಲೆಯೊಂದಿದೆ. ಅದುವೇ ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ ಎಂದು ಹೇಳುವ ಸಂದರ್ಭ ಇದಾಗಿದೆ.

21. ಪ್ರಸ್ತುತ ಮಾಕ್ಯವನ್ನು ಡಾ. ಹಾ ಮಾ ನಾಯಕರವರು ಬರೆದಿರುವ 'ಸಂಪದ' ಕೃತಿಯಿಂದ ಆಯ್ದ'ಒಂದು ಮರದ ಬೆಲೆ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕರು ನಮ್ಮ ದೇಶದಲ್ಲಿ ಜನರು ಮರದ ಬಗ್ಗೆ ತೋರಿಸುವ ತಾತ್ಸಾರವನ್ನು ಕುರಿತು ಹೇಳಿದ್ದಾರೆ. ಮರದ ಬಗ್ಗೆ ಅಮೆರಿಕಾ ಜನ ಹಾಗೂ ಭಾರತೀಯ ಜನರ ನಡುವೆ ತೀರ ಭಿನ್ನವಾದ ದೃಷ್ಟಿಕೋನಗಳಿವೆ. ಅಮೆರಿಕೆಯ ಜನರಲ್ಲಿ ತಮ್ಮ ಭವಿಷ್ಯದಲ್ಲಿ ಆಸಕ್ತಿಯಿದ್ದರೆ, ನಮ್ಮರಿಗೆ ಇಂದಷ್ಟೇ ಮುಖ್ಯವಾದದ್ದು ಎಂದು ಹೇಳುವ ಸಂದರ್ಭ ಇದಾಗಿದೆ.

22. ಪ್ರಸ್ತುತ ಮಾಕ್ಯವನ್ನು ಡಾ. ಹಾ ಮಾ ನಾಯಕರವರು ಬರೆದಿರುವ 'ಸಂಪದ' ಕೃತಿಯಿಂದ ಆಯ್ದ'ಒಂದು ಮರದ ಬೆಲೆ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಮಾತನ್ನು ಲೇಖಕರು ನಮ್ಮ ದೇಶದ ಜನರು ಮರ ತೆಗೆಸಲು ಪ್ರಯತ್ನಿಸುವ ಕುರಿತು ಹೇಳಿದ್ದಾರೆ. ಕಾನೂನಿಗೆ ವಿರುದ್ಧವಾಗಿದ್ದರೂ, ಮರಗಳನ್ನು ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ಹಾಡು ಹಗಲಲ್ಲೇ ಈ ರೀತಿಯ ಮರಗಳನ್ನು ಕಡಿಯುತ್ತಿರುವುದು ಕಾಣಸಿಗುತ್ತದೆ. ಕೆಲವೊಮ್ಮೆ ಮೋಸ ಮಾಡಿ, ಉಪಾಯದಿಂದ ಮರಗಳನ್ನು ಕಡಿಯುತ್ತಿರುತ್ತಾರೆ. ಮೊದಲು ಸ್ವಲ್ಪ ಸ್ವಲ್ಪ ತೊಗಟೆ ನೆಗೆದು, ಆ ಮೇಲೆ ಚೆಕ್ಕೆ ಕೆತ್ತುವುದರಿಂದ ಹಾಗೂ ಸೊಪ್ಪನ್ನು ಕಿತ್ತು, ಕೊಂಬೆಗಳನ್ನು ಕಡಿಯುವುದರಿಂದ ನಿಧಾನವಾಗಿ ಮರಗಳನ್ನು ಸಾಯಿಸಲಾಗುತ್ತದೆ ಎಂದು ಹೇಳುವ ಸಂದರ್ಭ ಇದಾಗಿದೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪರ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

23. ವಿಜ್ಞಾನಿಯೊಬ್ಬರ ಪ್ರಕಾರ ಒಂದು ಮರದ ಬೆಲೆಯನ್ನು ಮರದ ದಪ್ಪ, ಎತ್ತರ, ಅದರ ಉಪಯೋಗದ ಅಂದಾಜು ಇವೆಲ್ಲದರ ಅಂದಾಜಿನಂತೆ ನಿರ್ಧರಿಸಲಾಗುತ್ತದೆ. ಅವರ ಪ್ರಕಾರ ಆರೋಗ್ಯವಂತ ಮರದ ಬೆಲೆ ಹದಿನಾರು ಲಕ್ಷ ರೂಪಾಯಿಗಿಂತ ಹೆಚ್ಚು. ಅದು ಉತ್ಪಾದಿಸುವ ಆಮ್ಲಜನಕದ ಬೆಲೆ ಎರಡೂವರೆ ಲಕ್ಷ, ಹೀರುವ ಇಂಗಾಲದಜನಕದ ಬೆಲೆ ಐದು ಲಕ್ಷ, ಮಣ್ಣಿನ ಸವೆತ ತಡೆಯುವುದರ ಬೆಲೆ ಎರಡೂವರೆ ಲಕ್ಷ, ಅಂತರ್ಜಲ ಹೆಚ್ಚಿಸಲು ಹಾಗು ಪ್ರವಾಹ ತಡೆಯುವುದರ ಬೆಲೆ ಮೂರು ಲಕ್ಷ, ಆಹಾರ-ಗೊಬ್ಬರದ ಬೆಲೆ ಅರ್ಧ ಲಕ್ಷ, ಪಶು-ಪಕ್ಷಿ, ಕ್ರಿಮಿಕೀಟಗಳಿಗೆ ನೀಡುವ ಆಶ್ರಯ ಹಾಗೂ ರಕ್ಷಣೆ ನೀಡುವುದರ ಬೆಲೆ ಎರಡೂವರೆ ಲಕ್ಷ. ಹೀಗೆ ಪ್ರತಿಯೊಂದಕ್ಕೂ ಬೆಲೆ ಕಟ್ಟಬಹುದು. ಆದರೆ ಅದೆಲ್ಲದಕ್ಕೂ ಮೀರಿದ ಬೆಲೆಯೊಂದಿದೆ. ಅದುವೇ

ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ ಎಂಬುದು ವಿಜ್ಞಾನಿಯೊಬ್ಬರು ಲೆಕ್ಕ ಹಾಕಿರುವ ಬಗೆ.

24. ಅಮೆರಿಕಾದ ಪ್ರಜೆ ಪಾಲ್ ಕೆಲನ್ ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಲ್ಲುವ ಅಪರಾಧವನ್ನು ಮಾಡಿದ್ದನು. ಅದಕ್ಕೆ ಅಮೆರಿಕಾದ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿತು. ಇದರಿಂದ ಮರ ಅರ್ಧ ಸತ್ತು ಹೋಯಿತು. ಆ ಮರವು ಬೇಗ ಗುಣಮುಖವಾಗಲೆಂದು ಹಾರೈಸಿ ಹಾಗೂ ಮರ ಬೇಗನೇ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ವೃಕ್ಷ ಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನು ಇಡುತ್ತಿದ್ದಾರೆ. ಅದಕ್ಕೆ ದೀರ್ಘಾಯುಸ್ಸು ಬರಲೆಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಅಮೆರಿಕಾದ ಜನರು ಮರಗಳನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹಾಸ್ಟನ್ ನಗರ ಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್ ಗಳ ದೇಣಿಗೆ ನೀಡುತ್ತಾರೆ. ಹೀಗೆ ಮರಗಳನ್ನು ಉಳಿಸಲು ಅಮೇರಿಕಾದ ಜನರು ಸ್ಪಂದಿಸಿದ ರೀತಿ ಗಮನಾರ್ಹವಾಗಿದೆ. ಆದರೆ ಭಾರತದಲ್ಲಿ ಮರಗಳನ್ನು ಕತ್ತರಿಸುವುದು ತೀರ ಸಾಮಾನ್ಯವಾದ ವಿಚಾರವಾಗಿದೆ. ಕಾನೂನಿಗೆ ವಿರುದ್ಧವಾಗಿದ್ದರೂ, ಮರಗಳನ್ನು ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ರಾಜ್ಯ ಮತ್ತು ರಾಷ್ಟ್ರದ ಹೆದ್ದಾರಿಗಳಲ್ಲಿಯೇ ಹಾಡು ಹಗಲಲ್ಲೇ ಈ ರೀತಿಯ ಮರಗಳನ್ನು ಕಡಿಯುತ್ತಿರುವುದು ಕಾಣಸಿಗುತ್ತದೆ. ಕೆಲವೊಮ್ಮೆ ಮೋಸ ಮಾಡಿ, ಉಪಾಯದಿಂದ ಮರಗಳನ್ನು ಕಡಿಯುತ್ತಿರುತ್ತಾರೆ. ಮೊದಲು ಸ್ವಲ್ಪ ಸ್ವಲ್ಪ ತೊಗಟೆ ತೆಗೆದು, ಆ ಮೇಲೆ ಚೆಕ್ಕೆ ಕೆತ್ತುವುದರಿಂದ ಹಾಗೂ ಸೊಪ್ಪನ್ನು ಕಿತ್ತು, ಕೊಂಬೆಗಳನ್ನು ಕಡಿಯುವುದರಿಂದ ನಿಧಾನವಾಗಿ ಮರಗಳನ್ನು ಸಾಯಿಸಲಾಗುತ್ತದೆ. ಬೆಂಗಳೂರು ಮಹಾನಗರದಲ್ಲಿ ಒಂದು ಹಳೆಯ ಆಲದ ಮರ, ಅದರ ಪಕ್ಕದಲ್ಲಿಯೇ ಗಣ್ಯ ವ್ಯಕ್ತಿಯೊಬ್ಬರ ಮನೆ. ಈ ಮರದಿಂದ ತಮಗೆ ತೊಂದರೆಯಾಗುತ್ತಿದೆ ಎಂದು ಆ ಪ್ರಭಾವಿ ಗಣ್ಯರ ದೂರು. ದೂರನ್ನು ಆಲಿಸಿದ ಸಂಬಂಧಪಟ್ಟ ಆಡಳಿತ ವರ್ಗದವರು ಪ್ರಭಾವಿ ಗಣ್ಯ ವ್ಯಕ್ತಿ ಎಂದು ಭಾವಿಸಿ ತಕ್ಷಣವೇ ಆ ಮರವನ್ನು ಕಡಿದುಹಾಕಲು ಯೋಚಿಸುತ್ತಾರೆ. ಇದು ಮರಗಳ ಸಂರಕ್ಷಣೆಯಲ್ಲಿ ಭಾರತ ಮತ್ತು ಅಮೆರಿಕಾ ಜನರ ನಡುವೆ ಇರುವ ವ್ಯತ್ಯಾಸ.

## 8. ಎಮ್ಮ ಮನೆಯಂಗಳದಿ......

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ಮರದ ಚೌಕಟ್ಟಿನ ಗೇಟ್
2. (ಬಿ) ಆಕಾಶ
3. (ಎ) ಪ್ರತ್ಯಕ್ಷ
4. (ಡಿ) ನಿಲ್ಲು-ನಿಲ್ಲು
5. (ಬಿ) ನುಡಿಗಟ್ಟು

6. (ಎ) ಸವರ್ಣದೀರ್ಘ

**ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು;**

7. ಆಳು ಮತ್ತು ಅರಸು ಜೊತೆಯಾಗಿ ನಿಂತು ಮಾತನಾಡುವ ಸ್ಥಳ ಅಂಗಳ.
8. ಮಕ್ಕಳ ಆಡುಂಬೊಲ ಅಂಗಳ.
9. ಅಜ್ಜಿ ಬೈದಾಗ ಹುಡುಗರು ಖುಷಿಯಾಗುತ್ತಿದ್ದರು ಏಕೆಂದರೆ ಮಾರನೇ ದಿನದ ಸೆಗಣಿ ಸಾರಿಸುವ ಕೆಲಸ ಎಲ್ಲ ಆಟಗಳಿಗೂ ಮಿಗಿಲಾದ್ದರಿಂದ.
10. ಮಳೆ ಬರುವಾಗ ಹಳ್ಳಿಯವರು ಹಿತ್ತಲಿನ ಬಚ್ಚಲ ಮನೆಯ ಸುತ್ತ ಕೂತು, ಮಳೆ ಸದ್ದು ಕೇಳುತ್ತ, ಹಲಸಿನ ಬೀಜವನ್ನೋ, ಗೇರು ಬೀಜವನ್ನೋ ಸುಟ್ಟುಕೊಂಡು ತಿನ್ನುತ್ತ ಕುಳಿತಿರುತ್ತಾರೆ.
11. ಮಳೆಗಾಲದಲ್ಲಿ ಅಂಗಳದಲ್ಲಿ ಭತ್ತದ ಸಸಿ, ನಾಗದಾಳಿ ಗಿಡ, ಡೇರೆ ಹೂವಿನ ಗಿಡ, ಗೌರೀ ಹೂಗಳ ಗಿಡ, ಟೊಮೆಟೋ ಗಿಡಗಳು ಮೊಳೆಯುತ್ತವೆ.
12. ಕರಾವಳಿಯಲ್ಲಿ ಮಳೆಗಾಲದಲ್ಲಿ ಅಂಗಳಕ್ಕೆ ಬರುವ ಜನಪದ ನೃತ್ಯ ಕಳಂಜ.
13. ತುಳಸಿಕಟ್ಟೆಯನ್ನು ಹಬ್ಬಗಳ ಸಂದರ್ಭಗಳಲ್ಲಿ ಅಲಂಕರಿಸುವರು.
14. ಹಣತೆಗೆ ಮಳೆ ಕಳೆದ ಮೇಲೆ ಬರುವ ಹಬ್ಬಗಳ ಸಂದರ್ಭಗಳಲ್ಲಿ ತುಳಸಿಕಟ್ಟೆಯ ಸಖ್ಯ ಮರಳಿ ದೊರಕುವುದು.
15. ಬದಲಾವಣೆ ಎಂಬುದು ಜಗದ ನಿಯಮ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

16. ಮನೆಗೂ, ಹೊರ ಪ್ರಪಂಚಕ್ಕೂ ಇರುವ ಸುಂದರ ಕೊಂಡಿ ಅಂಗಳ. ಮನೆಯೆಂಬ ಆಶ್ರಯದಿಂದ ಜಗತ್ತೆಂಬ ಜಾಲಕ್ಕೆ ಕಾಲಿಡಬೇಕೆಂದರೆ ಮೊದಲು ವೀರಬೇಕಾದದ್ದು ಅಂಗಳವನ್ನೆ. ಒಳಗೆ ಕಾಲಿಡುವವನಿಗೆ ಎಲ್ಲ ಕೊಳೆಯ ಕೊಡವಿ ಸಾಗಲು, ಹೊರಗೆ ನಡೆಯುವವನಿಗೆ ಎಲ್ಲ ಸರಿಯಾಗಿದೆಯೇ ಎಂದು ನೋಡಿಕೊಳ್ಳಲು ಅಂಗಳವೇ ಜಾಗ. ಮೊದಲು ಕತ್ತಲಾಗುವುದು ಮನೆಯೊಳಕ್ಕಾದರೆ, ಮೊದಲು ಬೆಳಕಾಗುವುದು ಅಂಗಳಕ್ಕೆ. ಹುಟ್ಟಿನ ಸಂಭ್ರಮಕ್ಕೆ ಒಳಮನೆ ಸಾಕ್ಷಿಯಾದರೆ, ಸಾವಿನ ಸೂತಕಕ್ಕೆ ಅಂಗಳವೇ ಆಶ್ರಯ. ಇಲ್ಲಿ ಎಲ್ಲರೂ ಸಮಾನರೇ. ಆಳೂ, ಅರಸನೂ ಸೇರಿ ನಿಂತು ಮಾತನಾಡಲು ಅಂಗಳದಲ್ಲಿ ಮಾತ್ರ ಸಾಧ್ಯ. ಮನೆಯೇ ಮೊದಲ ಪಾಠಶಾಲೆಯಾದರೆ, ಅಂಗಳವೇ ಮೊದಲ ಮೈದಾನ.
17. ಅಂಗಳವೇ ಮಕ್ಕಳ ಸಕಲ ಆಟಗಳಿಗೂ ಹೆಡ್ಡಾಫೀಸು. ಕಣ್ಣಾಮುಚ್ಚಾಲೆಯಿಂದ ತೊಡಗಿ, ಕಂಬಾಟದವರೆಗೂ ಅಂಗಳವೇ ಆಡುಂಬೊಲ. ಕೈಯ ನುಣುಪೆಲ್ಲ ಆ ಐಸ್ ಪೈಸ್ ಆಡುವ ಕಂಬಗಳಿಗೆ ಮೆತ್ತಿಕೊಂಡು, ಕಂಬಗಳ ಒರಟೆಲ್ಲ ಕೈಗಂಟಿಕೊಳ್ಳುವಷ್ಟು ಆಟವಾಡುತ್ತಾರೆ. ಒಂದಾಟ ಮುಗಿದ ಮೇಲೆ ಇನ್ನೊಂದು. ಕೂತು ಆಡುವ ಆಟ ಮುಗಿದರೆ, ನಿಂತಾಟ. ಮತ್ತೆ ಕುಣಿದಾಟ ಚಪ್ಪರ ದೇಣಿಯೇ ಸಿಂಹಾಸನ. ಸೆಗಣಿ ಸಾರಿಸಿದ ನೆಲವೇ ವೇದಿಕೆ. ಅಡಿಕೆಯ

ದಬ್ಬೆಯನ್ನು ಶಿವಧನುಸ್ಸು, ವಜ್ರಾಯುಧ, ಶಿವಾಜಿಯ ಕತ್ತಿಯನ್ನಾಗಿ ಮಾಡಿಕೊಂಡು ಆಟವಾಡಿ ನಲಿದಾಡುತ್ತಾರೆ.

18. ಮಲೆನಾಡಿನಲ್ಲಿ ಮದುವೆಗಳ ಮಂಟಪಗಳಿಗೆ ಅಂಗಳವೇ ಆಶ್ರಯದಾತ. ಮದುವೆಯ ಸಮಸ್ತ ತಯಾರಿಗಳಿಗೂ ಅಂಗಳವೇ ಗತಿ. ಪಕ್ಕದ ಮನೆ ಅಂಗಳದಲ್ಲಿ ಬಾಳೆ ಎಲೆಗಳನ್ನು ಕ್ಲೀನು ಮಾಡಿ, ತರಕಾರಿ ಕೊಚ್ಚಿದರೆ ಮತ್ತೊಂದು ಮನೆಯಂಗಳದಲ್ಲಿ ಊಟದ ತಯಾರಿ. ಇನ್ಯಾರದೋ ಹಿತ್ತಲಲ್ಲಿ ಅಡುಗೆ, ಗೃಹಪ್ರವೇಶವೆಂಬ ಗಂಡಿನ ಮನೆಯ ಸಂಭ್ರಮಕ್ಕೆ ಮತ್ತೆ ಅಂಗಳವೇ ಸಾಕ್ಷಿ. ಹೆಣ್ಣಿನ ಹೊಸ ಬದುಕು ಆರಂಭವಾಗುವುದೇ ಅಂಗಳದಲ್ಲಿ.
19. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳವು ರಾಶಿ ರಾಶಿ ಅಡಿಕೆಗಳಿಂದ ತುಂಬಿಕೊಳ್ಳುತ್ತದೆ. ಊರ ಮಂದಿಯೇ ಒಂದಾಗಿ, ಹಗಲೆನ್ನದೆ, ರಾತ್ರಿಯೆನ್ನದೇ ಅಡಿಕೆಗಳನ್ನು ಸುಲಿಯುವರು. ಅಂಗಳದ ಆಚೆಗೆ ಅದೇನೇ ಆಗಿದ್ದರೂ ಒಳಗೆ ಬಂದು ಕೂತ ಮೇಲೆ ಎಲ್ಲರೂ ಒಂದೇ ಇಲ್ಲಿ. ವಿದೇಶಿ ಸಾಫ್ಟ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವ, ವಾರಾಂತ್ಯದಲ್ಲಿ ಊರಿಗೆ ಬಂದ ಮನೆಮಗನೂ, ಆಳುಮಗನೂ ಒಟ್ಟಿಗೇ ಅಡಿಕೆ ಸುಲಿಯುತ್ತಾರೆ. ಜಗದ ಸುದ್ದಿಗಳನ್ನೆಲ್ಲ ಹೇಳುತ್ತಾ, ಏನೇನೋ ಹರಟೆ ಹೊಡೆಯುತ್ತಾ, ರಾಶಿಯಿಂದ ಅಡಿಕೆ ಹೆಕ್ಕಿ ಸುಲಿಯುತ್ತಾರೆ.

**ಲೇಖಕರ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

20. ಶ್ರೀನಿಧಿ ಡಿ ಎಸ್ ರವರು 1983 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಲಿಯಲ್ಲಿ ಜನಿಸಿದರು. ಇವರು ಹೂವು ಹೆಕ್ಕುವ ಸಮಯ, ತೂಗುಮಂಚದಲ್ಲಿ ಕೂತು ಮುಂತಾದ ಕೃತಿಗಳನ್ನು ಬರೆದಿರುವರು. ವೃತ್ತಿಯಲ್ಲಿ ಚಲನಚಿತ್ರ-ಧಾರವಾಹಿ ಬರಹಗಾರರು. ಅಂಕಣಕಾರರಾಗಿ, ಲೇಖಕರಾಗಿ ಪ್ರಸಿದ್ಧರಾಗಿರುವ ಇವರು ನಾಡಿನ ಪ್ರಸಿದ್ಧ ಟಿವಿ ವಾಹಿನಿಗಳಲ್ಲಿ ಕೆಲಸ ಮಾಡಿದ್ದಾರೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

21. ಈ ವಾಕ್ಯವನ್ನು ಶ್ರೀನಿಧಿ ಡಿ ಎಸ್ ರವರು ಬರೆದ 'ತೂಗು ಮಂಚದಲ್ಲಿ ಕೂತು' ಎಂಬ ಸಂಕಲನದಿಂದ ಆಯ್ದ 'ಎಮ್ಮ ಮನೆಯಂಗಳದಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಸಾಲನ್ನು ಲೇಖಕರು ಬಾಲ್ಯದ ನೆನಪುಗಳೊಂದಿಗೆ ಬೆಸೆದುಕೊಂಡಿರುವ ಅಂಗಳದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಮನೆ ಮತ್ತು ಅಂಗಳಗಳಿಗೆ ಇರುವ ವ್ಯತ್ಯಾಸವನ್ನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಸಾಲು ಮೂಡಿ ಬಂದಿದೆ.

22. ಈ ವಾಕ್ಯವನ್ನು ಶ್ರೀನಿಧಿ ಡಿ ಎಸ್ ರವರು ಬರೆದ 'ತೂಗು ಮಂಚದಲ್ಲಿ ಕೂತು' ಎಂಬ ಸಂಕಲನದಿಂದ ಆಯ್ದ 'ಎಮ್ಮ ಮನೆಯಂಗಳದಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಸಾಲನ್ನು ಲೇಖಕರು ಬಾಲ್ಯದ ನೆನಪುಗಳೊಂದಿಗೆ ಬೆಸೆದುಕೊಂಡಿರುವ ಅಂಗಳದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಮಳೆಗಾಲದಲ್ಲಿ ಅಂಗಳ ಹೇಗಿರುತ್ತದೆ ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಸಾಲು ಮೂಡಿ ಬಂದಿದೆ.

23. ಈ ವಾಕ್ಯವನ್ನು ಶ್ರೀನಿಧಿ ಡಿ ಎಸ್ ರವರು ಬರೆದ 'ತೂಗು ಮಂಚದಲ್ಲಿ ಕೂತು' ಎಂಬ ಸಂಕಲನದಿಂದ ಆಯ್ದ 'ಎಮ್ಮ ಮನೆಯಂಗಳದಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಸಾಲನ್ನು ಲೇಖಕರು ಬಾಲ್ಯದ ನೆನಪುಗಳೊಂದಿಗೆ ಬೆಸೆದುಕೊಂಡಿರುವ ಅಂಗಳದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಕರಾವಳಿಯ ಮಳೆಗಾಲದಲ್ಲಿ ಅಂಗಳದಲ್ಲಿರುವ ತುಳಸಿಕಟ್ಟೆಯ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಸಾಲು ಮೂಡಿ ಬಂದಿದೆ.

24. ಈ ವಾಕ್ಯವನ್ನು ಶ್ರೀನಿಧಿ ಡಿ ಎಸ್ ರವರು ಬರೆದ 'ತೂಗು ಮಂಚದಲ್ಲಿ ಕೂತು' ಎಂಬ ಸಂಕಲನದಿಂದ ಆಯ್ದ 'ಎಮ್ಮ ಮನೆಯಂಗಳದಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಸಾಲನ್ನು ಲೇಖಕರು ಬಾಲ್ಯದ ನೆನಪುಗಳೊಂದಿಗೆ ಬೆಸೆದುಕೊಂಡಿರುವ ಅಂಗಳದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಮಲೆನಾಡಿನಲ್ಲಿ ನಡೆಯುವ ಮದುವೆಗಳಿಗೂ ಅಂಗಳಕ್ಕೂ ಇರುವ ಸಂಬಂಧವನ್ನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಸಾಲು ಮೂಡಿ ಬಂದಿದೆ.

25. ಈ ವಾಕ್ಯವನ್ನು ಶ್ರೀನಿಧಿ ಡಿ ಎಸ್ ರವರು ಬರೆದ 'ತೂಗು ಮಂಚದಲ್ಲಿ ಕೂತು' ಎಂಬ ಸಂಕಲನದಿಂದ ಆಯ್ದ 'ಎಮ್ಮ ಮನೆಯಂಗಳದಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

    ಈ ಸಾಲನ್ನು ಲೇಖಕರು ಬಾಲ್ಯದ ನೆನಪುಗಳೊಂದಿಗೆ ಬೆಸೆದುಕೊಂಡಿರುವ ಅಂಗಳದ ಬಗ್ಗೆ ಓದುಗರಿಗೆ ಹೇಳಿದ್ದಾರೆ. ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಅಂಗಳವು ಪ್ರಸ್ತುತ ದಿನಗಳಲ್ಲಿ ಹೇಗೆ ಬದಲಾಗಿದೆ ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಸಾಲು ಮೂಡಿ ಬಂದಿದೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪರ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

26. ಲೇಖಕರು ಚಿಕ್ಕವರಿದ್ದಾಗ ಅವರ ಎಲ್ಲಾ ರೀತಿಯ ಆಟ ತುಂಟಾಗಳಿಗೆ ಅಂಗಳವೇ ಮೈದಾನ. ಹೆಡ್ಡಾಫೀಸು. ಕಣ್ಣಾಮುಚ್ಚಾಲೆಯಿಂದ ತೊಡಗಿ, ಕಂಬಾಟದವರೆಗೂ ಅಂಗಳವೇ ಆಡುಂಬೊಲ. ಅಂಗಳಕ್ಕೆ ಸೆಗಣಿ ಸಾರಿಸುವ ಕೆಲಸ ಎಲ್ಲ ಆಟಕ್ಕಿಂತಲೂ ಮಿಗಿಲಾದುದು. ಮೇ ತಿಂಗಳೆಂದರೆ ಅಂಗಳದಲ್ಲಿ ಮನೆ ಮಂದಿಯೆಲ್ಲ ಸೇರಿ ಹಲವು ತಿಂಡಿ ಪದಾರ್ಥಗಳನ್ನು ಸಿದ್ಧಪಡಿಸುತ್ತಿದ್ದರು. ಮಳೆಗಾಲದಲ್ಲಿ ಅಂಗಳದಲ್ಲಿ ಭತ್ತದ ಸಸಿ, ನಾಗದಾಳಿ ಗಿಡ, ಡೇರೆ ಹೂವಿನ ಗಿಡ, ಗೌರೀ ಹೂಗಳ ಗಿಡ, ಟೊಮೆಟೋ ಮುಂತಾದ ಹಲವು ಗಿಡಗಳು ಮೊಳೆಯುತ್ತಿದ್ದವು. ತುಳಸಿಕಟ್ಟೆಯಲ್ಲಿನ ದೀಪ ಅಂಗಳದ ನಕ್ಷತ್ರ. ಮದುವೆಗಳ ಮಂಟಪಗಳಿಗೆ ಅಂಗಳವೇ ಆಶ್ರಯದಾತ. ಮದುವೆಯ ಸಮಸ್ತ ತಯಾರಿಗಳಿಗೂ ಅಂಗಳವೇ ಗತಿ. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳವು ರಾಶಿ ರಾಶಿ ಅಡಿಕೆಗಳಿಂದ ತುಂಬಿಕೊಳ್ಳುತ್ತದೆ. ಊರ ಮಂದಿಯೇ ಒಂದಾಗಿ, ಹಗಲೆನ್ನದೆ, ರಾತ್ರಿಯೆನ್ನದೇ ಅಡಿಕೆಗಳನ್ನು ಸುಲಿಯುವರು. ಅಂಗಳದ ಆಚೆಗೆ ಅದೇನೇ ಆಗಿದ್ದರೂ ಒಳಗೆ ಬಂದು ಕೂತ ಮೇಲೆ ಎಲ್ಲರೂ ಒಂದೇ ಇಲ್ಲಿ. ವಿದೇಶಿ ಸಾಫ್ಟ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವ, ವಾರಾಂತ್ಯದಲ್ಲಿ ಊರಿಗೆ ಬಂದ ಮನೆಮಗನೂ, ಆಳುಮಗನೂ ಒಟ್ಟಿಗೇ ಅಡಿಕೆ ಸುಲಿಯುತ್ತಾರೆ ಎಂದು ಹೇಳುತ್ತಾ ಲೇಖಕರು ಅಂಗಳವು ತಮ್ಮ ಬಾಲ್ಯದ ನೆನಪುಗಳೊಂದಿಗೆ ಬೆಸೆಕುಕೊಂಡಿದ್ದರ ಬಗ್ಗೆ ತಿಳಿಸಿದ್ದಾರೆ.

27. ಬೇಸಿಗೆಯ ಕಾಲದಲ್ಲಿ ಮನೆಯ ಸಕಲ ಆಟಗಳಿಗೂ ಅಂಗಳವೇ ಹೆಡ್ಡಾಫೀಸಾಗಿತ್ತು. ಕಣ್ಣಾಮುಚ್ಚಾಲೆಯಿಂದ ತೊಡಗಿ, ಕಂಬಾಟದವರೆಗೂ ಅಂಗಳವೇ ಆಡುಂಬೊಲ. ಕೈಯ ನುಣುಪೆಲ್ಲ ಆ ಐಸ್ ಪೈಸ್ ಆಡುವ ಕಂಬಗಳಿಗೆ ಮೆತ್ತಿಕೊಂಡು, ಕಂಬಗಳ ಒರಟೆಲ್ಲ ಕೈಗಂಟಿಕೊಳ್ಳುವಷ್ಟು ಆಟವಾಡುತ್ತಾರೆ. ಒಂದಾಟ ಮುಗಿದ ಮೇಲೆ ಇನ್ನೊಂದು. ಕೂತು ಆಡುವ ಆಟ ಮುಗಿದರೆ, ನಿಂತಾಟ. ಮತ್ತೆ ಕುಣಿದಾಟ ಚಪ್ಪರದೇಣಿಯೇ ಸಿಂಹಾಸನ. ಸೆಗಣಿ ಸಾರಿಸಿದ ನೆಲವೇ ವೇದಿಕೆ. ಅಡಿಕೆಯ ದಬ್ಬೆಯನ್ನು ಶಿವಧನುಸ್ಸು, ವಜ್ರಾಯುಧ, ಶಿವಾಜಿಯ ಕತ್ತಿಯನ್ನಾಗಿ ಮಾಡಿಕೊಂಡು ಆಟವಾಡಿ ನಲಿದಾಡುತ್ತಾರೆ. ನಮ್ಮ ಕುಣಿತಕ್ಕೆ ಕಂಗಾಲಾಗುವ ಅಜ್ಜಿ, ಕಷ್ಟಪಟ್ಟು ಸೆಗಣಿ ಸಾರಿಸಿದ ನೆಲವೆಲ್ಲ ಕಿತ್ತುಹೋಯಿತು ಎಂದು ಬೈದರೆ ನಮಗೆ ಪರಮಾನಂದ. ಏಕೆಂದರೆ ಮಾರನೇ ದಿನದ ಸೆಗಣಿ ಸಾರಿಸುವ ಕೆಲಸ ಎಲ್ಲಾ ಆಟಗಳಿಗೂ ಮಿಗಿಲು. ಕೊಟ್ಟಿಗೆಯಿಂದ ಸೆಗಣಿ ತಂದು, ಅದನ್ನು ಬಕೇಟಲ್ಲಿ ಕಲಸಿ, ಅದಕ್ಕೆ ಹಳೆಯ ಬ್ಯಾಟರಿ ಸೆಲ್ಲು ಗುದ್ದಿ ಒಳಗಿನ ಪುಡಿ ತುಂಬಿ, ಅಂಗಳದ ತುಂಬ ಸೆಗಣಿ ನೀರು ಚೆಲ್ಲಿ ಗುಡಿಸುವ ಮಜವೇ ಬೇರೆ.

28. ಮಳೆಗಾಲದ ಮೋಡಗಳು ದಟ್ಟೈಸಿಕೊಳ್ಳುವ ಮೊದಲು ಎಲ್ಲವನ್ನೂ ಕಳಚಿಕೊಂಡು ಆಗಸಕ್ಕೆ ನೇರ ಮುಖ ಮಾಡಿಕೊಳ್ಳಬೇಕಾದ್ದು ಅಂಗಳದ ಕರ್ತವ್ಯ. ಮಲೆನಾಡಿನಲ್ಲಾದರೆ ಅಡಿಕೆಯ ಸೋಗೆಗಳೂ, ಕರಾವಳಿಯಲ್ಲಿ ತೆಂಗಿನ ಮಡಲುಗಳೂ ಮತ್ತೆ ಕೊಟ್ಟಿಗೆಯಟ್ಟ ಸೇರಿದರೆ, ಕಂಬಗಳು ಮಾತ್ರ ಮಳೆ ಹೊಡೆತಕ್ಕೆ ಸಿದ್ದವಾಗಿ ನಿಲ್ಲುತ್ತವೆ. ಅಡಿಕೆ ಮರವನ್ನು ಸೀಳಿ ಮಾಡಿದ ಟೆಂಪರರಿ ಕಾಲುಹಾದಿ ದಣಪೆಯಿಂದ ಮನೆಯವರೆಗೆ ಹಾಕಿರಲಾಗುತ್ತದೆ. ಮಳೆ ನೀರು ಹೆಂಚಿಂದ ಬಿದ್ದು, ನೆಲ ಹಾಳಾಗಬಾರದೆಂದು ಕೆಳಗೆ ಮುಚ್ಚಿಕೊಂಡಿರುವ ಸೊಪ್ಪು ಸೋಗೆಗಳು. ಮಳೆ ಬರುವಾಗ, ಹಿತ್ತಲಿನ ಬಚ್ಚಲ ಮನೆಯ ಸುತ್ತ ಕೂತು, ಮಳೆ ಸದ್ದು ಕೇಳುತ್ತ ಹಲಸಿನ ಬೀಜವನ್ನೋ, ಗೇರು ಬೀಜವನ್ನೋ ಸುಟ್ಟುಕೊಂಡು ತಿನ್ನುತ್ತ ಕುಳಿತಿದ್ದರೆ, ಅಂಗಳ ಅನಾಥ.

29. ಬದಲಾವಣೆ ಜಗದ ನಿಯಮ ಅಂಗಳಕ್ಕೂ ಅನ್ವಯಿಸಿದೆ. ಸೆಗಣಿಯ ಅಂಗಳವನ್ನು ಇಂಟರ್ ಲಾಕುಗಳು ನಿಧಾನವಾಗಿ ಬಂಧಿಸಿವೆ. ಮಣ್ಣ ಪಾಗಾರವನ್ನು ಇಟ್ಟಿಗೆ ಸಿಮೆಂಟುಗಳು ತಿಂದು ಹಾಕಿವೆ. ಸ್ವಚ್ಛಂದ ಬೇರು ಬಿಟ್ಟಿದ್ದ ಹೂ ಗಿಡಗಳಿಗೆ ಶಿಸ್ತು ಕಲಿಸಲು ಇದೀಗ ಕುಂಡಗಳು ಬಂದಿವೆ. ಅಂಗಳದ ಹುಲಿದನದ ಆಟವು ಮೊಬೈಲ್ ಫೋನಿಗೆ ವರ್ಗಾವಣೆಯಾಗಿದೆ. ದೀಪಾವಳಿಯಂದು ತಿರುಗುವ ನೆಲಚಕ್ರಕ್ಕೆ ಸಿಮೆಂಟಿನಂಗಳದಲ್ಲಿ ಹೊಸ ವೇಗ ದಕ್ಕಿದೆ. ಮಳೆ ಬಂದಾಗ ಅಮ್ಮನೀಗ ತಗಡು ಚಪ್ಪರದ ಕೆಳಗೆ ತೋಯದೇ ನಡೆಯುತ್ತಾಳೆ. ಅಂಗಳದ ಕಳೆ ತೆಗೆದೂ ತೆಗೆದೂ ನಡು ಬಾಗಿದ್ದ ಅಜ್ಜನೀಗ ಕೋಲು ಹಿಡಿದು ನೆಟ್ಟಗಾಗಿದ್ದಾನೆ. ಏದುಸಿರು ಬಿಡುತ್ತ, ಅಂಗಳ ಚಂದ ಕಾಣಬೇಕೆಂದು ಗುದ್ದಲಿ ಹಿಡಿದು, ನೆಲ ಕೆತ್ತುತ್ತಿದ್ದ ಅಪ್ಪ, ಆರಾಮ ಕುರ್ಚಿಯಲ್ಲಿ ಕೂತಿದ್ದಾನೆ. ಅಂಗಳವನ್ನು ಬಂಧಿಸಿದ ಕಾಂಪೌಂಡಿನ ಗೋಡೆಯ ಮೇಲೆ ಅಳಿಲು ಕೂತು ಬಿಸಿಲು ಕಾಯಿಸಿಕೊಳ್ಳುತ್ತಿದೆ. ಧೂಳು, ಕೆಸರುಗಳು, ಅದರಾಚೆಗೇ ಉಳಿದಿವೆ. ಹಬ್ಬಕ್ಕೆಂದು ಮನೆಯ ಸುತ್ತ ಹಚ್ಚಿದ ದೀಪದ ಸಾಲುಗಳನ್ನು ಅಂಗಳವೂ ಮಸುಕಾಗಿ ಪ್ರತಿಫಲಿಸುತ್ತಾ, ತಾನೂ ಪ್ರಜ್ವಲಿಸುತ್ತಿದೆ.

<u>**ಪದ್ಯ ಭಾಗ**</u>

## 5. ತೂಗಿ ತೂಗಿ ಮರಗಳೇ

**ಬಹು ಆಯ್ಕೆ ಪ್ರಶ್ನೆಗಳು;**

1. (ಡಿ) ಪತ್ರ
2. (ಸಿ) ಮರಗಳು
3. (ಸಿ) ಹಿಂಸೆ
4. (ಬಿ) ಆಗಸ
5. (ಎ) ಕತ್ತಲು

**ಒಂದು ಅಂಕದ ಪ್ರಶ್ನೆಗಳು;**

6. ಕವಿ ಮರಗಳನ್ನು ಇಳೆಗೆ ಇಳಿದ ವರಗಳೆಂದು ಕರೆದಿದ್ದಾರೆ.
7. ಕವಿಯ ಪ್ರಕಾರ ಸ್ವರಗಳು ನೆಲದ ಮೇಲೆ ಮೂಡಿಬಂದಿವೆ.
8. ಕವಿ ಮರಗಳಿಗೆ ಋಷಿ ಸಮಾನ ಮನಸ್ಸಿದೆ ಎಂದಿದ್ದಾರೆ.
9. ಕವಿಯ ಪ್ರಕಾರ ಮರಗಳು ಹಕ್ಕಿಗಳ ಹಿಂಡುಗಳಿಗೆ ನೆಲೆ ನೀಡಿವೆ.
10. ಮರಗಳು ಔದಾರ್ಯದ ರೂಪದಲ್ಲಿ ನಮಗೆ ಹೂವು, ಹಣ್ಣುಗಳನ್ನು ನೀಡುತ್ತವೆ.
11. ಕವಿಯ ಪ್ರಕಾರ ಮರಗಳು ತ್ಯಾಗ, ಸತ್ಯ, ಅಹಿಂಸೆಯ ಮೌಲ್ಯಗಳನ್ನು ಸಂಕೇತಿಸುತ್ತವೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

12. ಮರಗಳು ಮಾತನಾಡದೆ ದುಡಿಯುತ್ತವೆ. ಅವು ಸೋತು ಬಂದ ಹಕ್ಕಿಗಳ ಹಿಂಡುಗಳಿಗೆ ಪ್ರೀತಿಯ ಕರಗಳನ್ನು ಚಾಚಿ ಆಶ್ರಯ ನೀಡುತ್ತವೆ. ತನ್ನ ಹಸಿರಿನಿಂದ ಇಡೀ ಜೀವ ಸಂಕುಲಕ್ಕೆ ಜೀವರಸವನ್ನು ನೀಡುತ್ತಿರುವ ಕಾಲುವೆಗಳಾಗಿವೆ. ನಿಷ್ಕಲ್ಮಶ ಪ್ರೀತಿಯೆಂಬ ನೀತಿಯ ಹಾಡನ್ನು ಹಾಡುತ್ತಿರುವ ಮರಗಳು ಪ್ರಕೃತಿ ಬರೆದ ಓಲೆ ಎಂದು ಕವಿ ವರ್ಣಿಸಿದ್ದಾರೆ.
13. ಮಣ್ಣಿನಾಳದ ಕತ್ತಲೆಯನ್ನು ಸೀಳಿ ಮೇಲೆ ಬರುವ ಮರಗಳು, ಮೇಲೆ ಬಂದ ನಂತರ ಮೈಯೆಲ್ಲಾ ರೋಮಾಂಚನಗೊಳಿಸುವ ಚಿಗುರಿನಿಂದ ತುಂಬಿರುತ್ತವೆ. ಕೊಂಬೆ ಎಂಬ ಕೈಗಳನ್ನು ಚಾಚಿ ಬನ್ನಿ ಎಂದು ಎಲ್ಲರನ್ನೂ ಕರೆದು ಔದಾರ್ಯದಿಂದ ತನ್ನ ಒಡಲಿನಲ್ಲಿರುವ ಹೂವು ಹಣ್ಣುಗಳನ್ನು ನೀಡುತ್ತವೆ ಎಂದು ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ವರ್ಣಿಸಿದ್ದಾರೆ.
14. ಮರಗಳು ತ್ಯಾಗ, ಸತ್ಯ, ಅಹಿಂಸೆಯ ಪ್ರತೀಕವಾಗಿವೆ. ಮರಗಳು ನೆಲದಾಳದ ಕನಸಾಗಿದ್ದು, ಅವು ಆಕಾಶಕ್ಕೆ ತುಡಿಯುತ್ತವೆ. ಹೇಗೆ ಋಷಿ ಮುನಿಗಳು ಸಾಧನೆ ಮಾಡಿ, ಸಮಾಜಕ್ಕೆ ಉಪಕಾರಿಯಾಗಿರುತ್ತಾರೋ ಅದೇ ರೀತಿ ಮರಗಳು ಬೇರೆಯವರಿಗೆ ನೀಡಲೆಂದೇ ಹಣ್ಣು ಹೂಗಳನ್ನು ಬಿಡುತ್ತವೆ. ನಿಷ್ಕರುಣೆಯಿಂದ ಮನುಷ್ಯ ಕಡಿದರೂ ಇವು ಅವರೆಡೆಗೆ ಕರುಣೆ ಬೀರುತ್ತಾ ಚಿಗುರುತ್ತವೆ.

**ಕವಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ
ಕೃತಿ, ಬಿರುದು/ಪ್ರಶಸ್ತಿ 01 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ
ಒಟ್ಟು 03 ಅಂಕಗಳು

15. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು 1936ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ನೈಶಿಲ ಭಟ್ಟ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಇವರು ನಿನ್ನೆಗೆ ನನ್ನ ಹಾಡು, ವೃತ್ತ ಸುಳಿ, ಭಾವಸಂಗಮ, ನಂದನ, ಚಿನ್ನದ ಹಕ್ಕಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ

ಸಾಹಿತ್ಯ ಅಕಾಡೆಮಿಯ ಬಹುಮಾನ, ಕಾರಂತ ಪುಶಸ್ತಿ, ರಾಜ್ಯೋತ್ಸವ ಪುಶಸ್ತಿ, ಆರ್ಯಭಟ ಪುಶಸ್ತಿಗಳಿಗೆ ಭಾಜನರಾಗಿದ್ದಾರೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

16. ಈ ವಾಕ್ಯವನ್ನು ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು ಬರೆದಿರುವ 'ಸಮಗ್ರ ಕಾವ್ಯ ಸಂಪುಟ-2' ಎಂಬ ಕೃತಿಯಿಂದ ಆಯ್ದ 'ತೂಗಿ ತೂಗಿ ಮರಗಳೇ' ಪದ್ಯಭಾಗದಿಂದ ಆರಿಸಲಾಗಿದೆ.

    ಮರಗಳು ಮಾತನಾಡದೇ ದುಡಿಯುತ್ತವೆ. ಅವು ಸೋತು ಬಂದ ಹಕ್ಕಿಗಳ ಹಿಂಡಿಗೆ ಪ್ರೀತಿಯ ಕೈಚಾಚಿ ಆಶ್ರಯ ನೀಡಿ, ಇಡೀ ಜೀವ ಸಂಕುಲಕ್ಕೆ ಜೀವ ರಸವನ್ನು ನೀಡುತ್ತಿವೆ. ಇವು ನಿಷ್ಕಲ್ಮಶ ಪ್ರಿತಿಯೆಂಬ ನೀತಿ ಹಾಡನ್ನು ಹಾಡುತ್ತಿವೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

17. ಈ ವಾಕ್ಯವನ್ನು ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು ಬರೆದಿರುವ 'ಸಮಗ್ರ ಕಾವ್ಯ ಸಂಪುಟ-2' ಎಂಬ ಕೃತಿಯಿಂದ ಆಯ್ದ 'ತೂಗಿ ತೂಗಿ ಮರಗಳೇ' ಪದ್ಯಭಾಗದಿಂದ ಆರಿಸಲಾಗಿದೆ.

    ಮಣ್ಣಿನ ಕತ್ತಲಿನಿಂದ ಸೀಳಿಕೊಂಡು ಮೇಲೆ ಬರುತ್ತವೆ. ಮೇಲೆ ಬಂದ ನಂತರ ಮೈಯೆಲ್ಲಾ ರೋಮಾಂಚನಗೊಳಿಸುವ ಚಿಗುರಿನಿಂದ ತುಂಬಿರುತ್ತವೆ. ಕೊಂಬೆ ಎಂಬ ಕೈಗಳನ್ನು ಚಾಚಿ ಬನ್ನಿ ಎಂದು ಎಲ್ಲರನ್ನೂ ಕರೆದು ಔದಾರ್ಯದಿಂದ ತನ್ನ ಒಡಲಿನಲ್ಲಿರುವ ಹೂವು ಹಣ್ಣುಗಳನ್ನು ನೀಡುತ್ತವೆ ಎಂದು ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

18. ಈ ವಾಕ್ಯವನ್ನು ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು ಬರೆದಿರುವ 'ಸಮಗ್ರ ಕಾವ್ಯ ಸಂಪುಟ-2' ಎಂಬ ಕೃತಿಯಿಂದ ಆಯ್ದ 'ತೂ   ತೂಗಿ ಮರಗಳೇ' ಪದ್ಯಭಾಗದಿಂದ ಆರಿಸಲಾಗಿದೆ.

    ಮರಗಳು ತ್ಯಾಗ, ಸತ್ಯ, ಅಹಿಂಸೆಯ ಪ್ರತೀಕವಾಗಿವೆ. ಮರಗಳು ನೆಲದಾಳದ ಕನಸಾಗಿದ್ದು, ಅವು ಆಕಾಶಕ್ಕೆ ತುಡಿಯುತ್ತವೆ. ಹೇಗೆ ಋಷಿ ಮುನಿಗಳು ಸಾಧನೆ ಮಾಡಿ ಸಮಾಜಕ್ಕೆ ಉಪಕಾರಿಯಾಗಿರುತ್ತಾರೋ ಅದೇ ರೀತಿ ಮರಗಳು ಬೇರೆಯವರಿಗೆ ನೀಡಲೆಂದೇ ಹಣ್ಣು ಹೂಗಳನ್ನು ಬಿಡುತ್ತವೆ. ನಿಷ್ಕರುಣೆಯಿಂದ ಮನುಷ್ಯ ಕಡಿದರೂ ಇವು ಅವರೆಡೆಗೆ ಕರುಣೆ ಬೀರುತ್ತಾ ಚಿಗುರುತ್ತವೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಮೌಲ್ಯವನ್ನಾಧರಿಸಿ ಸಾರಾಂಶ;**

ಅಂಶಗಳನ್ನಾಧರಿಸಿದ ವಿಷಯಾಂಶಕ್ಕೆ 02 ಅಂಕಗಳು

ಮೌಲ್ಯ, ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 03 ಅಂಕಗಳು

19. ಪ್ರಸ್ತುತ ಪದ್ಯಭಾಗವನ್ನು ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು ಬರೆದಿರುವ ಸಮಗ್ರ ಕಾವ್ಯ ಸಂಪುಟ-2 ಎಂಬ ಕೃತಿಯಿಂದ ಆಯ್ದ ತೂಗಿ ತೂಗಿ ಮರಗಳೇ ಪದ್ಯಭಾಗದಿಂದ ಆರಿಸಲಾಗಿದೆ. ಮರಗಳು ತ್ಯಾಗ, ಸತ್ಯ, ಅಹಿಂಸೆಯ ಪ್ರತೀಕವಾಗಿವೆ. ಮರಗಳು ನೆಲದಾಳದ ಕನಸಾಗಿದ್ದು, ಅವು ಆಕಾಶಕ್ಕೆ ತುಡಿಯುತ್ತವೆ. ಹೇಗೆ ಋಷಿ ಮುನಿಗಳು ಸಾಧನೆ ಮಾಡಿ ಸಮಾಜಕ್ಕೆ ಉಪಕಾರಿಯಾಗಿರುತ್ತಾರೋ ಅದೇ ರೀತಿ ಮರಗಳು ಬೇರೆಯವರಿಗೆ ನೀಡಲೆಂದೇ ಹಣ್ಣು ಹೂಗಳನ್ನು ಬಿಡುತ್ತವೆ. ನಿಷ್ಕರುಣೆಯಿಂದ ಮನುಷ್ಯ ಕಡಿದರೂ ಇವು ಅವರೆಡೆಗೆ ಕರುಣೆ ಬೀರುತ್ತಾ ಚಿಗುರುತ್ತವೆ ಎಂದು ಕವಿಯವರು ಮರಗಳ ಶ್ಲಾಘನೆಯ ಕಾರ್ಯವನ್ನು ಹೊಗಳಿದ್ದಾರೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

20. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು "ತೂಗಿ ತೂಗಿ ಮರಗಳೇ" ಕವಿತೆಯಲ್ಲಿ ಮರಗಳ ಶ್ಲಾಘನೆಯ ಕಾರ್ಯವನ್ನು ಈ ರೀತಿ ವರ್ಣಿಸಿದ್ದಾರೆ. ಮರಗಳು ಇಡೀ ಮನುಕುಲಕ್ಕೆ ಜೀವ ಸಂಕುಲಕ್ಕೆ ವರವನ್ನು ನೀಡುವ ಕಲ್ಪವೃಕ್ಷಗಳಾಗಿವೆ. ಇವು ಭೂಮಿಗೆ ಇಳಿದ ವರಗಳಾಗಿವೆ. ನೆಲದ ಮೇಲೆ ಮೂಡಿ ಬಂದ ಮಧುರಗಾನ ಸ್ವರಗಳಾಗುವ ಮರಗಳು. ಇವು ತಂಪಾಗಿ ತೂಗಾಡುತ್ತಿವೆ ಎಂಬುದು ಕವಿಯ ಅಭಿಪ್ರಾಯವಾಗಿದೆ. ಮರಗಳು ಮಾತನಾಡದೆ ದುಡಿಯುತ್ತವೆ. ಅವು ಸೋತು ಬಂದ ಹಕ್ಕಿಗಳ ಹಿಂಡುಗಳಿಗೆ ಪ್ರೀತಿಯ ಕರಗಳನ್ನು ಚಾಚಿ ಆಶ್ರಯ ನೀಡುತ್ತವೆ. ತನ್ನ ಹಸಿರಿನಿಂದ ಇಡೀ ಜೀವ ಸಂಕುಲಕ್ಕೆ ಜೀವರಸವನ್ನು ನೀಡುತ್ತಿರುವ ಕಾಲುವೆಗಳಾಗಿವೆ. ನಿಷ್ಕಲ್ಮಶ ಪೀರಿಯೆಂಬ ನೀತಿಯ ಹಾಡನ್ನು ಹಾಡುತ್ತಿರುವ ಮರಗಳು ಪ್ರಕೃತಿ ಬರೆದ ಓಲೆ ಎಂದು ಕವಿ ವರ್ಣಿಸಿದ್ದಾರೆ.

ಮಣ್ಣಿನ ಕತ್ತಲಿನಿಂದ ಸೀಳಿಕೊಂಡು ಮೇಲೆ ಬರುತ್ತವೆ. ಮೇಲೆ ಬಂದ ನಂತರ ಮೈಯೆಲ್ಲಾ ರೋಮಾಂಚನಗೊಳಿಸುವ ಚಿಗುರಿನಿಂದ ತುಂಬಿರುತ್ತವೆ. ಕೊಂಬೆ ಎಂಬ ಕೈಗಳನ್ನು ಚಾಚಿ ಬನ್ನಿ ಎಂದು ಎಲ್ಲರನ್ನೂ ಕರೆದು ಔದಾರ್ಯದಿಂದ ತನ್ನ ಒಡಲಿನಲ್ಲಿರುವ ಹೂವು ಹಣ್ಣುಗಳನ್ನು ನೀಡುತ್ತವೆ ಎಂದು ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ವರ್ಣಿಸಿದ್ದಾರೆ.

ಮರಗಳು ತ್ಯಾಗ, ಸತ್ಯ, ಅಹಿಂಸೆಯ ಪ್ರತೀಕವಾಗಿವೆ. ಮರಗಳು ನೆಲದಾಳದ ಕನಸಾಗಿದ್ದು, ಅವು ಆಕಾಶಕ್ಕೆ ತುಡಿಯುತ್ತವೆ. ಹೇಗೆ ಋಷಿ ಮುನಿಗಳು ಸಾಧನೆ ಮಾಡಿ ಸಮಾಜಕ್ಕೆ ಉಪಕಾರಿಯಾಗಿರುತ್ತಾರೋ ಅದೇ ರೀತಿ ಮರಗಳು ಬೇರೆಯವರಿಗೆ ನೀಡಲೆಂದೇ ಹಣ್ಣು ಹೂಗಳನ್ನು ಬಿಡುತ್ತವೆ. ನಿಷ್ಕರುಣೆಯಿಂದ ಮನುಷ್ಯ ಕಡಿದರೂ ಇವು ಅವರೆಡೆಗೆ ಕರುಣೆ

ಬೀರುತ್ತಾ ಚಿಗುರುತ್ತವೆ. ಗೆಲುವನ್ನೇ ಧ್ಯೇಯವಾಗಿಸಿಕೊಂಡ ಮರಗಳು ಸತ್ಯ, ತ್ಯಾಗ, ಅಹಿಂಸೆಯ ನಿತ್ಯವಾದ ನಿಲುವುಗಳನ್ನು ತಮ್ಮ ಜೀವನದ ಮೌಲ್ಯವಾಗಿಸಿಕೊಂಡು, ಮನುಷ್ಯರಿಗೆ ನಮ್ಮ ಬದುಕಿನಂತೆ ನಿಮ್ಮ ಬದುಕು ರೂಪಿತಗೊಳ್ಳಬೇಕೆಂಬ ಸಂದೇಶವನ್ನು ವ್ಯಕ್ತಪಡಿಸುತ್ತಿದೆ ಎಂದು ಕವಿಯು ವರ್ಣಿಸಿದ್ದಾರೆ.

## 6. ಮಳೆ ಬರಲಿ

**ಬಹು ಆಯ್ಕೆ ಪ್ರಶ್ನೆಗಳು;**

1. (ಸಿ) ಜೋಡುನುಡಿ
2. (ಬಿ) ಲೋಪ
3. (ಎ) ಬೀಳು

**ಒಂದು ಅಂಕದ ಪ್ರಶ್ನೆಗಳು;**

4. ಹಿತವಾದ ಮಳೆ ಬಂದಾಗ ರೈತರ ಬದುಕು ಹಸನಾಗುವುದು .
5. ಹಿತವಾದ ಮಳೆ ಬಂದಾಗ ರೈತರ ಹೊಲಗದ್ದೆಗಳು ಹಸಿರಿನಿಂದ ನಗುತ್ತಿದ್ದರೆ ರೈತರಿಗೆ ಸುಖ ನಿದ್ದೆ ಸಿಗುತ್ತದೆ.
6. ಕಡು ಬೇಸಿಗೆಯಿಂದ ಸರಿಯಾಗಿ ಮಳೆಯಾಗದಿದ್ದಾಗ ಕೆರೆ, ಹಳ್ಳ, ಬಾವಿಗಳಿಗೆ ಬಾಯಾರಿಕೆ ಆಗುತ್ತದೆ.
7. ನೊಂದ ಬಯಲುಗಳು, ಬೆಂದ ಬೆಟ್ಟಗಳು ಮಳೆಯಾದಾಗ ತಂಪಾಗುತ್ತವೆ.
8. ಕವಯಿತ್ರಿ ಮಳೆ ಬಂದು ನಿಂತಾಗ ನೆಲ ಮುಗಿಲು ಏಳು ಬಣ್ಣಗಳಿಂದ ಕೂಡಿ ನಗುತ್ತಿರುವಂತೆ ಕಾಣುತ್ತದೆ
9. ಬಿರು ಬೇಸಿಗೆಯ ಝಳಕ್ಕೆ ನೊಂದ ಬಯಲುಗಳು, ಬೆಂದಿರುವ ಬೆಟ್ಟಗಳು, ಬಾಯಾರಿದ ಕೆರೆ, ಬಾವಿ, ಹಳ್ಳಕೊಳ್ಳಗಳು ನೊಂದು ಬೆಂದು ಬಾಯಾರಿದ ಪ್ರಕೃತಿಯ ಅಂಶಗಳಾಗಿವೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

10. ಮಳೆಯಿಂದ ರೈತರ ಹೊಲಗದ್ದೆಗಳನ್ನು, ಬೆಳೆಗಳನ್ನು ಕಸಿದುಕೊಂಡು ಅವರ ಬಾಳಿನ ನೆಮ್ಮದಿ ಕೆಡಿಸದಿರಲಿ. ವಿಪರೀತ ಮಳೆಯಿಂದ ಅವರು ವಾಸಿಸುವ ಹುಲ್ಲಿನ ಛಾವಣಿಗಳನ್ನು, ಮಣ್ಣಿನ ಗೋಡೆಗಳನ್ನು, ಕೆಡವಿ ಹಾಕಿ, ಅವರಿಗೆ ಆಶ್ರಯವಿಲ್ಲದಂತಾಗದಿರಲಿ ಎಂದು ಕವಯಿತ್ರಿ ಆಶಿಸಿದ್ದಾರೆ.

11. ವಿಪರೀತ ಮಳೆಯಿಂದ ಬಡವರ ಮತ್ತು ರೈತರ ಮನೆಗಳಿಗೆ ಹೆಚ್ಚು ಹಾನಿ ಉಂಟಾಗುತ್ತದೆ. ಏಕೆಂದರೆ ಅವರು ಮನೆಗಳನ್ನು ಮಣ್ಣು ಗೋಡೆಗಳಿಂದ, ಹುಲ್ಲಿನ ಛಾವಣಿಗಳಿಂದ ಕಟ್ಟಿರುತ್ತಾರೆ. ಅವುಗಳು ಹೆಚ್ಚು ಗಟ್ಟಿಯಾಗಿಲ್ಲದ ಕಾರಣ ಹಾನಿಗೊಳಗಾಗುತ್ತವೆ.
12. ಹಿತವಾದ ಮಳೆಯಿಂದ ರೈತರಿಗೆ ಬೆಳೆ ಕೈಯಿಗೆ ಬಂದು ಸಮೃದ್ಧತೆಯನ್ನುಂಟು ಮಾಡಲಿ. ಅವರಿಗೆ ಇರಲೊಂದು ಪುಟ್ಟ ಮನೆ, ಹೊದೆಯಲು ಬೆಚ್ಚನೆಯ ಕಂಬಳಿಗಳು ಸಿಗಲಿ. ಕಡು ಬಿಸಿಲ ಬೇಗೆಯಿಂದ ಬೆಂದ ಬಯಲು ಬೆಟ್ಟಗಳಲ್ಲಿ ಮಳೆಯಾಗಿ ತಂಪನೀಯಲಿ. ಬಾಯಾರಿ ನಿಂತಿರುವ ಹಳ್ಳ ಕೊಳ್ಳಗಳು ತುಂಬಲಿ ಎಂದು ಕವಯಿತ್ರಿ ಆಶಿಸುತ್ತಾರೆ.

**ಕವಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

13. ಸವಿತಾ ನಾಗಭೂಷಣರವರು 1961 ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು. ಇವರು ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆ ಮಗಳು, ಆಕಾಶ ಮಲ್ಲಿಗೆ, ದರುಶನ, ಹಳ್ಳಿಯ ದಾರಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡಿ ಎಸ್ ಕರ್ಕಿ ಕಾವ್ಯ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

14. ಪ್ರಸ್ತುತ ಸಾಲನ್ನು ಸವಿತಾ ನಾಗಾಭೂಷಣರವರು ಬರೆದಿರುವ 'ಚಂದ್ರನನ್ನು ಕರೆಯಿರಿ ಭೂಮಿಗೆ' ಎಂಬ ಕವನ ಸಂಕಲನದಿಂದ ಆಯ್ದ 'ಮಳೆ ಬರಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಯಿತ್ರಿಯವರು ಮಳೆ ಹಿತ-ಮಿತವಾಗಿ ಬರುವುದರ ಕುರಿತು ಹೇಳಿದ್ದಾರೆ. ಮಳೆಯಿಂದ ರೈತರ ಹೊಲಗದ್ದೆಗಳನ್ನು, ಬೆಳೆಗಳನ್ನು ಕಸಿಕುಕೊಂಡು ಅವರ ಬಾಳಿನ ನೆಮ್ಮದಿ ಕೆಡಿಸಸಿರಲಿ. ವಿಪರೀತ ಮಳೆಯಿಂದ ಅವರು ವಾಸಿಸುವ ಹುಲ್ಲಿನ ಛಾವಣಿಗಳನ್ನು, ಮಣ್ಣಿನ ಗೋಡೆಗಳನ್ನು ಕೆಡವಿ ಹಾಕಿ ಅವರಿಗೆ ಆಶ್ರಯವಿಲ್ಲದಂತಾಗದಿರಲಿ ಎಂದು ಕವಯಿತ್ರಿ ಹೇಳುವ ಸಂದರ್ಭ ಇದಾಗಿದೆ.

15. ಪ್ರಸ್ತುತ ಸಾಲನ್ನು ಸವಿತಾ ನಾಗಾಭೂಷಣರವರು ಬರೆದಿರುವ 'ಚಂದ್ರನನ್ನು ಕರೆಯಿರಿ ಭೂಮಿಗೆ' ಎಂಬ ಕವನ ಸಂಕಲನದಿಂದ ಆಯ್ದ 'ಮಳೆ ಬರಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಯಿತ್ರಿಯವರು ಮಳೆಯು ನೆಲವನ್ನು ತಣಿಸುವುದನ್ನು ಕುರಿತು ಹೇಳಿದ್ದಾರೆ. ವಿಪರೀತ ಮಳೆಯಿಂದ ಬಡವರ ಮತ್ತು ರೈತರ ಮನೆಗಳಿಗೆ ಹೆಚ್ಚು ಹಾನಿ ಉಂಟಾಗುತ್ತದೆ. ಏಕೆಂದರೆ ಅವರು ಮನೆಗಳನ್ನು ಮಣ್ಣು ಗೋಡೆಗಳಿಂದ, ಹುಲ್ಲಿನ ಛಾವಣಿಗಳಿಂದ ಕಟ್ಟಿರುತ್ತಾರೆ. ಅವುಗಳು ಹೆಚ್ಚು ಗಟ್ಟಿಯಾಗಿಲ್ಲದ ಕಾರಣ ಹಾನಿಗೊಳಗಾಗುತ್ತವೆ ಮಳೆ ರೈತರ ಹೊಲಗದ್ದೆಗಳನ್ನು ಹಸಿರಾಗಿಸುವಷ್ಟು ಬರಲಿ. ಇದರಿಂದ ರೈತ ಸಮೃದ್ಧವಾಗಿ ಬೆಳೆ ಬೆಳೆದು ನೆಮ್ಮದಿಯನ್ನು ಕಾಣಲಿ. ಆತನಿಗೆ ಇರಲೊಂದು ಪುಟ್ಟ ಮನೆ ಹೊದೆಯಲು ಬೆಚ್ಚನೆಯ ಕಂಬಳಿ ಸಿಗುವಂತಾಗಲಿ ಎಂದು ಹೇಳುವ ಸಂದರ್ಭ ಇದಾಗಿದೆ.

16. ಪ್ರಸ್ತುತ ಸಾಲನ್ನು ಸವಿತಾ ನಾಗಾಭೂಷಣರವರು ಬರೆದಿರುವ 'ಚಂದ್ರನನ್ನು ಕರೆಯಿರಿ ಭೂಮಿಗೆ' ಎಂಬ ಕವನ ಸಂಕಲನದಿಂದ ಆಯ್ದ 'ಮಳೆ ಬರಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಯಿತ್ರಿಯವರು ಮಳೆಯು ನೆಲವನ್ನು ತಣಿಸುವುದನ್ನು ಕುರಿತು ಹೇಳಿದ್ದಾರೆ. ಹಿತವಾದ ಮಳೆಯಿಂದ ರೈತರಿಗೆ ಬೆಳೆ ಕೈಯಿಗೆ ಬಂದು ಸಮೃದ್ಧತೆಯನ್ನುಂಟು ಮಾಡಲಿ. ಅವರಿಗೆ ಇರಲೊಂದು ಪುಟ್ಟ ಮನೆ, ಹೊದೆಯಲು ಬೆಚ್ಚನೆಯ ಕಂಬಳಿಗಳು ಸಿಗಲಿ. ಕಡು ಬಿಸಿಲ ಬೇಗೆಯಿಂದ ಬೆಂದ ಬಯಲು ಬೆಟ್ಟಗಳಲ್ಲಿ ಮಳೆಯಾಗಿ ಬಾಯಾರಿ ನಿಂತಿರುವ ಹಳ್ಳ ಕೊಳ್ಳಗಳು ತುಂಬಲಿ ಎಂದು ಕವಯಿತ್ರಿ ಆಶಿಸುವ ಸಂದರ್ಭ ಇದಾಗಿದೆ.

**ಪದ್ಯಭಾಗವನ್ನು ಪೂರ್ಣಗೊಳಿಸುವುದು;** (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 01 ಅಂಕ)

17. ನೊಂದ ಬಯಲುಗಳಿಗೆ
ಬೆಂದ ಬೆಟ್ಟಗಳಿಗೆ
ಬಾಯಾರಿದ ಕೆರೆ ಬಾವಿ
ಹಳ್ಳ ಕೊಳ್ಳಗಳಿಗೆ-
ಬರಲಿ ಮಳೆ ಬರಲಿ,
    'ಧೋ' ಎಂದು ಸುರಿದು
    ಹೊರಟು ನಿಂತಾಗ
    ನೆಲ-ಮುಗಿಲು ನಗಲಿ
    ಏಳು ಬಣ್ಣಗಳಲ್ಲಿ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪರ್ಯಾಂಶಕ್ಕೆ 03 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ

ಒಟ್ಟು 04 ಅಂಕಗಳು

18. ಮಳೆ ನಮ್ಮೆಲ್ಲರ ಜೀವನಾಧಾರ. ಅದು ಹೆಚ್ಚಾದರೂ ಕಷ್ಟವೇ, ಕಡಿಮೆಯಾದರೂ ಕಷ್ಟವೇ. ಹಿತ-ಮಿತವಾಗಿ ಸಕಾಲಕ್ಕೆ ಬೀಳುವ ಮಳೆಯಿಂದ ರೈತ ತನ್ನ ಹೊಲ-ಗದ್ದೆಯಲ್ಲಿ ಹಸನಾದ ಬೆಳೆ ತೆಗೆಯುತ್ತಾನೆ. ತನ್ನ ಹೊಟ್ಟೆಯನ್ನು ತುಂಬಿಸಿಕೊಂಡು ಲೋಕದ ಹೊಟ್ಟೆಯನ್ನು ತುಂಬಿಸುತ್ತಾನೆ. ಇದರಿಮ್ದ ಆತನಿಗೆ ಇರಲು ಪುಟ್ಟಮನೆ, ಹೊದೆಯಲು ಬೆಚ್ಚನೆ ಕಂಬಳಿ ಸಿಗುತ್ತದೆ. ಇದರಿಂದ ಆತ ಸುಖ ನಿದ್ದೆಯನ್ನು ಮಾಡುವಂತಾಗುತ್ತದೆ. ಕಡು ಬೇಸಿಗೆಯಿಂದ ಬೆಂದ ಬಯಲು ಬೆಟ್ಟಗಳೆಲ್ಲ ಮಳೆಯಿಂದ ತಣಿದು ಎಲ್ಲರಿಗೂ ತಂಪು ನೀಡುತ್ತವೆ. ಬಾಯಾರಿ ನಿಂತಿರುವ ಕೆರೆ, ಕಟ್ಟೆ, ಹಳ್ಳ, ಕೊಳ್ಳಗಳೆಲ್ಲ ತುಂಬಿ ಎಲ್ಲರಿಗೂ ನೀರುಣಿಸುತ್ತವೆ. ಧೋ ಎಂದು ಮಳೆ ಬಂದು ಹೋದ ಮೇಲೆ ಪ್ರಕೃತಿಯೆಲ್ಲಾ ಹಸಿರಿನಿಂದ ಕಂಗೊಳಿಸುತ್ತದೆ. ನೆಲ ಮುಗಿಲು ಏಳು ಬಣ್ಣಗಳಿಂದ ತುಂಬಿ ನಗುತ್ತದೆ. ಇದು ಮಳೆಯಿಂದ ಆಗುವ ಅನುಕೂಲಗಳು.

ಇನ್ನು ಮಳೆ ಅತಿಯಾದರೆ ಪ್ರವಾಹ ಉಂಟಾಗಿ, ಹೊಲ-ಗದ್ದೆಗಳ ಮುಳುಗಡೆ ಉಂಟಾಗುತ್ತದೆ. ಇದರಿಂದ ಬೆಳೆದ ಬೆಳೆಗಳೆಲ್ಲ ನಾಶವಾಗಿ ರೈತ ಪರಿತಪಿಸುವಂತಾಗುತ್ತದೆ. ಜೊತೆಗೆ ವಿಪರೀತ ಮಳೆಯಿಂದ ನೀರು ಮನೆಗಳಿಗೆ ಸುಗ್ಗಿ ಮಣ್ಣಿನ ಗೋಡೆಗಳು ಕುಸಿಯುತ್ತದೆ. ಮಳೆಯ ರಭಸಕ್ಕೆ ಮನೆಯ ಹುಲ್ಲಿನ ಛಾವಣಿ ಹಾನಿಗೊಳಗಾಗಿ ಜನರು ನಿರಾಶ್ರಿತರಾಗುತ್ತಾರೆ. ಇದು ಮಳೆಯಿಂದಾಗುವ ಅನಾನುಕೂಲಗಳು.

## 7. ಹಕ್ಕಿಗಳು

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಬಣ್ಣ
2. (ಸಿ) ನಲಿವು
3. (ಸಿ) ಕಾಯುವರು
4. (ಎ) ಪ್ರಥಮಾ

**ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು;**

5. ಕವಿ ಪ್ರಕಾರ ನಾವುಗಳು ಜೀವನದ ಆಳ, ಪಾತಾಳದ ಕರಾಳ ನೋವನ್ನು ಕಂಡವರು ಎಂದು ಹೇಳಿದ್ದಾರೆ.
6. ಕವಿಯು ಕುರಿದನಗಳನ್ನು ಕಾಯ್ದ ಬಾಲಕರಿಗೆ ಕುಡಿಯಲು ಹಾಲು ಸಿಗಲಿಲ್ಲ ಎಂದಿದ್ದಾರೆ.
7. ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ ಎಂದು ಕವಿಯ ಅಭಿಪ್ರಾಯ.
8. ಎಂಜಲು ತೊಳೆದವರಿಗೆ ಗಂಜಿಯ ಭಾಗ್ಯ ಸಿಗಬೇಕಾಗಿತ್ತು ಎಂದು ಕವಿಯವರ ಅನಿಸಿಕೆ.

9. ಗುಡಿಗೋಪುರದ ಬಣ್ಣಗಳಂತೆ ಇತರರಿಗೆ ರಕ್ಷಣೆ ನೀಡಿದ ಬಾಲಕರು ಚಳಿಯನ್ನು ತಡೆಯದೆ ಕುಸಿದರು.
10. ಬಾಲಕರ ಕನಸುಗಳು ಅರಳುವ ಮೊದಲೆ ಕಮರಿ ಹೋಗಿವೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

11. ಹಕ್ಕಿಗಳು ಕವಿತೆಯಲ್ಲಿ ಬಾಲಕರು ಕುರಿದನಗಳನ್ನು ಕಾಯ್ದ ಬಾಲಕರಿಗೆ ಕುಡಿಯಲು ಹಾಲು ಸಿಗಲಿಲ್ಲ. ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ. ಎಂಜಲು ತೊಳೆದು, ಗಂಜಲ ಬಳಿದವರಿಗೆ ಕುಡಿಯಲು ಗಂಜಿಯ ಭಾಗ್ಯ ಸಿಗಲಿಲ್ಲ. ಇನ್ನು ಮುಂತಾದ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ಬಣ್ಣಿಸಲಾಗಿದೆ.
12. ನೋವುಂಡ ಬಾಲಕರಿಗೆ ಬೆಟ್ಟವನ್ನು ಹತ್ತಿ, ಬೆಟ್ಟವನ್ನು ಇಳಿಯುವ ಅನುಭವವಾಗಿವೆ. ಹತ್ತಿ ಇಳಿಯುವ ಸಮಯದಲ್ಲಿ ಆಳವಾದ, ಪಾತಾಳದ ಕರಾಳ ನೋವನ್ನು ಅನುಭವಿಸಿದ್ದಾರೆ. ಉರಿಯುವ ಬಿಸಿಲಿನಲ್ಲಿ, ಉರಿಯುವ ಎಲೆಗಳಂತೆ, ಬೂದಿಯ ಕಣಗಳಂತೆ ನೋವನ್ನು ಬಾಲಕರು ಉಂಡಿದ್ದಾರೆ. ಗುಡಿಗೋಪುರದ ಬಣ್ಣಗಳಂತೆ ಇತರರಿಗೆ ರಕ್ಷಣೆ ನೀಡಿದ ಬಾಲಕರು ಚಳಿಯನ್ನು ತಡೆಯದೆ ಕುಸಿದಿದ್ದಾರೆ.
13. ಬಾಲಕರ ಹಾಡು ನೋವಿನ ಹಾಡಾಗಿದೆ. ನಾಡು ಕತ್ತಲಿನ ನಾಡಾಗಿದೆ. ಏಕೆಂದರೆ ಇವರು ಬಾಳುತ್ತಿರುವ ನಾಡಿನಲ್ಲಿ ಹೊತ್ತು ತಿಳಿಯುತ್ತಿಲ್ಲ. ದಿಕ್ಕೂ ಸಹ ಕಾಣಿಸುತ್ತಿಲ್ಲ. ಕವಲೊಡೆದ ದಾರಿಯಲ್ಲಿ ಎಲ್ಲಿಗೆ ಹೋಗಬೇಕು?, ಹೇಗೆ ಹೋಗಬೇಕೆಂದು? ತಿಳಿಯದೇ ಬೆಳಕನ್ನು ಹುಡುಕುತ್ತಾ ಇದ್ದಾರೆ.

**ಕವಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ
ಕೃತಿ, ಬಿರುದು/ಪ್ರಶಸ್ತಿ 01 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ
ಒಟ್ಟು 03 ಅಂಕಗಳು

14. ದಲಿತ ಕವಿಯೆಂದೇ ಪ್ರಸಿದ್ಧರಾದ ಡಾ. ಸಿದ್ಧಲಿಂಗಯ್ಯರವರು 1954 ರಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಜನಿಸಿದರು. ಇವರು ಹೊಲೆ ಮಾದಿಗರ ಹಾಡು, ಸಾವಿರಾರು ನದಿಗಳು, ಮೆರವಣಿಗೆ, ಪಂಚಮ, ನೆಲಸಮ, ಏಕಲವ್ಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಬಹುಮಾನ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

15. ಪ್ರಸ್ತುತ ಸಾಲನ್ನು ಡಾ. ಸಿದ್ದಲಿಂಗಯ್ಯನವರು ಬರೆದಿರುವ 'ಮೆರವಣಿಗೆ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗಳು' ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಿ ದಲಿತ ಬಾಲಕರ ಜೀವನದ ಬವಣೆಯನ್ನು ಕುರಿತು ಹೇಳಿದ್ದಾರೆ. ಕುರಿದನಗಳನ್ನು ಕಾಯ್ದ ಬಾಲಕರಿಗೆ ಕುಡಿಯಲು ಹಾಲು ಸಿಗಲಿಲ್ಲ. ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ. ಎಂಜಲು ತೊಳೆದು, ಗಂಜಲ ಬಳಿದವರಿಗೆ ಕುಡಿಯಲು ಗಂಜಿಯ ಭಾಗ್ಯ ಸಿಗಲಿಲ್ಲ. ಇನ್ನು ಮುಂತಾದ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ವರ್ಣಿಸುವ ಸಂದರ್ಭ ಇದಾಗಿದೆ.

16. ಪ್ರಸ್ತುತ ಸಾಲನ್ನು ಡಾ. ಸಿದ್ದಲಿಂಗಯ್ಯನವರು ಬರೆದಿರುವ 'ಮೆರವಣಿಗೆ ಎಂಬ ಕೃತಿಯಿಂದ ಆಯ್ದ 'ಹಕ್ಕಿಗಳು' ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಿ ದಲಿತ ಬಾಲಕರ ಜೀವನದ ಬವಣೆಯನ್ನು ಕುರಿತು ಹೇಳಿದ್ದಾರೆ. ಬಾಲಕರು ಓದು, ಬರಹ ಕಲಿಯಲಾಗದೆ, ಮೇಲ್ಜಾತಿಯವರ ಮನೆಯಲ್ಲಿ ಜೀತವನ್ನು ಮಾಡುತ್ತಾ ಅವರ ಎಂಜಲನ್ನು ತೊಳೆಯುತ್ತಿದ್ದಾರೆ. ಗಂಜಲವನ್ನು ಬಳಿಯುವ ಕೆಲಸ ಮಾಡುತ್ತಾರಾದರೂ ಹೊಟ್ಟೆ ತುಂಬ ಅವರಿಗೆ ಗಂಜಿಗೂ ಗತಿಯಿಲ್ಲದಂತಾಗಿದೆ ಎಂದು ಹೇಳುವ ಸಂದರ್ಭ ಇದಾಗಿದೆ.

17. ಪ್ರಸ್ತುತ ಸಾಲನ್ನು ಡಾ. ಸಿದ್ದಲಿಂಗಯ್ಯನವರು ಬರೆದಿರುವ 'ಮೆರವಣಿಗೆ ಎಂಬ ಕೃತಿಯಿಂದ ಆಯ್ದ 'ಹಕ್ಕಿಗಳು' ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಿ ದಲಿತ ಬಾಲಕರ ಜೀವನದ ಬವಣೆಯನ್ನು ಕುರಿತು ಹೇಳಿದ್ದಾರೆ. ನೋವುಂಡ ಬಾಲಕರಿಗೆ ಬೆಟ್ಟವನ್ನು ಹತ್ತಿ, ಬೆಟ್ಟವನ್ನು ಇಳಿಯುವ ಅನುಭವವಾಗಿವೆ. ಹತ್ತಿ ಇಳಿಯುವ ಸಮಯದಲ್ಲಿ ಆಳವಾದ ಪಾತಾಳದ ಕರಾಳ ನೋವನ್ನು ಅನುಭವಿಸಿದ್ದಾರೆ. ಉರಿಯುವ ಬಿಸಿಲಿನಲ್ಲಿ, ಉರಿಯುವ ಎಲೆಗಳಂತೆ, ಬೂದಿಯ ಕಣಗಳಂತೆ ನೋವನ್ನು ಬಾಲಕರು ಉಂಡಿದ್ದಾರೆ. ಗುಡಿಗೋಪುರದ ಬಣ್ಣಗಳಂತೆ ಇತರರಿಗೆ ರಕ್ಷಣೆ ನೀಡಿದ ಬಾಲಕರು ಚಳಿಯನ್ನು ತಡೆಯದೆ ಕುಸಿದಿದ್ದಾರೆ ಎಂದು ಹೇಳುವ ಸಂದರ್ಭ ಇದಾಗಿದೆ.

18. ಪ್ರಸ್ತುತ ಸಾಲನ್ನು ಡಾ. ಸಿದ್ದಲಿಂಗಯ್ಯನವರು ಬರೆದಿರುವ 'ಮೆರವಣಿಗೆ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗಳು' ಪದ್ಯಭಾಗದಿಂದ ಆರಿಸಲಾಗಿದೆ.

    ಈ ಮಾತನ್ನು ಕವಿ ದಲಿತ ಬಾಲಕರ ಜೀವನದ ಬವಣೆಯನ್ನು ಕುರಿತು ಹೇಳಿದ್ದಾರೆ. ಬಾಲಕರ ಹಾಡು ನೋವಿನ ಹಾಡಾಗಿದೆ. ನಾಡು ಕತ್ತಲಿನ ನಾಡಾಗಿದೆ. ಏಕೆಂದರೆ ಇವರು ಬಾಳುತ್ತಿರುವ ನಾಡಿನಲ್ಲಿ ಹೊತ್ತು ತಿಳಿಯುತ್ತಿಲ್ಲ. ದಿಕ್ಕೂ ಸಹ ಕಾಣಿಸುತ್ತಿಲ್ಲ. ಕವಲೊಡೆದ

ದಾರಿಯಲ್ಲಿ ಎಲ್ಲಿಗೆ ಹೋಗಬೇಕು?, ಹೇಗೆ ಹೋಗಬೇಕೆಂದು? ತಿಳಿಯದೇ, ಬೆಳಕನ್ನು ಹುಡುಕುತ್ತಾ ಇದ್ದಾರೆಂದು ಹೇಳುವ ಸಂದರ್ಭ ಇದಾಗಿದೆ.

**ಮೌಲ್ಯವನ್ನಾಧರಿಸಿ ಸಾರಾಂಶ;**

ಅಂಶಗಳನ್ನಾಧರಿಸಿದ ವಿಷಯಾಂಶಕ್ಕೆ 02 ಅಂಕಗಳು
ಮೌಲ್ಯ, ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 03 ಅಂಕಗಳು

19. ಪಸ್ತುತ ಪದ್ಯಭಾಗವನ್ನು ಡಾ. ಸಿದ್ಧಲಿಂಗಯ್ಯನವರು ಬರೆದಿರುವ 'ಮೆರವಣಿಗೆ ಎಂಬ ಕೃತಿಯಿಂದ ಆಯ್ದ 'ಹಕ್ಕಿಗಳು' ಪದ್ಯದಿಂದ ಆರಿಸಲಾಗಿದೆ. ಕವಿ ದಲಿತ ಬಾಲಕರ ಜೀವನದ ಬವಣೆಯನ್ನು ಕುರಿತು ಈ ಪದ್ಯಭಾಗದಲ್ಲಿ ಹೇಳಿದ್ದಾರೆ. ಬಾಲಕರು ಓದು, ಬರಹವನ್ನು ಕಲಿಯಲಾಗದೆ ಮೇಲ್ಜಾತಿಯವರ ಮನೆಯಲ್ಲಿ ಜೀತವನ್ನು ಮಾಡುತ್ತಾ, ಅವರ ಎಂಜಲನ್ನು ತೊಳೆಯುತ್ತಿದ್ದಾರೆ. ಗಂಜಲವನ್ನು ಬಳಿಯುವ ಕೆಲಸ ಮಾಡುತ್ತಾರಾದರೂ ಹೊಟ್ಟೆ ತುಂಬ ಅವರಿಗೆ ಗಂಜಿಗೂ ಗತಿಯಿಲ್ಲದಂತಾಗಿದೆ ಎಂದು ಕವಿ ಹೇಳಿದ್ದಾರೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪಠ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

20. ದಲಿತ ಬಾಲಕರು ದುಡಿಮೆಗಾಗಿ ಬೆಟ್ಟವನ್ನು ಹತ್ತಿ, ಬೆಟ್ಟವನ್ನು ಇಳಿದು ಆಳವಾದ ಪಾತಾಳದ ಕರಾಳ ನೋವನ್ನು ಅನುಭವಿಸಿದ್ದಾರೆ. ಅವರು ಕಾಡುಗಳಲ್ಲಿ ಕುರಿಗಳನ್ನು ಕಾಯುತ್ತಾರೆ. ದನಗಳನ್ನು ಮೇಯಿಸುತ್ತಾರೆ. ಆದರೆ ಅವುಗಳ ಹಾಲನ್ನು ಕುಡಿಯುವ ಸೌಭಾಗ್ಯ ಅವರಿಗಿಲ್ಲ. ಗಿಡಗಳ ಜೊತೆಯಲ್ಲಿ ಬೆಳೆಯುತ್ತಾರೆ. ಶಾಲೆಗೆ ಹೋಗಿ ಓದುವ, ಬರೆಯುವ ಭಾಗ್ಯದಿಂದ ವಂಚಿತರಾಗಿದ್ದಾರೆ. ಎಲ್ಲರ ಎಂಜಲನ್ನು ತೊಳೆದು ಗಂಜಲವನ್ನು ಬಳಿಯುತ್ತಾರೆ. ಆದರೆ ಅವರಿಗೆ ಹೊಟ್ಟೆ ತುಂಬುವಷ್ಟು ಗಂಜಿಯು ಕೂಡ ದೊರೆಯುವುದಿಲ್ಲ. ಗುಡಿಗೋಪುರದ ಬಣ್ಣಗಳಂತೆ ಪರರಿಗೆ ರಕ್ಷಕರಾಗಿದ್ದಾರೆ. ಅವರನ್ನು ರಕ್ಷಿಸಿಕೊಳ್ಳಲಾಗದೆ, ಚಳಿಯನ್ನು ತಡೆಯಲಾಗದೆ ಕುಸಿಯುತ್ತಿದ್ದಾರೆ. ಇವರುಗಳ ಬದುಕು ಉರಿ ಬಿಸಿಲಿನಲ್ಲಿ ಉರಿಯುವ ಎಲೆಗಳಂತೆ, ಅದು ಉರಿದು ಬೂದಿಯ ಕಣವಾಗುತ್ತಿದೆ. ಇವರ ಬದುಕೆಂಬ ಹೂವು ಅರಳುವ ಮೊದಲೆ ಬಾಡಿ, ಒಣಗಿ ಹೋಗುತ್ತಿದೆ. ಇವರು ಕಂಡ ಬಣ್ಣದ ಕನಸುಗಳಾವುವು ನೆರವೇರಲಾರವು. ಇವರ ಸಂಪೂರ್ಣ ಬದುಕು ನೋವಿನ ಹಾಡಾಗಿದೆ. ಇವರ ಬದುಕು ಕತ್ತಲೆಯ ನಾಡಿನಂತಾಗಿದೆ. ಅಲ್ಲಿ ಇವರಿಗೆ ಹೊತ್ತಿನ ಅರಿವಾಗುತ್ತಿಲ್ಲ. ದಿಕ್ಕು ಕಾಣಿಸುತ್ತಿಲ್ಲ ಕವಲು ದಾರಿಯಲ್ಲಿ ನಿಂತು, ಎಲ್ಲಿ

ಹೋಗಬೇಕೆಂಬುದನ್ನು ಅರಿಯಲಾರದ ಪಯಣಿಗರು ಇವರಾಗಿದ್ದಾರೆ. ಇವರ ಬದುಕು ಕತ್ತಲೆಂಬ ನಾಡಿನಲ್ಲಿ ಬೆಳಕನ್ನು ಹುಡುಕುವ ಪಕ್ಷಿಗಳಂತಾಗಿದೆ ಎಂದು ಕವಿ ಹೇಳಿದ್ದಾರೆ.

21. ಡಾ. ಸಿದ್ಧಲಿಂಗಯ್ಯನವರು ಹಕ್ಕಿಗಳು ಪದ್ಯದಲ್ಲಿ ದಲಿತ ಬಾಲಕರು ಈ ಸಮಾಜದಿಂದ ಹೇಗೆ ನಿರ್ಲಕ್ಷ್ಯಕ್ಕೆ ಹಾಗೂ ತುಳಿತಕ್ಕೆ ಒಳಗಾಗುತ್ತಿದ್ದಾರೆಂದು ಮನ ಮಿಡಿಯುವಂತೆ ಚಿತ್ರಿಸಿದ್ದಾರೆ.

ಹಕ್ಕಿಗಳು ಕವಿತೆಯಲ್ಲಿ ಕುರಿದನಗಳನ್ನು ಕಾಯ್ದು ಬಾಲಕರಿಗೆ ಕುಡಿಯಲು ಹಾಲು ಸಿಗಲಿಲ್ಲ. ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ. ಎಂಜಲು ತೊಳೆದು, ಗಂಜಲ ಬಳಿದವರಿಗೆ ಕುಡಿಯಲು ಗಂಜಿಯ ಭಾಗ್ಯ ಸಿಗಲಿಲ್ಲ. ಇನ್ನು ಮುಂತಾದ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ವರ್ಣಿಸಲಾಗಿದೆ.

ನೋವುಂಡ ಬಾಲಕರಿಗೆ ಬೆಟ್ಟವನ್ನು ಹತ್ತಿ, ಬೆಟ್ಟವನ್ನು ಇಳಿಯುವ ಅನುಭವವಾಗಿವೆ. ಹತ್ತಿ ಇಳಿಯುವ ಸಮಯದಲ್ಲಿ ಆಳವಾದ ಪಾತಾಳದ ಕರಾಳ ನೋವನ್ನು ಅನುಭವಿಸಿದ್ದಾರೆ. ಉರಿಯುವ ಬಿಸಿಲಿನಲ್ಲಿ, ಉರಿಯುವ ಎಲೆಗಳಂತೆ, ಬೂದಿಯ ಕಣಗಳಂತೆ ನೋವನ್ನು ಬಾಲಕರು ಉಂಡಿದ್ದಾರೆ. ಗುಡಿಗೋಪುರದ ಬಣ್ಣಗಳಂತೆ ಇತರರಿಗೆ ರಕ್ಷಣೆ ನೀಡಿದ ಬಾಲಕರು ಚಳಿಯನ್ನು ತಡೆಯದೆ ಕುಸಿದಿದ್ದಾರೆ.

ಬಾಲಕರ ಹಾಡು ನೋವಿನ ಹಾಡಾಗಿದೆ. ನಾಡು ಕತ್ತಲಿನ ನಾಡಾಗಿದೆ. ಏಕೆಂದರೆ ಇವರು ಬಾಳುತ್ತಿರುವ ನಾಡಿನಲ್ಲಿ ಹೊತ್ತು ತಿಳಿಯುತ್ತಿಲ್ಲ. ದಿಕ್ಕೂ ಸಹ ಕಾಣಿಸುತ್ತಿಲ್ಲ. ಕವಲೊಡೆದ ದಾರಿಯಲ್ಲಿ ಎಲ್ಲಿಗೆ ಹೋಗಬೇಕು?, ಹೇಗೆ ಹೋಗಬೇಕೆಂದು? ತಿಳಿಯದೇ ಬೆಳಕನ್ನು ಹುಡುಕುತ್ತಾ ಇದ್ದಾರೆ ಎಂದು ಕವಿ ಹೇಳಿದ್ದಾರೆ.

## 8. ಗೌರವಿಸು ಜೀವನವ

**ಬಹು ಆಯ್ಕೆ ಪ್ರಶ್ನೆಗಳು;**

1. (ಬಿ) ಹುಲ್ಲು
2. (ಡಿ) ತೃಣ
3. (ಸಿ) ಅವಿವೇಕ
4. (ಎ) ಗುಣ
5. (ಬಿ) ಸೂರ್ಯ

**ಒಂದು ಅಂಕದ ಪ್ರಶ್ನೆಗಳು;**

6. ಡಿವಿಜಿಯವರು ಜೀವನವನ್ನು ಮತ್ತು ಚೇತನವನ್ನು ಗೌರವಿಸಬೇಕು ಎಂದಿದ್ದಾರೆ.
7. ನಮ್ಮ ದೇಹ, ಮನಸ್ಸು, ಚೇತನ ಶುದ್ಧವಾಗಿದ್ದು, ನಾವು ಮಾಡುವ ಕೆಲಸವೂ ಶುದ್ಧವಾಗಿದ್ದರೆ ಅದು ಆತ್ಮೋನ್ನತಿಗೆ ದಾರಿ ಎಂದು ಹೇಳಿದ್ದಾರೆ.

8. ಜಗತ್ತು ನನ್ನದಲ್ಲ. ನಾನೇನು ಶಾಶ್ವತವಲ್ಲವೆಂಬ ಭಾವವನ್ನು ಬಿಟ್ಟು ಬದುಕಿದರೆ ಅದು ಆತ್ಮೋನ್ನತಿಗೆ ಕಾರಣವಾಗುತ್ತದೆ. ಹಾಗಾಗಿ ನಾವು ಜೀವನ ಮತ್ತು ಚೇತನವನ್ನು ಗೌರವಿಸಬೇಕು.
9. ಹುಲ್ಲಿನ ಹಸಿರನ್ನು ಕಾಣುವುದು ಕಣ್ಣಿನ ಪುಣ್ಯ ಎಂದು ಕವಿ ಹೇಳಿದ್ದಾರೆ.
10. ಡಿವಿಜಿಯವರು ಮಾನವ ಮೂಲೆಯನ್ನು ಸೇರದೆ ವಿಸ್ತಾರವಾಗಿ, ಹೃದಯ ವೈಶಾಲ್ಯದಿಂದ ಬಾಳಬೇಕು ಎಂದಿದ್ದಾರೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

11. ಮನುಷ್ಯ ಈ ಜೀವನವನ್ನು ಅದಕ್ಕೆ ಮೂಲವಾಗಿರುವ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು. ಇಲ್ಲಿ ನಾನು ಶಾಶ್ವತವಾಗಿರುವುದಿಲ್ಲವೆಂದು ಭಾವವನ್ನು ತೊರೆದು ಜೀವಿಸದಾಗ ಮಾತ್ರ ಜೀವನ ಸಮೃದ್ಧವಾಗಿರುತ್ತದೆ ಎಂದು ಡಿವಿಜಿಯವರು ಹೇಳಿದ್ದಾರೆ.
12. ಜಗತ್ತಿನಲ್ಲಿ ಅನೇಕ ಅಚ್ಚರಿಗಳಿವೆ. ಪ್ರತಿ ಅಚ್ಚರಿಗೆ ಕಾರಣವೊಂದೇ ಇರಲು ಸಾಧ್ಯವಿಲ್ಲ. ಹಸಿರಾದ ಹುಲ್ಲಿಗೆ ಬೇರು, ಮಣ್ಣು, ಸೂರ್ಯ, ಚಂದ್ರರ ಬೆಳಕು, ನೀರು ಈ ಎಲ್ಲಾ ಅಂಶಗಳು ಕಾರಣವಾಗುತ್ತದೆ. ಮನುಷ್ಯ ಅದನ್ನು ನೋಡಿ ಸಂತಸ ಪಡುವುದು ಅವನ ಕಣ್ಣಿನ ಪುಣ್ಯ ಎಂದು ಡಿವಿಜಿಯವರು ಹೇಳಿದ್ದಾರೆ.
13. ಒಮ್ಮೆ ಹೂದೋಟದ ಸೌಂದರ್ಯವನ್ನು, ಇನ್ನೊಮ್ಮೆ ಗೆಳೆಯರ ಕೂಟದೊಂದಿಗೆ, ಮಗದೊಮ್ಮೆ ಸಂಗೀತವನ್ನು ಆಲಿಸುತ್ತಾ, ಶಾಸ್ತ್ರವನ್ನು ಮನನ ಮಾಡಿಕೊಳ್ಳುತ್ತಾ, ಸಂಸಾರದ ಕಷ್ಟಸುಖಗಳನ್ನು ಅನುಭವಿಸುತ್ತಾ, ಮತ್ತೊಮ್ಮೆ ಮೌನವಾಗಿ ಧ್ಯಾನಿಸುತ್ತಾ ಹೀಗೆ ಯಾವ ಸಂದರ್ಭದಲ್ಲಾದರೂ ಸರಿ. ಎಲ್ಲವೂ ದೈವದಿಚ್ಚೆಯಂತೆ ನಡೆಯುತ್ತದೆ. ಆದ್ದರಿಂದ ಯಾವುದೇ ಕಾರ್ಯದಲ್ಲಿ ತೊಡಗಿದ್ದರೂ ಬ್ರಹ್ಮಾನುಭೂತಿಯನ್ನು ಅನುಭವಿಸಬೇಕು. ಬ್ರಹ್ಮಾನಂದವನ್ನು ಹೊಂದಬೇಕು ಎಂದು ಡಿವಿಜಿಯವರು ಹೇಳಿದ್ದಾರೆ.
14. ಡಿವಿಜಿಯವರ ಪ್ರಕಾರ ವಿಶಾಲವಾದ ಈ ಜೀವನದಲ್ಲಿ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬಾಳಬೇಕು. ನಾವು ಕತ್ತಲೆಯ ಮೂಲೆಯನ್ನು ಸೇರದೆ ಸೂರ್ಯನ ಅನುಗ್ರಹದಿಂದ ನಿತ್ಯ ನೂತನವಾದ ಜೀವನ ಸತ್ತ್ವವನ್ನು ಅನುಭವಿಸುತ್ತಾ ಕಳೆದರೆ ಮೃತ್ಯುವು ನಮಗೆ ಅಲ್ಪವಾಗಿ ಕಾಣುತ್ತದೆ.

**ಕವಿಯ ಪರಿಚಯ;**

ಜನ್ಮಸ್ಥಳ, ಕಾಲ 01 ಅಂಕ

ಕೃತಿ, ಬಿರುದು/ಪ್ರಶಸ್ತಿ 01 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 01 ಅಂಕ

ಒಟ್ಟು 03 ಅಂಕಗಳು

15. ಡಿ ವಿ ಗುಂಡಪ್ಪರವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಎಂದು. ಇವರ 1887 ರಲ್ಲಿ ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿ ಜನಿಸಿದರು. ಇವರು ಮಂಕುತಿಮ್ಮನ ಕಗ್ಗ, ಮರುಳು ಮುನಿಯನ ಕಗ್ಗ, ಜ್ಞಾಪಕ ಚಿತ್ರ ಶಾಲೆ, ಅಂತಃಪುರದ ಗೀತೆಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾಲಯವು ಗೌರವ ಡಿ ಲಿಟ್ ಪದವಿ ನೀಡಿ ಗೌರವಿಸಿದೆ. ಇವರು 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಸಂದರ್ಭ ಮತ್ತು ಸ್ವಾರಸ್ಯ;**

ಆಯ್ಕೆ 01 ಅಂಕ

ಸಂದರ್ಭದ ವಿವರಣೆ 01 ಅಂಕ

ಸ್ವಾರಸ್ಯಕ್ಕೆ 01 ಅಂಕ

ಒಟ್ಟು 03 ಅಂಕಗಳು

16. ಪ್ರಸ್ತುತ ಸಾಲನ್ನು ಡಿವಿಜಿಯವರು ಬರೆದಿರುವ 'ಮಂಕುತಿಮ್ಮನ ಕಗ್ಗ' ಎಂಬ ಕೃತಿಯಿಂದ ಆಯ್ದ 'ಗೌರವಿಸು ಜೀವನವ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ಡಿವಿಜಿಯವರು ಓದುಗಳಿಗೆ ಹೇಳಿದ್ದಾರೆ. ಮನುಷ್ಯ ಈ ಜೀವನವನ್ನು ಅದಕ್ಕೆ ಮೂಲವಾಗಿರುವ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು. ಇಲ್ಲಿ ನಾನು ಶಾಶ್ವತವಾಗಿರುವುದಿಲ್ಲವೆಂಬ ಭಾವವನ್ನು ತೊರೆದು, ಜೀವಿಸಿದಾಗ ಮಾತ್ರ ಜೀವನ ಸಮೃದ್ಧವಾಗಿರುತ್ತದೆ ಎಂದು ಡಿವಿಜಿಯವರು ಹೇಳುವ ಸಂದರ್ಭ ಇದಾಗಿದೆ.

17. ಪ್ರಸ್ತುತ ಸಾಲನ್ನು ಡಿವಿಜಿಯವರು ಬರೆದಿರುವ 'ಮಂಕುತಿಮ್ಮನ ಕಗ್ಗ' ಎಂಬ ಕೃತಿಯಿಂದ ಆಯ್ದ 'ಗೌರವಿಸು ಜೀವನವ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ಡಿವಿಜಿಯವರು ಓದುಗಳಿಗೆ ಹೇಳಿದ್ದಾರೆ. ಜಗತ್ತಿನಲ್ಲಿ ಅನೇಕ ಅಚ್ಚರಿಗಳಿವೆ. ಪ್ರತಿ ಅಚ್ಚರಿಗೆ ಕಾರಣವೊಂದೇ ಇರಲು ಸಾಧ್ಯವಿಲ್ಲ. ಹಸಿರಾದ ಹುಲ್ಲಿಗೆ ಬೇರು, ಮಣ್ಣು, ಸೂರ್ಯ, ಚಂದ್ರರ ಬೆಳಕು, ನೀರು ಈ ಎಲ್ಲಾ ಅಂಶಗಳು ಕಾರಣವಾಗುತ್ತವೆ. ಮನುಷ್ಯ ಅದನ್ನು ನೋಡಿ ಸಂತಸ ಪಡುವುದು ಅವನ ಕಣ್ಣಿನ ಪುಣ್ಯ. ಅದೇ ರೀತಿ ಜಗತ್ತಿನ ಸೋಜಿಗಕ್ಕು, ಅದರ ಗುಣಕ್ಕು ಒಂದೇ ಅಂಶ ಕಾರಣವಾಗಲಾರದು. ಹಾಗಾಗಿ ಸೋಜಿಗಗಳಿಗೆ ಕಾರಣ ಹುಡುಕದೆ ಬದುಕಿನ ಪ್ರತಿ ಕ್ಷಣವನ್ನು ತನ್ಮಯತೆಯಿಂದ ಅನುಭವಿಸಬೇಕೆಂದು ಹೇಳುವ ಸಂದರ್ಭ ಇದಾಗಿದೆ.

18. ಪ್ರಸ್ತುತ ಸಾಲನ್ನು ಡಿವಿಜಿಯವರು ಬರೆದಿರುವ 'ಮಂಕುತಿಮ್ಮನ ಕಗ್ಗ' ಎಂಬ ಕೃತಿಯಿಂದ ಆಯ್ದ 'ಗೌರವಿಸು ಜೀವನವ' ಎಂಬ ಪದ್ಯದಿಂದ ಆರಿಸಲಾಗಿದೆ.

    ಈ ಮಾತನ್ನು ಡಿವಿಜಿಯವರು ಓದುಗಳಿಗೆ ಹೇಳಿದ್ದಾರೆ. ಒಮ್ಮೆ ಹೂದೋಟದ ಸೌಂದರ್ಯವನ್ನು, ಇನ್ನೊಮ್ಮೆ ಗೆಳೆಯರ ಕೂಟದೊಂದಿಗೆ, ಮಗದೊಮ್ಮೆ ಸಂಗೀತವನ್ನು ಆಲಿಸುತ್ತಾ, ಶಾಸ್ತ್ರವನ್ನು ಮನನ ಮಾಡಿಕೊಳ್ಳುತ್ತಾ, ಸಂಸಾರದ ಕಷ್ಟಸುಖಗಳನ್ನು

ಅನುಭವಿಸುತ್ತಾ, ಮತ್ತೊಮ್ಮೆ ಮೌನವಾಗಿ ಧ್ಯಾನಿಸುತ್ತಾ ಹೀಗೆ ಯಾವ ಸಂದರ್ಭದಲ್ಲಾದರೂ ಸರಿ. ಎಲ್ಲವೂ ದೈವದಿಚ್ಛೆಯಂತೆ ನಡೆಯುತ್ತದೆ. ಆದ್ದರಿಂದ ಯಾವುದೇ ಕಾರ್ಯದಲ್ಲಿ ತೊಡಗಿದ್ದರೂ ಬ್ರಹ್ಮಾನುಭೂತಿಯನ್ನು ಅನುಭವಿಸಬೇಕು. ಬ್ರಹ್ಮಾನಂದವನ್ನು ಹೊಂದಬೇಕು ಎಂದು ಡಿವಿಜಿಯವರು ಹೇಳುವ ಸಂದರ್ಭ ಇದಾಗಿದೆ.

19. ಪ್ರಸ್ತುತ ಸಾಲನ್ನು ಡಿವಿಜಿಯವರು ಬರೆದಿರುವ 'ಮಂಕುತಿಮ್ಮನ ಕಗ್ಗ' ಎಂಬ ಕೃತಿಯಿಂದ ಆಯ್ದ 'ಗೌರವಿಸು ಜೀವನವ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಡಿವಿಜಿಯವರು ಓದುಗಳಿಗೆ ಹೇಳಿದ್ದಾರೆ. ವಿಶಾಲವಾದ ಈ ಜೀವನದಲ್ಲಿ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬಾಳಬೇಕು. ನಾವು ಕತ್ತಲೆಯ ಮೂಲೆಯನ್ನು ಸೇರದೆ ಸೂರ್ಯನ ಅನುಗ್ರಹದಿಂದ ನಿತ್ಯ ನೂತನವಾದ ಜೀವನ ಸತ್ತ್ವವನ್ನು ಅನುಭವಿಸುತ್ತಾ ಕಳೆದರೆ ಮೃತ್ಯುವು ನಮಗೆ ಅಲ್ಪವಾಗಿ ಕಾಣುತ್ತದೆ ಎಂದು ಡಿವಿಜಿಯವರು ಹೇಳುವ ಸಂದರ್ಭ ಇದಾಗಿದೆ.

**ಪದ್ಯಭಾಗವನ್ನು ಪೂರ್ಣಗೊಳಿಸುವುದು;** (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 01 ಅಂಕ)

20. ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನ ಸಮೃದ್ಧಿಗೋಸುವ ನಿನಗೆ
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

ಅಂಶಗಳನ್ನಾಧರಿಸಿದ ಪರ್ಯಾಂಶಕ್ಕೆ 03 ಅಂಕಗಳು
ಭಾಷಾಶೈಲಿಗೆ, ಪದಬಂಧಗಳಿಗೆ 01 ಅಂಕ
ಒಟ್ಟು 04 ಅಂಕಗಳು

21. 'ಗೌರವಿಸು ಜೀವನವ' ಕವಿತೆಯಲ್ಲಿ ಅಂತರ್ಗತವಾಗಿರುವ ಕವಿಯ ಭಾವನೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ. ಮನುಷ್ಯ ಈ ಜೀವನವನ್ನು, ಅದಕ್ಕೆ ಮೂಲವಾಗಿರುವ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು. ಇಲ್ಲಿ ನಾನು ಶಾಶ್ವತವಾಗಿರುವುದಿಲ್ಲವೆಂದು ಭಾವವನ್ನು ತೊರೆದು ಜೀವಿಸಿದಾಗ ಮಾತ್ರ ಜೀವನ ಸಮೃದ್ಧವಾಗಿರುತ್ತದೆ ಎಂದು ಹೇಳಿದ್ದಾರೆ.

ಜಗತ್ತಿನಲ್ಲಿ ಅನೇಕ ಅಚ್ಚರಿಗಳಿವೆ. ಪ್ರತಿ ಅಚ್ಚರಿಗೆ ಕಾರಣವೊಂದೇ ಇರಲು ಸಾಧ್ಯವಿಲ್ಲ. ಹಸಿರಾದ ಹುಲ್ಲಿಗೆ ಬೇರು, ಮಣ್ಣು, ಸೂರ್ಯ, ಚಂದ್ರರ ಬೆಳಕು, ನೀರು ಈ ಎಲ್ಲಾ ಅಂಶಗಳು ಕಾರಣವಾಗುತ್ತವೆ. ಮನುಷ್ಯ ಅದನ್ನು ನೋಡಿ ಸಂತಸ ಪಡುವುದು ಅವನ ಕಣ್ಣಿನ ಪುಣ್ಯ ಎಂದು ಕವಿ ಡಿವಿಜಿಯವರು ಹೇಳಿದ್ದಾರೆ.

ಒಮ್ಮೆ ಹೂದೋಟದ ಸೌಂದರ್ಯವನ್ನು, ಇನ್ನೊಮ್ಮೆ ಗೆಳೆಯರ ಕೂಟದೊಂದಿಗೆ, ಮಗದೊಮ್ಮೆ ಸಂಗೀತವನ್ನು ಆಲಿಸುತ್ತಾ, ಶಾಸ್ತ್ರವನ್ನು ಮನನ ಮೂಡಿಕೊಳ್ಳುತ್ತಾ, ಸಂಸಾರದ ಕಷ್ಟಸುಖಗಳನ್ನು ಅನುಭವಿಸುತ್ತಾ, ಮತ್ತೊಮ್ಮೆ ಮೌನವಾಗಿ ಧ್ಯಾನಿಸುತ್ತಾ ಹೀಗೆ ಯಾವ ಸಂದರ್ಭದಲ್ಲಾದರೂ ಸರಿ. ಎಲ್ಲವೂ ದೈವದಿಚ್ಛೆಯಂತೆ ನಡೆಯುತ್ತದೆ. ಆದ್ದರಿಂದ ಯಾವುದೇ ಕಾರ್ಯದಲ್ಲಿ ತೊಡಗಿದ್ದರೂ ಬ್ರಹ್ಮಾನುಭೂತಿಯನ್ನು ಅನುಭವಿಸಬೇಕು. ಬ್ರಹ್ಮಾನಂದವನ್ನು ಹೊಂದಬೇಕು ಎಂದು ಕವಿ ಡಿವಿಜಿಯವರು ಹೇಳಿದ್ದಾರೆ.

ಕವಿ ಡಿವಿಜಿಯವರ ಪ್ರಕಾರ ವಿಶಾಲವಾದ ಈ ಜೀವನದಲ್ಲಿ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬಾಳಬೇಕು. ನಾವು ಕತ್ತಲೆಯ ಮೂಲೆಯನ್ನು ಸೇರದೆ ಸೂರ್ಯನ ಅನುಗ್ರಹದಿಂದ ನಿತ್ಯ ನೂತನವಾದ ಜೀವನ ಸತ್ತ್ವವನ್ನು ಅನುಭವಿಸುತ್ತಾ ಕಳೆದರೆ ಮೃತ್ಯುವು ನಮಗೆ ಅಲ್ಪವಾಗಿ ಕಾಣುತ್ತದೆ.

## ಪಠ್ಯ ಪೂರಕ ಅಧ್ಯಯನ

## 3. ಸರ್ ಎಂ ವಿಶ್ವೇಶ್ವರಯ್ಯ

**ಒಂದು ಅಂಕದ ಪ್ರಶ್ನೆಗಳು;**

1. ಸರ್ ಎಂ ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ 1861 ರ ಸೆಪ್ಟೆಂಬರ್ 15 ರಂದು ಜನಿಸಿದರು.
2. ಸರ್ ಎಂ ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ.
3. ಸರ್ ಎಂ ವಿಶ್ವೇಶ್ವರಯ್ಯನವರ ಗುರುಭಕ್ತಿಯನ್ನು ಮೆಚ್ಚುತ್ತಿದ್ದ ಗುರುಗಳು ಕೃಷ್ಣಗಿರಿ ರಾಘವೇಂದ್ರರಾಯರು.
4. ಸರ್ ಎಂ ವಿಶ್ವೇಶ್ವರಯ್ಯನವರಿಗೆ ಭಾರತ ಸರ್ಕಾರ ನೀಡಿದ ಅತ್ಯುತ್ತಮ ಪ್ರಶಸ್ತಿ ಭಾರತ ರತ್ನ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು;**

5. ಸರ್ ಎಂ ವಿಶ್ವೇಶ್ವರಯ್ಯನವರ ಸಮಕಾಲೀನರು ಯಾರೆಂದರೆ ಭಾರತದ ಮಹಾಪುರುಷರಾದ ಜವಾಹರಲಾಲರ ತಂದೆ ಮೋತಿಲಾಲ್ ನೆಹರೂ, ಬನಾರಸ್ ವಿಶ್ವವಿದ್ಯಾಲಯದ ಸ್ಥಾಪಕ ಪಂಡಿತ ಮದನಮೋಹನ ಮಾಳವೀಯ, ನೋಬೆಲ್ ಪ್ರಶಸ್ತಿ ವಿಜೇತ, ಕವಿ ಸಾರ್ವಭೌಮ ರವೀಂದ್ರನಾಥ ಠಾಕೂರರು.
6. ವಿಶ್ವೇಶ್ವರಯ್ಯನವರಿಗೆ ಗುರುಗಳಲ್ಲಿ ಭಯಭಕ್ತಿ. ಪೂಜ್ಯಭಾವನೆ ಇದ್ದವು. ಉಪಾಧ್ಯಾಯರಿಗೂ ಬುದ್ಧಿವಂತ ಶಿಷ್ಯನಲ್ಲಿ ಪ್ರೀತಿ ಇತ್ತು. ಅವರು ತನ್ನ ಶಿಷ್ಯ ತುಂಬ ಬುದ್ಧಿವಂತ ಎಂದು ಎಲ್ಲರಲ್ಲೂ ಹೇಳಿಕೊಳ್ಳುತ್ತಿದ್ದರು. ಹೀಗೆ ಶಿಷ್ಯನಲ್ಲಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ ಉಪಾಧ್ಯಾಯರಲ್ಲಿ ಕೃಷ್ಣಗಿರಿ ರಾಘವೇಂದ್ರರಾಯರೂ ಒಬ್ಬರು.

7. ವಿಶ್ವೇಶ್ವರಯ್ಯನವರಿಗೆ ಜೀವನ ಆಚಂದ್ರಾರ್ಕ ಕೀರ್ತಿ ಗಳಿಸಿಕೊಟ್ಟಿತ್ತು. ಅನಪೇಕ್ಷಿತವಾಗಿ ಅವರಿಗೆ ದೊರೆತ ಬಿರುದು ಬಾವಲಿಗಳು ಪುರಸ್ಕಾರಗಳು ಇದಕ್ಕೆ ಸಾಕ್ಷಿ ಆಗಿವೆ. ವಿದ್ಯಾರ್ಥಿ ಜೀವನದಲ್ಲಿ ದೊರೆತ ಪದಕಗಳು, ಬ್ರಿಟಿಷ್ ಪ್ರಭುತ್ವದಿಂದ ಸಿ ಪಿ ಇ ಮತ್ತು ಕೆ ಸಿ ಐ ಇ ಬಿರುದು, ಕಲ್ಕತ್ತ, ಪಾಟ್ನ, ಅಲಹಬಾದ್, ಜಾಧವಪುರ, ಬೊಂಬಾಯಿ, ವಾರಣಾಸಿ, ಆಂಧ್ರ, ಮೈಸೂರು ವಿಶ್ವವಿದ್ಯಾಲಯಗಳಿಂದ ಗೌರವ ಪದವಿಗಳು, ಭಾರತ ಸರ್ಕಾರ ನೀಡಿದ ಅತ್ಯುತ್ತಮ ಪ್ರಶಸ್ತಿ ಭಾರತ ರತ್ನ ಪ್ರಶಸ್ತಿಗಳು ಇವರ ಕೀರ್ತಿಯು ತುಂಬಾ ಅಪಾರವಾದದ್ದು ಎಂದು ಉದಾಹರಿಸುತ್ತವೆ.
8. ವಿಶ್ವೇಶ್ವರಯ್ಯನವರು ಹುಟ್ಟಿನಿಂದ ಬಡವರು. ಮನೆತನದಿಂದ ಸಭ್ಯರು. ಬೆಳವಣಿಗೆಯಿಂದ ಸಂಯಮಿ, ಸ್ವಭಾವದಿಂದ ಸಜ್ಜನರು, ಅಜಾತಶತ್ರು, ಪರೋಪಕಾರಿ, ವೃತ್ತಿಯಿಂದ ಎಂಜಿನಿಯರ್, ಸಂದರ್ಭದಿಂದ ದಿವಾನ್, ಮನೋಧರ್ಮದಿಂದ ವಿಜ್ಞಾನಿ, ಶ್ರದ್ಧೆಯಿಂದ ಉದ್ಯಮಿ. ಅವರು ಕೈಗೊಂಡಿದ್ದುದು ಕಠೋರ ವ್ರತ. ಅದನ್ನು ತಪ್ಪದೆ ನಡೆಸುವ ಧೈರ್ಯ, ಸ್ಥೈರ್ಯ, ಸಾಮರ್ಥ್ಯ ಅವರಲ್ಲಿದ್ದವು. ದುಡಿದರೆ ಉದ್ಧಾರ, ದುಡಿಯದಿದ್ದರೆ ವಿನಾಶ ಎಂಬ ಸಂದೇಶದಂತೆ ಸ್ವತಃ ದುಡಿದರು. ನಾಡಿನ ಏಳಿಗೆಗೆ ದುಡಿಯಬೇಕೆಂದು ದುಡಿದು ದೊಡ್ಡವರಾದರು. ಆರೋಗ್ಯವಂತರಾಗಿರಲು ಪ್ರತಿದಿನ ಮೂರು-ನಾಲ್ಕು ಮೈಲಿ ನಡೆಯುವ ಅಭ್ಯಾಸವನ್ನು ಇಟ್ಟುಕೊಂಡಿದ್ದರು.